# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

Sampreethi - Samruddhi | Volume : 5 | Issue : 09 | Jan. 2023 | Pages : 32 | ₹ 20/-
ಸಂಪ್ರೀತಿ ಸಮೃದ್ಧಿ | ಸಂಪುಟ : 5 | ಸಂಚಿಕೆ : 09 | ಜನವರಿ 2023 | ಪುಟಗಳು : 32 | ₹ 20 ರೂ.



# ಮಕರ ಸಂಕ್ರಾಂತಿಯ

ಹಾರ್ದಿಕ ಶುಭಾಶಯಗಳು

|| Jai Sri Gurudev ||



# SJ BGS POLYTECHNIC



(A Venture of Sri Adichunchanagiri Shikshana Trust ®)

(Approved by All India Council for Technical Education, New Delhi &
Recognised by Government of Karnataka)

B G NAGAR, (BGSIT CAMPUS), NAGAMANGALA TALUK, MANDYA DISTRICT.

**COURSES OFFERED:**

- CIVIL ENGINEERING
- MECHANICAL ENGINEERING (General)
- COMPUTER SCIENCE & ENGINEERING
- ELECTRICAL & ELECTRONICS ENGINEERING
- ELECTRONICS & COMMUNICATION ENGINEERING

Eligibility:-
Pass in SSLC or
Equivalent Examination
with 35% aggregate.



**OUR VISION:**

To Impart Quality Education

Transformation of Child through Excellent Education

Child Centered Education

*Hunt Your Dreams*

**Institution Code : 541**



## Salient Features

- Highly Qualified and Experienced Faculty
- Spacious well equipped Class Rooms, Labs, Workshops and Seminar Halls
- Internet Facility
- Hostel Facility for Boys & Girls
- Sports Facility
- Transportation
- Canteen Facility
- Library



## For Admissions, Contact :

**PRINCIPAL**
**SJ BGS POLYTECHNIC,**

BGSIT CAMPUS, BG Nagar (Bellur Cross)
Nagamangala Taluk, Mandya District
Karmataka - 571 448

**E-mail :** ppl.sjbgsp@gmail.com
**Web :** www.sjbgsp.com
**Cell No. :** 9448207483

# ಸಂಪ್ರೀತಿ – ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

ಸಂಪಾದಕೀಯ

**ಜನವರಿ : 2023**

**ಸಂಪುಟ 5, ಸಂಚಿಕೆ 9**

ಸಂಪಾದಕರು

**ಡಾ|| ಸಿ. ನಂಜುಂಡಯ್ಯ**

**ಚಂದಾ ವಿವರ :**

| | |
|---|---|
| 10 ವರ್ಷಕ್ಕೆ | ರೂ.2000/– |
| 05 ವರ್ಷಕ್ಕೆ | ರೂ.1000/– |
| 02 ವರ್ಷಕ್ಕೆ | ರೂ.500/– |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.



ಸಂಪಾದಕರು

**ಸಂಪ್ರೀತಿ – ಸಮೃದ್ಧಿ**

ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ – 562 131.

**#66, ಸಂಪ್ರೀತಿ – ಸದನ**
**ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ,**
**ಮಾಗಡಿ – 562 120 ರಾಮನಗರ ಜಿಲ್ಲೆ.**

ಮುದ್ರಕರು

**ಕಂಪ್ಯೂಟರ್ ವರ್ಲ್ಡ್**
ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
ಮಲ್ಲಿಗೆ ತೋಟ, ಮಾಗಡಿ ರಸ್ತೆ,
ಬೆಂಗಳೂರು – 560 023.

ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಬಹುದು.

sampreethisamruddhi@gmail.com
8971608213

ಸಂಪ್ರೀತಿ - ಸಮೃದ್ಧಿ


## ಹೊಸ ವರ್ಷದ ಶುಭಾಷಯಗಳು

ಹೊಸ ಕನಸು... ಹೊಸ ಹುರುಪು... ಹೊಸ ಭರವಸೆ... ಹೊಸ ಗುರಿ... ಹೊಸ ಸಾಹಸ... ಹೀಗೆ ಹೊಸತನವನ್ನು ಹೊತ್ತು ತರುವ ಖುಷಿಯ ಹೊಸ ವರ್ಷ ಮತ್ತೆ ಬಂದಿದೆ. ಇದು 2022ಕ್ಕೆ ವಿದಾಯ ಹೇಳಿ 2023ನೇ ಇಸವಿಯನ್ನು ಹರುಷದಿಂದ ಸ್ವಾಗತಿಸುವ ಕ್ಷಣ. ಕಳೆದ ವರ್ಷದ ಸುಂದರ ನೆನಪುಗಳನ್ನು ಮೆಲುಕು ಹಾಕುತ್ತಾ, ಜೀವನದ ತಪ್ಪುಗಳನ್ನು ತಿದ್ದಿಕೊಳ್ಳುತ್ತಾ ಹೊಸ ಕನಸುಗಳೊಂದಿಗೆ ಸುಂದರ ಭವಿಷ್ಯದತ್ತ ಹೆಜ್ಜೆ ಇಡುವ ಕ್ಷಣ ಇದಾಗಿದೆ.

ಹೊಸ ವರ್ಷ ಎನ್ನವುದು ಖಾಲಿ ಇರುವ ಒಂದು ಪುಸ್ತಕದಂತೆ, ಅದರಲ್ಲಿ ಸುಂದರ ಕತೆಗಳನ್ನು ಬರೆಯುತ್ತಾ ಹೋದರೆ ಆ ಪುಸ್ತಕದಲ್ಲಿರುವ ಕತೆಗಳೂ ಎಂದೆಂದಿಗೂ ಮನಸ್ಸಿನಿಂದ ಮಾಸಲ್ಲ. ಹೊಸ ವರ್ಷ ಬರೀ ಕ್ಯಾಲೆಂಡರ್ ಬದಲಾಯಿಸುವ ಕ್ಷಣ ಅಲ್ಲ. ನಮ್ಮ ಬದುಕಿನ ಹೊಸ ಹೆಜ್ಜೆಯತ್ತ ಸಾಗುವ ಹೊತ್ತು ಕೂಡಾ ಹೌದು. ಮತ್ತೆ ನಮಗೆ ಅದೇ 365 ದಿನಗಳು ಸಿಗುತ್ತವೆ. ಈ ದಿನಗಳನ್ನು ನಾವು ಹೇಗೆ ಬಳಸಿಕೊಳ್ಳುತ್ತೇವೆ ಎಂಬುದರ ಮೇಲೆ ನಮ್ಮ ಭವಿಷ್ಯ ಇನ್ನಷ್ಟು ಉಜ್ವಲವಾಗುತ್ತದೆ. ಜತೆಗೆ ಕಳೆದ ವರ್ಷದತ್ತ ಒಮ್ಮೆ ಹಿಂತಿರುಗಿ ನೋಡಿ ಅವಲೋಕನ ಮಾಡಿಕೊಳ್ಳುವುದು ಕೂಡಾ ಮುಖ್ಯ. ಈ ಸಿಂಹಾವಲೋಕನ ಕಳೆದ ವರ್ಷದ ನಮ್ಮ ತಪ್ಪುಗಳನ್ನು ಅರಿತುಕೊಳ್ಳಲು, ಆದ ತಪ್ಪನ್ನು ತಿದ್ದಿಕೊಳ್ಳಲು ಅಥವಾ ನಾವು ಭವಿಷ್ಯದಲ್ಲಿ ಇಡಬೇಕಾದ ಹೆಜ್ಜೆಗೆ ದಾರಿಯನ್ನು ತೋರಿಸುವ ಅವಕಾಶದಂತಿರುತ್ತದೆ.

**ಕೆಲವು ಉನ್ನತ ವ್ಯಕ್ತಿಗಳ ಸಂದೇಶ ಹೀಗಿದೆ.**

**ಬಿಲ್ ವಾನ್** – ಹೊಸ ವರ್ಷವನ್ನು ನೋಡಲು ಒಬ್ಬ ಆಶಾವಾದಿ ಮಧ್ಯರಾತ್ರಿಯವರೆಗೂ ಎಚ್ಚರವಾಗಿರುತ್ತಾನೆ. ಒಬ್ಬ ನಿರಾಶಾವಾದಿ ಹಳೆಯ ವರ್ಷವು ನಿರ್ಗಮಿಸುವುದನ್ನು ಖಚಿತಪಡಿಸಿಕೊಳ್ಳಲು ಎಚ್ಚರವಾಗಿರುತ್ತಾನೆ."

**ಮದರ್ ಥೆರೇಸಾ** – ಜೀವನವು ಒಂದು ಅವಕಾಶ, ಅದರಿಂದ ಪ್ರಯೋಜನ ಪಡೆಯಿರಿ. ಜೀವನವು ಸೌಂದರ್ಯವಾಗಿದೆ, ಅದನ್ನು ಮೆಚ್ಚಿಕೊಳ್ಳಿ, ಜೀವನವು ಒಂದು ಕನಸು, ಅದನ್ನು ನನಸಾಗಿಸಿ.

**ಸ್ಟೀವನ್ ಸ್ಪೀಲ್ಬರ್ಗ್** – ನಾವೆಲ್ಲರೂ ಪ್ರತಿ ವರ್ಷವೂ ವಿಭಿನ್ನ ವ್ಯಕ್ತಿಯಾಗಿದ್ದೇವೆ. ನಮ್ಮ ಜೀವನದುದ್ದಕ್ಕೂ ನಾವು ಒಂದೇ ವ್ಯಕ್ತಿ ಎಂಬುದಾಗಿ ನಾನು ಭಾವಿಸುವುದಿಲ್ಲ."

**ಆಲ್ಬರ್ಟ್ ಐನ್‌ಸ್ಟೈನ್** – ಯಾವುದೇ ಪ್ರಮುಖ ಕೆಲಸದ ಭಾಗ ಆರಂಭವಾಗಿದೆ. ಓಂ

**ಹೊಸ ವರ್ಷದ ಹಾರ್ದಿಕ ಶುಭಾಷಯಗಳು**

# ಮಕರ ಸಂಕ್ರಾಂತಿ



ಹಿಂದೂಗಳ ಪವಿತ್ರ ಹಬ್ಬ ಮಕರ ಸಂಕ್ರಾಂತಿ. ಸೂರ್ಯನು ತನ್ನ ಪಥವನ್ನು ಬದಲಿಸುವ ಈ ದಿನವನ್ನು ದೇಶದಾದ್ಯಂತ ವಿವಿಧ ಹೆಸರುಗಳಿಂದ ಆಚರಿಸುತ್ತಾರೆ. ಈ ಹಬ್ಬವು ಸೂರ್ಯ ದೇವನ ಹಬ್ಬವೆಂದು ಪರಿಗಣಿಸಲಾಗಿದ್ದು, ಈ ಹಬ್ಬವನ್ನು ಪ್ರತಿವರ್ಷ ಜನವರಿ 14 ರಂದು ಆಚರಣೆ ಮಾಡಲಾಗುತ್ತದೆ.

ಮಕರ ಸಂಕ್ರಾಂತಿ ಹಬ್ಬ ಒಂದು ಭೌಗೋಳಿಕ ಹಿನ್ನೆಲೆಯನ್ನು ಹೊಂದಿದೆ. ಸೂರ್ಯನು ತನ್ನ ಸ್ಥಾನವನ್ನು ಬದಲಾಯಿಸುವ ಮತ್ತು ಉತ್ತರ ಗೋಳಾರ್ಧದ ಕಡೆಗೆ ಚಲಿಸಲು ಪ್ರಾರಂಭಿಸುವ ದಿನವನ್ನು ಗುರುತಿಸುತ್ತದೆ. ಈ ದಿನಾಂಕದಿಂದ ಜನರು ಹೆಚ್ಚು ಹಗಲುಗಳು ಮತ್ತು ಕಡಿಮೆ ರಾತ್ರಿಗಳನ್ನು ಕಾಣಬಹುದು.

ದೇಶದ ವಿವಿಧ ಭಾಗಗಳಲ್ಲಿ ಹಬ್ಬವನ್ನು ವಿಭಿನ್ನ ರೀತಿಯಲ್ಲಿ ಆಚರಿಸಲಾಗುತ್ತದೆ. ಮಹಾರಾಷ್ಟ್ರದಲ್ಲಿ ಜನರು ಸಿಹಿತಿಂಡಿಗಳನ್ನು ತಯಾರಿಸುತ್ತಾರೆ ಮತ್ತು ಅದನ್ನು ತಮ್ಮ ಸ್ನೇಹಿತರಿಗೆ ಹಂಚುತ್ತಾರೆ, ಈ ಮೂಲಕ ತಮ್ಮ ಸ್ನೇಹಿತರಿಗೆ ಸಿಹಿ ತಿನ್ನಲು ಮತ್ತು ಸಿಹಿಯಾಗಿ ಮಾತನಾಡಲು ಹೇಳುತ್ತಾರೆ. ಅಂದರೆ ಅವರು ಮಕರ ಸಂಕ್ರಾಂತಿಯನ್ನು ಸೌಹಾರ್ದದ ಹಬ್ಬವೆಂದು ಪರಿಗಣಿಸುತ್ತಾರೆ.

ಗುಜರಾತ್‌ನಲ್ಲಿ ಮಕರ ಸಂಕ್ರಾಂತಿಯನ್ನು ಗಾಳಿಪಟಗಳನ್ನು ಹಾರಿಸುವ ಮೂಲಕ ಆಚರಿಸಲಾಗುತ್ತದೆ. ವಾಸ್ತವವಾಗಿ ಇದು ಗಾಳಿಪಟ ಹಾರಿಸುವ ಹಬ್ಬ. ವಿವಿಧ ಗಾಳಿಪಟಗಳ ನಡುವಿನ ಕಾದಾಟವನ್ನು ವೀಕ್ಷಿಸಲು ಜನರು ಛಾವಣಿಯ ಮೇಲೆ ಸೇರುತ್ತಾರೆ. ಒಂದು ಗಾಳಿಪಟ ಇನ್ನೊಂದನ್ನು ಕತ್ತರಿಸಿದಾಗ, ಅಲ್ಲಿನ ಜನರಿಂದ ದೊಡ್ಡ ಸಂತೋಷ ಮತ್ತು ಚಪ್ಪಾಳೆ ಮೊಳಗುತ್ತದೆ. ಈ ದಿನವು ಆಕಾಶದಲ್ಲಿ ಎಲ್ಲಾ ಬಣ್ಣಗಳು ಗಾಳಿಪಟಗಳಿಂದ ತುಂಬಿರುತ್ತದೆ. ಮುಖ್ಯವಾಗಿ ಮಕ್ಕಳು ಕೂಡ ಗಾಳಿಪಟಗಳನ್ನು ಹಾರಿಸುವ ಮೂಲಕ ಮತ್ತು ತಿಳಿ ಹಾಗೂ ಬೆಲ್ಲದಿಂದ ಮಾಡಿದ ಭಕ್ಷ್ಯಗಳನ್ನು ತಿನ್ನುವ ಮೂಲಕ ಈ ಸಂದರ್ಭವನ್ನು ಆನಂದಿಸುತ್ತಾರೆ.

ಈ ಹಬ್ಬಕ್ಕೆ ಧಾರ್ಮಿಕ ಮಹತ್ವವೂ ಇದೆ. ಜನರು ಹೊಸ ಬಟ್ಟೆ ಧರಿಸಿ, ಬಡವರಿಗೆ ದಾನ ಮಾಡಿ ಜೊತೆಗೆ ಸಿಹಿ ಹಂಚಿ ತಿನ್ನುತ್ತಾರೆ. ಈ ದಿನದಂದು ಯುವಕರು ಮತ್ತು ಹಿರಿಯರು ಸಮಾನವಾಗಿ ಕುಳಿತು ಸಂಭ್ರಮಿಸುವ ಸುಸಂದರ್ಭವಾಗಿದೆ.

ಇದು ಋತುವಿನ ಅತ್ಯಂತ ಮಂಗಳಕರ ಸಂದರ್ಭವೆಂದು ಪರಿಗಣಿಸಲಾಗಿದೆ. ಈ ದಿನದಂದು ನದಿಗಳಲ್ಲಿ ಪವಿತ್ರ ಸ್ನಾನ ಮತ್ತು ಸೂರ್ಯ ದೇವರಿಗೆ ಕೃತಜ್ಞತಾ ಪ್ರಾರ್ಥನೆಗಳೊಂದಿಗೆ ಆಚರಿಸಲಾಗುತ್ತದೆ. ಮಕರ ಸಂಕ್ರಾಂತಿಯಂದು ವಾರಣಾಸಿ ಅಥವಾ ಪ್ರಯಾಗ್‌ರಾಜ್‌ನಲ್ಲಿ ಪವಿತ್ರವಾದ ಗಂಗಾ ನದಿಯಲ್ಲಿ ಪವಿತ್ರ ಸ್ನಾನ ಮಾಡುವುದರಿಂದ ನಮ್ಮ ಎಲ್ಲಾ ಪಾಪಗಳನ್ನು ತೊಳೆದುಕೊಳ್ಳುತ್ತೇವೆ ಎಂಬ ನಂಬಿಕೆಯಿದೆ.



## ಮನೆ ಮದ್ದು

### ಬಾಳೆಹಣ್ಣು ಮತ್ತು ಹಾಲು

ಇದನ್ನು ಬನಾನಾ ಮಿಲ್ಕ್ ಶೇಕ್ ಎಂದುಕೊಂಡರೂ ಪರವಾಗಿಲ್ಲ. ಬಾಳೆಹಣ್ಣಿನಲ್ಲಿ ಅಪಾರ ಪ್ರಮಾಣದ ಕ್ಯಾಲೋರಿಗಳು ಕಂಡುಬರುತ್ತವೆ. ದೇಹದ ಶಕ್ತಿಯನ್ನು ತಕ್ಷಣವೇ ಹೆಚ್ಚಾಗಿಸಲು ಇದು ಅನುಕೂಲಕಾರಿಯಾಗಿ ಕೆಲಸ ಮಾಡುತ್ತದೆ.

ಮಕರ ಸಂಕ್ರಾಂತಿಯನ್ನು ವಿವಿಧ ಪ್ರದೇಶಗಳಲ್ಲಿ ವಿಭಿನ್ನವಾಗಿ ಆಚರಿಸಲಾಗುತ್ತದೆ. ಭಕ್ತರು ಪವಿತ್ರ ನದಿಗಳಲ್ಲಿ ಸ್ನಾನ ಮಾಡುತ್ತಾರೆ ಮತ್ತು ಸೂರ್ಯ ದೇವರನ್ನು ಪ್ರಾರ್ಥಿಸುತ್ತಾರೆ. ದಕ್ಷಿಣ ಭಾರತದಲ್ಲಿ ಮಕರ ಸಂಕ್ರಾಂತಿಯನ್ನು ಪೊಂಗಲ್ ಎಂದು ಕರೆಯಲಾಗುತ್ತದೆ. ಪಂಜಾಬ್‌ನಲ್ಲಿ ಇದನ್ನು ಮಾಘಿ ಎಂದು ಕರೆಯಲಾಗುತ್ತದೆ. ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಇದನ್ನು ಸಂಕ್ರಾಂತಿ ಎಂದು ಕರೆದು ನಾಲ್ಕು ದಿನಗಳ ಕಾಲ ಆಚರಿಸಲಾಗುತ್ತದೆ. ಅಸ್ಸಾಂನಲ್ಲಿ ಇದನ್ನು ಭೋಗಾಲಿ ಬಿಹು ಎಂದು ಆಚರಿಸಲಾಗುತ್ತದೆ. ಇದೊಂದು ಸುಗ್ಗಿಯ ಹಬ್ಬವಾಗಿದೆ. ಬಿಹಾರ ಮತ್ತು ಜಾರ್ಖಂಡ್‌ನಲ್ಲಿ ಇದನ್ನು ಜನವರಿ 14 ಮತ್ತು 15 ರಂದು ಆಚರಿಸಲಾಗುತ್ತದೆ. ಈ ಹಬ್ಬವನ್ನು ಸಂಕ್ರಾಂತಿ ಅಥವಾ ಸಕ್ರತ್ ಅಥವಾ ಖಿಚಡಿ ಮತ್ತು ಟೀಲ್ ಬರ್ಫಿ ಎಂದು ಕರೆಯಲಾಗುತ್ತದೆ. ದೆಹಲಿ ಮತ್ತು ಹರಿಯಾಣದಲ್ಲಿ ಸಹೋದರರು ವಿವಾಹಿತ ಸಹೋದರಿಗೆ ಸಿಧಾವನ್ನು ಉಡುಗೊರೆಯಾಗಿ ನೀಡುತ್ತಾರೆ. ಗೋವಾದಲ್ಲಿ ಮಹಿಳೆಯರು ಹಲ್ದಿ-ಕುಂಕುಮ್ ಮಾಡುತ್ತಾರೆ. ಗುಜರಾತ್‌ನಲ್ಲಿ ಇದನ್ನು ಉತ್ತರಾಯಣ ಎಂದು ಕರೆಯಲಾಗುತ್ತದೆ. ಇದನ್ನು ಎರಡು ದಿನಗಳ ಕಾಲ ಆಚರಿಸಲಾಗುತ್ತದೆ ಇದು ಅವರಿಗೆ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ. ಪತಂಗಿ ಎಂದು ಕರೆಯಲ್ಪಡುವ ಈ ಹಬ್ಬದಲ್ಲಿ ಗುಜರಾತಿ ಜನರು ಗಾಳಿಪಟಗಳನ್ನು ಹಾರಿಸುತ್ತಾರೆ. ಹಿಮಾಚಲ ಪ್ರದೇಶದಲ್ಲಿ ಇದನ್ನು ಮಾಘ ಸಾಜಿ ಎಂದು ಕರೆಯಲಾಗುತ್ತದೆ. ಕರ್ನಾಟಕದಲ್ಲಿ ಮಕ್ಕಳು ಹೊಸ ಬಟ್ಟೆಗಳನ್ನು ಧರಿಸುತ್ತಾರೆ ಮತ್ತು ಸಂಕ್ರಾಂತಿ ನೈವೇದ್ಯಗಳೊಂದಿಗೆ ಹತ್ತಿರದ ಆತ್ಮೀಯರನ್ನು ಭೇಟಿ ಮಾಡುತ್ತಾರೆ. ಈ ದಿನ ಅನೇಕ ಮೇಳಗಳನ್ನು ನಡೆಸಲಾಗುತ್ತದೆ.

ಮಕರ ಸಂಕ್ರಾಂತಿಯಂದು ಮಾಘ ಮೇಳವನ್ನು (ಜಾತ್ರೆ) ಭಾರತದಾದ್ಯಂತ ವಿವಿಧ ಯಾತ್ರಾ ಸ್ಥಳಗಳಲ್ಲಿ ಆಯೋಜಿಸಲಾಗಿದೆ. ಇದು ಬೃಹತ್ ಮಟ್ಟದಲ್ಲಿ ಭಾಗವಹಿಸುವಿಕೆಗೆ ಸಾಕ್ಷಿಯಾಗಿರುತ್ತದೆ. ಮಕರ ಸಂಕ್ರಾಂತಿಯು ಸೂರ್ಯ ದೇವರಿಗೆ ಕೃತಜ್ಞತೆ ಸಲ್ಲಿಸುವ ಹಬ್ಬ. ಇದು ಪ್ರಕೃತಿಯನ್ನು ಶುದ್ಧೀಕರಿಸುತ್ತದೆ ಮತ್ತು ನಮ್ಮ ಪಾಪಗಳನ್ನು ತೊಡೆದುಹಾಕುತ್ತದೆ ಎಂಬ ನಂಬಿಕೆಯಿದೆ.

ಮಕರ ಸಂಕ್ರಾಂತಿಯ ದಿನದಂದು ಸೂರ್ಯನು ತನ್ನ ಮಗನಾದ ಶನಿಯನ್ನು ಭೇಟಿಯಾಗುತ್ತಾನೆ. ವೈದಿಕ ಜ್ಯೋತಿಷ್ಯದ ಪ್ರಕಾರ ಸೂರ್ಯ ಮತ್ತು ಶನಿ ದೇವರು ಚೆನ್ನಾಗಿ ಹೊಂದಿಕೊಳ್ಳುವುದಿಲ್ಲ ಆದ್ದರಿಂದ ಮಕರ ಸಂಕ್ರಾಂತಿಯಂದು ಕಹಿ ಭೂತಕಾಲವನ್ನು ಮರೆತು ಹೊಸ ಆರಂಭವನ್ನು ಪ್ರಾರಂಭಿಸಲಾಗುತ್ತದೆ.

ಮಹಾಭಾರತದ ಪ್ರಕಾರ ಗಾಯಗೊಂಡ ಭೀಷ್ಮನು ಸ್ವರ್ಗೀಯ ಮನೆಯನ್ನು ಪಡೆಯಲು ಮಕರ ಸಂಕ್ರಾಂತಿಯಂದು ತನ್ನ ದೇಹವನ್ನು ಬಿಟ್ಟು ಕಾಲಹರಣ ಮಾಡಲು ನಿರ್ಧರಿಸಿದನು. ಅಂದಿನಿಂದ ಮಕರ ಸಂಕ್ರಾಂತಿಯಂದು ಸಾಯುವವನು ನಿರ್ವಾಣವನ್ನು ಪಡೆಯುತ್ತಾನೆ ಎಂದು ನಂಬಲಾಗಿದೆ.

ಜ್ಯೋತಿಷ್ಯಶಾಸ್ತ್ರದ ಪ್ರಕಾರ ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಪ್ರವೇಶಿಸುವುದನ್ನು ಸಂಕ್ರಾಂತಿ ಎಂದು ಕರೆಯಲಾಗುತ್ತದೆ ಮತ್ತು ಈ ದಿನ ಸೂರ್ಯನು ಧನು ರಾಶಿಯಿಂದ ಮಕರ ರಾಶಿಯನ್ನು ಪ್ರವೇಶಿಸುತ್ತಾನೆ. ಆದ್ದರಿಂದ ಇದನ್ನು ಮಕರ ಸಂಕ್ರಾಂತಿ ಎನ್ನುತ್ತಾರೆ. ಬೆಳೆಗಳ ಉತ್ತಮ ಫಸಲುಗಳನ್ನು ಪಡೆದ ಸಂತೋಷದಲ್ಲಿ ಮಕರ ಸಂಕ್ರಾಂತಿಯನ್ನು ಆಚರಿಸಲಾಗುತ್ತದೆ. ಈ ಹಬ್ಬವು ಸಂಪೂರ್ಣವಾಗಿ ಸೂರ್ಯ ದೇವರಿಗೆ ಸಂಬಂಧಿಸಿದೆ. ಈ ಹಬ್ಬದಂದು ಸೂರ್ಯ ದೇವರನ್ನು ಪೂಜಿಸಲಾಗುತ್ತದೆ ಮತ್ತು ದೇವರಿಗೆ ಅಕ್ಕಿ, ಎಳ್ಳು ಮತ್ತು ಕಿಚಡಿಯನ್ನು ಅರ್ಪಿಸಲಾಗುತ್ತದೆ. ಜನರು ಹಸಿ ಖಿಚಡಿಯನ್ನು ಬಡವರಿಗೆ ದಾನ ಮಾಡುತ್ತಾರೆ.



ಈ ದಿನ ಎಳ್ಳು ಮತ್ತು ಬೆಲ್ಲ ಕೂಡ ಬಹಳ ಮುಖ್ಯ ಹಾಗಾಗಿ ಮನೆಗಳಲ್ಲಿ ಎಳ್ಳು ಮತ್ತು ಬೆಲ್ಲದ ವಿವಿಧ ಸಿಹಿತಿಂಡಿಗಳನ್ನು ತಯಾರಿಸಲಾಗುತ್ತದೆ. ಜನರು ಕಡಲೆಕಾಯಿ, ರೇವಡಿಗಳನ್ನು ತಿನ್ನುತ್ತಾರೆ ಮತ್ತು ಇತರರಿಗೆ ಹಂಚುತ್ತಾರೆ. ಅನೇಕರು ಸ್ನಾನ ಮತ್ತು ಪೂಜೆ ಮಾಡಲು ಯಾತ್ರಾ ಸ್ಥಳಗಳಿಗೆ ಭೇಟಿ ನೀಡುತ್ತಾರೆ. ಈ ದಿನ ದಾನ ಮಾಡುವುದರಿಂದ ನೂರು ಪಟ್ಟು ಪುಣ್ಯ ಲಭಿಸುತ್ತದೆ ಎಂಬ ಸುದ್ದಿ ಇದೆ. ಸಾಸಿವೆಯಿಂದ ತುಂಬಿದ ಹೊಲಗಳು ಬಹಳ ಮೋಡಿಮಾಡುವಂತೆ ಕಾಣುತ್ತವೆ. ಈ ಹಬ್ಬವು ವಸಂತ ಋತುವಿನ ಆಗಮನವನ್ನು ಸಹ ಸೂಚಿಸುತ್ತದೆ. ॐ



## 78ನೇ ಜಯಂತ್ಯುತ್ಸವದ ಪ್ರಯುಕ್ತ
## ಯುಗಯೋಗಿ ಪರಮಪೂಜ್ಯ ಜಗದ್ಗುರು ಪದ್ಮಭೂಷಣ
# ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ

ತಾರುಣ್ಯದಲ್ಲಿಯೇ ತಮ್ಮ ವೈಯಕ್ತಿಕ ಜೀವನವನ್ನು ತ್ಯಾಗ ಮಾಡಿ ಹೆಚ್ಚು ಕಾಲ ಕಾಲಭೈರವನ ಮನದಲ್ಲೇ ಕಾಣುತ್ತಾ ನಿರಂತರವಾಗಿ ಅವಕಾಶವಂಚಿತ ಮಕ್ಕಳಿಗೆ ಜಾತಿ, ಮತ, ಅಂತಸ್ತುಗಳನ್ನೆಣಿಸದೇ ಅನ್ನದಾಸೋಹದ ಜೊತೆಗೆ ಅಕ್ಷರವನ್ನು ಕಲಿಸಿ ಅವರ ಬಾಳು ಉತ್ತಮ ಮಾರ್ಗದಲ್ಲಿ ಸಾಗಲು ಅಡಿಗಲ್ಲು ಹಾಕಿಕೊಟ್ಟ ಸಿದ್ಧಪುರುಷರು ಆದಿಚುಂಚನಗಿರಿಯ ಶ್ರೀ ಬಾಲಗಂಗಾಧರನಾಥ ಪೂಜ್ಯ ಸ್ವಾಮೀಜಿಯವರು.

ಬಾಲಗಂಗಾಧರನಾಥ ಶ್ರೀಗಳು ತ್ರಿವಿಧ ದಾಸೋಹಿ ಎಂದೇ ಭಕ್ತರ ಮನ–ಮನೆಯಲ್ಲಿ ನೆಲೆಗೊಂಡವರು. ಸಾಮಾನ್ಯ ಬಡ ಕುಟುಂಬವೊಂದರಿಂದ ಬಂದ ಶ್ರೀಗಳು ಅಸಾಮಾನ್ಯರಾಗಿ ಜಗತ್ತಿಗೆ ಬೆಳಕಾಗಿದ್ದು ಈ ಶತಮಾನದ ಭಾಗ್ಯ. ಶಿಕ್ಷಣ, ಆರೋಗ್ಯ, ಧರ್ಮದ ಏಳಿಗೆಗೆ ಶ್ರೀಗಳು ತಮ್ಮ ಇಡೀ ಜೀವನವನ್ನು ಮುಡಿಪಾಗಿರಿಸಿದವರು. ಜಾತಿ ಭೇದವಿಲ್ಲದೆ ತಮ್ಮ ಮಠದಲ್ಲಿ ಸರ್ವಧರ್ಮಿಯರಿಗೂ ಆಶ್ರಯ ನೀಡಿ ಆದಿಚುಂಚನಗಿರಿ ಮಠದ ಕೀರ್ತಿಪತಾಕೆ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಕಾರಣದಿಂದಲೇ ಇಂದು ವಿಶ್ವಮಟ್ಟದಲ್ಲಿ ರಾರಾಜಿಸುತ್ತಿದೆ.

**ಚುಂಚನಗಿರಿ ಚಿನ್ನದ ಗಿರಿಯಾಯ್ತು :**

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಶ್ರೀ ಆದಿಚುಂಚನಗಿರಿ ಕ್ಷೇತ್ರದ 71ನೇ ಪೀಠಾಧ್ಯಕ್ಷರಾಗಿ ಪಟ್ಟಕ್ಕೆ ಬಂದ ನಂತರ ಮಾಡಿದ ಸಾಧನೆ ಅಪಾರ, ನಿರೀಕ್ಷೆಗೂ ನಿಲುಕದ್ದು. ಅವರ ಪಟ್ಟಾಭಿಷೇಕದ ಬಳಿಕ ಇಡೀ ಮಠದ ಚಿತ್ರಣವೇ ಬದಲಾಯಿತು. ಅಭಿವೃದ್ಧಿಗೊಂದು ಪಥ ಸಿಕ್ಕಿತು. ಪವಾಡ ಸದೃಶ ರೀತಿಯಲ್ಲಿ ಮಠ ಪುನರ್ ನಿರ್ಮಾಣಗೊಂಡಿತು.

ಇಡೀ ದೇಶವೇ ಆದಿಚುಂಚನಗಿರಿಯತ್ತ ತಿರುಗಿ ನೋಡುವಂತೆ ಮಾಡಿದ ಕೀರ್ತಿ ಶ್ರೀಸ್ವಾಮೀಜಿ ಅವರದು. ಆ ಮೂಲಕ ನಾಗಮಂಗಲ ತಾಲ್ಲೂಕಿನ ಚುಂಚನಗಿರಿಯನ್ನು ಚಿನ್ನದಗಿರಿಯನ್ನಾಗಿ ರೂಪಿಸಿದ ಸಾಧಕ, ಸದ್ಗುರು ಇವರು. 300 ವರ್ಷಗಳಲ್ಲಿ ಸಾಧಿಸಲಾಗದ್ದನ್ನು ಕೇವಲ ಮೂರೂವರೆ ದಶಕಗಳಲ್ಲಿ ಸಾಧಿಸಿದ ಪವಾಡ ಪುರುಷ.

ದೇಶದ 40ಕ್ಕೂ ಹೆಚ್ಚು ಕಡೆ ಶಾಖೆಗಳನ್ನು ಸ್ಥಾಪಿಸಿದ್ದಾರೆ. 460 ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಿ 1 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಕೀರ್ತಿಗೆ ಭಾಜನರಾದವರು. ಮಠದಲ್ಲಿರುವ ಶಾಲೆಯಲ್ಲಿ 5 ಸಾವಿರ ಮಕ್ಕಳಿಗೆ ಉಚಿತ ಶಿಕ್ಷಣ, ವಸತಿ ಮತ್ತು ಅನ್ನ ದಾಸೋಹ ನಡೆಸುತ್ತಿದ್ದರು.

**ಬಾಲ್ಯದ ಬಾಲಗಂಗಾಧರರು :**

ರಾಮನಗರ ಜಿಲ್ಲೆ ಬಿಡದಿ ಸಮೀಪದ ಬಾನಂದೂರು ಗ್ರಾಮ ಸ್ವಾಮೀಜಿ ಅವರ ಹುಟ್ಟೂರು. ಶ್ರೀ ಚಿಕ್ಕಲಿಂಗಪ್ಪ, ಶ್ರೀಮತಿ ಬೋರಮ್ಮ ದಂಪತಿಯ 3ನೇ ಮಗುವಾಗಿ 1945 ಜನವರಿ 18 ರಂದು ಜನ್ಮತಾಳಿದರು.

ಹಳ್ಳಿಯ ಸಮಸ್ತರೂ ಮಗುವಿನ ಅಪೂರ್ವ ಲಾವಣ್ಯಕ್ಕೆ ಮನಸೋತರು ಕಾಲ ಕಳೆದಂತೆ ಮಗು ಊರಿನ ಕಣ್ಮಣಿಯಾಯಿತು, ನಂತರ ಕೆಲವೇ ದಿನಗಳಲ್ಲಿ ಅನಿರೀಕ್ಷಿತವಾಗಿ ಬಂದ ಯೋಗಿಯೊಬ್ಬರು ಈ ಕಂದನನ್ನು ಕಂಡು ಭೂಮಿಗಿಳಿದ ಶಿವಕಳೆ ಕಾರಣಿಕ ಪುರುಷನಿವನು. ಇವನಿಂದ ಲೋಕಕಲ್ಯಾಣವಾಗುವುದು ಎಂದು ಭವಿಷ್ಯ ನುಡಿದು ನಡೆದೇಬಿಟ್ಟರು. ಮನೆಯವರು ಈ ಮಾತು ಕೇಳಿ ದಿಗ್ಮೂಢರಾದರು.

ಬಾಲಗಂಗಾಧರರ ಪೂರ್ವಾಶ್ರಮದ ಹೆಸರು ಶ್ರೀ ಗಂಗಾಧರಯ್ಯ. ಪುಟ್ಟಲಿಂಗಮ್ಮ, ಶಿವಮ್ಮ ಶ್ರೀಗಳ ಹಿರಿಯ ಸೋದರಿಯರು. ಮರಿಸ್ವಾಮಯ್ಯ ಕಿರಿಯ ಸೋದರರಾಗಿ ಶ್ರೀಗಳ ಜೊತೆ ಬಾಲ್ಯದ ಜೀವನವನ್ನು ಕಳೆದರು.

ಬಾನಂದೂರಿನಲ್ಲಿ ಪ್ರಾಥಮಿಕ, ಬಿಡದಿಯಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣ. ರಾಮನಗರದ ವಿವಿಧೋದ್ದೇಶ ಪ್ರೌಢಶಾಲೆಯಲ್ಲಿ ಪ್ರೌಢ ಶಿಕ್ಷಣ ಮುಗಿಸಿದರು. ಬೆಂಗಳೂರಿನ ಸರಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ವಿಜ್ಞಾನ ವಿಷಯದಲ್ಲಿ ಪದವಿಪೂರ್ವ ತರಗತಿಗೆ ಪ್ರವೇಶ. ನಂತರ ಬಿ.ಎಸ್ಸಿ. ಮುಗಿಸಿದರು. ಆ ವೇಳೆ ಸಾಧುಸಂತರಿಗೆ ಆಶ್ರಯ ತಾಣವಾಗಿದ್ದ ಸಂಪಂಗಿರಾಮನಗರದ ಹತ್ತಿರದ ಚಿದ್ಧಗಾನಂದಾಶ್ರಮದಲ್ಲಿ ಕೆಲ ವರ್ಷ ವಾಸವಿದ್ದರು. ಚಿಕ್ಕಂದಿನಿಂದಲೇ ಅಧ್ಯಯನ, ಆಧ್ಯಾತ್ಮ, ವೈದ್ಯಕೀಯ ವಿಷಯಗಳಲ್ಲಿ ಅತೀವ ಆಸಕ್ತಿ. ಯಾವುದನ್ನೂ ವಿಶ್ಲೇಷಿಸದೆ ನಂಬದ ವ್ಯಕ್ತಿತ್ವ, ವೈಚಾರಿಕ ಮನೋಭಾವ.

**ತಾತನಿಗೇ ಗುರು :**

ಶ್ರೀಗಳ ತಂದೆ ಸುಭೇದಾರ್ ಮನೆತನದ ಚಿಕ್ಕಲಿಂಗಪ್ಪ, ಆದಿಚುಂಚನಗಿರಿಯ ಧಾರ್ಮಿಕ ಕೈಂಕರ್ಯಕ್ಕೆ ತಮ್ಮನ್ನೇ ತಾವು ಸಮರ್ಪಿಸಿಕೊಂಡು 33 ಹಳ್ಳಿಗಳ ಧಾರ್ಮಿಕ ಆಡಳಿತದ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ತಾಯಿ ಬೋರಮ್ಮ ಪರೋಪಕಾರ, ಔದಾರ್ಯ, ದೈವಭಕ್ತಿ, ಸಹನೆ, ನಿಸ್ವಾರ್ಥಕ್ಕೆ ಹೆಸರಾಗಿದ್ದರು. ತಾತ ತಿಮ್ಮೇಗೌಡರು ಬಾಲಕ ಗಂಗಾಧರಯ್ಯನಿಗೆ ಉತ್ತಮ ಗುಣಗಳನ್ನು ಕಲಿಯಲು ಪ್ರೋತ್ಸಾಹಿಸಿದ್ದರು. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬ ಮಾತಿನಂತೆ ಮೊಮ್ಮಗನ ಜ್ಞಾನದಾಹ, ಆಧ್ಯಾತ್ಮದ ಆಸಕ್ತಿ ಕಂಡು ತಿಮ್ಮೇಗೌಡರು ಮೊಮ್ಮಗನನ್ನು ಪ್ರೀತಿಯಿಂದ 'ಗುರುಗಳೇ' ಎಂದೇ ಕರೆಯುತ್ತಿದ್ದರಂತೆ.

ಬದುಕಿನ ಸಾರ್ಥಕತೆಯ ಬಗ್ಗೆ ನಡೆಯುತ್ತಿದ್ದ ಅವರ ಮನೋಮಥನ ಮುಂದೆ ಅವರು ಸ್ವೀಕರಿಸಿದ ಸನ್ಯಾಸವ್ರತ ಸ್ವೀಕಾರಕ್ಕೆ ಪ್ರೇರಣೆಯಾಗಿತ್ತು. ಊರಿನ ಸಮೀಪದ ಹಿಪ್ಪೆಮರ ಇವರಿಗೆ ಬೋಧಿವೃಕ್ಷದಷ್ಟೆ ಪವಿತ್ರವಾಗಿತ್ತು. ಲೌಕಿಕ ವಿಷಯಗಳಲ್ಲಿ ಅವರು ಅಂಟಿಯೂ ಅಂಟದಂತಿದ್ದರು. ಮನಸ್ಸಿಗೆ ಮೀರಿದ ಆಧ್ಯಾತ್ಮಿಕ ಪ್ರೀತಿ ಅವರಿಗೆ ಸಹಜ ವೈರಾಗ್ಯ ತಂದಿತ್ತು.

**ಗುಮಾಸ್ತರಾಗಿ ಸೇವೆ :**

ಬಿ.ಎಸ್ಸಿ. ಪದವಿಗೆ ಸೇರುವ ಮುನ್ನ ತಾವು ಓದಿದ ರಾಮನಗರದ ಪ್ರೌಢಶಾಲೆಯಲ್ಲಿ ಕೆಲ ತಿಂಗಳ ಕಾಲ ಗುಮಾಸ್ತರಾಗಿದ್ದರು. ಆಗ ಆದಿಚುಂಚನಗಿರಿ ಮಠಾಧೀಶರನ್ನು ಕಾಣಬಯಸಿ ಬರೆದ ಪತ್ರ ಅವರ ವಿನಯ, ಸಂಸ್ಕೃತಿ, ವಿದ್ಯೆ ಬಗೆಗಿನ ಆಸಕ್ತಿ ಹಾಗೂ ಅಧ್ಯಾತ್ಮಿಕ ಒಲವನ್ನು ತೋರಿಸುವಂತಿತ್ತು.

**ಸಾವು ಸನಿಹದಲ್ಲೇ ಸಾಗಿತ್ತು :**

ಒಮ್ಮೆ ಲಾಲ್‌ಬಾಗ್‌ಗೆ ಹೋಗಿದ್ದಾಗ ಬಿರುಗಾಳಿಗೆ ಮರವೊಂದರ ಭಾರಿ ಗಾತ್ರದ ಕೊಂಬೆ ಮುರಿದು ಪಕ್ಕದಲ್ಲೇ ಬಿದ್ದಿತ್ತು. ಕೂದಲೆಳೆಯ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದರು. ಆಗ ಲೌಕಿಕ ಜೀವನದ ಬಗ್ಗೆ ನಿರಾಸಕ್ತರಾದ ಅವರಿಗೆ ಈ ಘಟನೆಯಿಂದ ತಾವು ಯಾವುದೋ ಒಂದು ಮಹತ್ಕಾರ್ಯದ ಸಲುವಾಗಿ ಬದುಕಬೇಕಾಗಿದೆ. ಅದು ದೈವಿಚ್ಛೆ ಎಂಬ ಭಾವನೆ ಹೊಂದಿದ್ದರು.

**ಹಿಂಸೆ ಸಹಿಸರು :**

ಪ್ರಾಣಿಹಿಂಸೆ ಸಹಿಸದ ಗಂಗಾಧರಯ್ಯ ತುಂಬಾ ದಯಾಳುವಾಗಿದ್ದರು. ಎತ್ತುಗಳನ್ನು ಅಮಾನುಷವಾಗಿ ದುಡಿಸಿಕೊಂಡರೆ, ಹಾಲು ಕರೆಯದ ಹಸುಗಳನ್ನು ಹೊಡೆದರೆ ಅವರ ಕಣ್ಣಲ್ಲಿ ನೀರು ತುಂಬಿರುತ್ತಿತ್ತು. ನಾಗರಹಾವೊಂದು ಒಮ್ಮೆ ಅವರ ಕೊಠಡಿಗೆ ನುಗ್ಗಿದಾಗ, ಮತ್ತೊಮ್ಮೆ ಗದ್ದೆಯಲ್ಲಿ ಹೆಡೆ ಎತ್ತಿದಾಗ ಅವರು ಕೊಲ್ಲಲಿಲ್ಲ. ಇಂತಹ ಮೃದು ಮನಸ್ಸಿನ ಯುವಕ ಏಕಾಂತ ಪ್ರಿಯರಾಗಿ ನಿಸರ್ಗಪ್ರೇಮಿಗಳಾಗಿದ್ದರು.

**ಸಮೃದ್ಧಿ ಸುಜ್ಞಾನ**

**ಜೀವನವೆನ್ನುವುದು ಮ್ಯೂಸಿಕ್ ಪ್ಲೇಯರ್ ಅಲ್ಲ, ನಿಮಗಿಷ್ಟ ಬಂದ ಹಾಡುಗಳನ್ನು ಕೇಳಲು. ಜೀವನವೆನ್ನುವುದು ರೇಡಿಯೋ ಇದ್ದ ಹಾಗೆ, ಅದರಲ್ಲಿ ಏನು ಬರುವುದೂ ಅದನ್ನು ಕೇಳಿ ಸಂತೋಷಪಡಬೇಕು.**

**ಶ್ರೀಮಠದತ್ತ ಹೆಜ್ಜೆ :**

ಶ್ರೀ ರಮಾನಂದನಾಥಸ್ವಾಮಿಗಳು ಅನಾರೋಗ್ಯದಿಂದ ಹಾಸಿಗೆ ಹಿಡಿದಾಗ, ಆದಿಚುಂಚನಗಿರಿ ಪೀಠಕ್ಕೆ ಯೋಗ್ಯರಾದ ಉತ್ತರಾಧಿಕಾರಿಗಳ ಆಯ್ಕೆ ಅನಿವಾರ್ಯವಾಯಿತು. ಅಭ್ಯರ್ಥಿಗಳು ಬೇಕೆಂಬ ಪ್ರಕಟಣೆ ಪತ್ರಿಕೆಯಲ್ಲೂ ಬಂತು. ಬಾಯಾರಿದವನಿಗೆ ತಿಳಿನೀರು ದೊರೆತಂತಾಗಿ ಸನ್ಯಾಸ ಸ್ವೀಕರಿಸಲು ಹರ್ಷಚಿತ್ತರಾಗಿ ಚುಂಚನಗಿರಿಗೆ ತೆರಳಿದರು. ಭಕ್ತರ ಇಚ್ಛೆಯಂತೆ ಇಬ್ಬರು ಶಿಷ್ಯರನ್ನು ಶ್ರೀ ರಮಾನಂದನಾಥ ಸ್ವಾಮಿಗಳು ಆಯ್ಕೆ ಮಾಡಿದರು. ಅವರಲ್ಲಿ ಗಂಗಾಧರಯ್ಯ ಒಬ್ಬರು.

ತಂದೆ-ತಾಯಿಯ ಅನುಮತಿಯೊಂದಿಗೆ ಗಂಗಾಧರಯ್ಯ ಕ್ಷೇತ್ರಕ್ಕೆ ತೆರಳಲು ಸಿದ್ಧರಾದರು. ಆ ವೇಳೆ ಗಂಗಾಧರಯ್ಯ ಅವರು ವಿಧಿ ಆಡಿಸಿದಂತೆ ಆಡುವ ಗೊಂಬೆ ನಾನು, ಬುದ್ಧನ ಜೀವನ ಹೇಗೆ ತಮಗೆ ಮಾದರಿಯಾಯಿತೋ ಹಾಗೆಯೇ ಸನ್ಯಾಸಿಯಾಗಬೇಕೆಂಬ ತಮ್ಮ ಗುರಿಯ ಸಮರ್ಥನೆಯನ್ನು ನಿವೇದಿಸಿದ್ದರು. ಮುಂದೆ ಅವರು ದಣಿವರಿಯದ ಕರ್ಮಯೋಗಿಯಾಗಿ ರೂಪುಗೊಳ್ಳಲು ಇದೇ ಮಹಾಮಂತ್ರವಾಯಿತು.

**ಸನ್ಯಾಸ ದೀಕ್ಷೆ:**

1968 ರ ಫೆ. 12ರಲ್ಲಿ ಸನ್ಯಾಸ ದೀಕ್ಷೆ ಸ್ವೀಕರಿಸಿದರು. ಅಂದಿನ ಪೀಠಾಧಿಪತಿ ಶ್ರೀ ರಮಾನಂದನಾಥ ಸ್ವಾಮೀಜಿಗಳು ಗಂಗಾಧರಯ್ಯನಿಗೆ ಮಂತ್ರೋಪದೇಶದೊಂದಿಗೆ ಸನ್ಯಾಸ ದೀಕ್ಷೆ ನೀಡಿ, **'ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ'** ಎಂದು ಮರು ನಾಮಕರಣ ಮಾಡಿದರು. ಆ ಬಳಿಕ ಬೆಂಗಳೂರಿನ ಕೈಲಾಸಾಶ್ರಮದಲ್ಲಿ ಇದ್ದುಕೊಂಡು ಅದ್ವೈತ ವೇದಾಂತ ಸಂಸ್ಕೃತ ಪದವಿ ಪಡೆದರು. ಕೈಲಾಸಾಶ್ರಮದ ಶ್ರೀ ತಿರುಚ್ಚಿ ಸ್ವಾಮಿಗಳ ಸಾನ್ನಿಧ್ಯದಲ್ಲಿ ತತ್ವ ವಿಚಾರಗಳ ಅಧ್ಯಯನ. ನಂತರ ಗುರುಗಳ ಶುಶ್ರೂಷೆಗೆ ವಾಪಸ್ಸಾದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು ಶ್ರೀ ರಮಾನಂದನಾಥ ಸ್ವಾಮೀಜಿಯ ನಿಧನದ ನಂತರ 1974 ಸೆಪ್ಟೆಂಬರ್ 25ರಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ 71ನೇ ಪೀಠಾಧಿಪತಿಗಳಾಗಿ ಪಟ್ಟಕ್ಕೇರಿದರು.

**ನೇಗಿಲು ಹಿಡಿದರು :**

ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಶ್ರೀ ಆದಿಚುಂಚನಗಿರಿ ಮಠಕ್ಕೆ ಪೀಠಾಧ್ಯಕ್ಷರಾದ ಕಾಲಕ್ಕೆ, ಕಾಲಭೈರವೇಶ್ವರ ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಪ್ರಸಾದ ನೀಡುವುದಕ್ಕೂ ಕೂಡ ಕಷ್ಟವಾಗಿತ್ತು. ಮಠ ಆರ್ಥಿಕವಾಗಿ ದುಃಸ್ಥಿತಿಯಲ್ಲಿತ್ತು. ಮಂಡ್ಯ, ಬೆಂಗಳೂರು, ತುಮಕೂರು ಜಿಲ್ಲೆಗಳ ಕೆಲವು ಒಳಪಂಗಡಗಳ ಒಕ್ಕಲಿಗ ಸಮುದಾಯಕ್ಕಷ್ಟೇ ಸೀಮಿತವಾಗಿತ್ತು. ಅಂತಹ ಸಮಯದಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ತಾವೇ ಖುದ್ದಾಗಿ ನೇಗಿಲು ಹಿಡಿದು ಹೊಲ ಉಳುವ ಕಾರ್ಯಕ್ಕೆ ಕೈಹಾಕಿದರು. ಗಾಡಿ ಕಟ್ಟಿಕೊಂಡು ಊರೂರು ಸುತ್ತಿ ದವಸ ಧಾನ್ಯ, ತೆಂಗಿನಕಾಯಿ, ಹಣ ಸಂಗ್ರಹಿಸಿದರು. 9 ಸಲ ವಿಶ್ವ ಪರ್ಯಟನೆ ಕೈಗೊಂಡು ಮಠಕ್ಕೆ ಹಣದ ಹೊಳೆ ಹರಿಸಿದರು. ಆನಂತರ ಧಾರ್ಮಿಕ ಕಾರ್ಯಗಳಿಗಷ್ಟೇ ಸೀಮಿತವಾಗಿದ್ದ ಮಠವನ್ನು ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳತ್ತ ವಿಸ್ತರಿಸಿದರು. ಅನ್ನ, ಅಕ್ಷರ, ಆರೋಗ್ಯದ ಪರಿಕಲ್ಪನೆಗೆ ಜೀವ ತುಂಬಿದರು. ಮಠವನ್ನು ಹಂತ ಹಂತವಾಗಿ ಪ್ರಗತಿಯತ್ತ ಕೊಂಡೊಯ್ದರು.

**ಶಿಕ್ಷಣ ಕ್ರಾಂತಿ :**

'ಮಾನವ ಸೇವೆಯೆ ಮಾಧವ ಸೇವೆ' ನಾಣ್ನುಡಿಗೆ ಮತ್ತೊಂದು ಹೆಸರು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ.

ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಈ ಅವಿಶ್ರಾಂತ ಸೇವೆಯ ಫಲವಾಗಿ ಇಂದು ಆದಿಚುಂಚನಗಿರಿ ಮಠ ದೇಶದ ವಿವಿಧೆಡೆ 40 ಶಾಖಾ ಮಠಗಳನ್ನು ಹೊಂದಿದೆ. 460 ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದೆ. 5 ಸಾವಿರಕ್ಕೂ ಹೆಚ್ಚು ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ, ವಿದ್ಯಾರ್ಜನೆ ನೀಡುತ್ತಿದೆ.

ರಾಮನಗರ ತಾಲ್ಲೂಕಿನ ಅರ್ಚಕರಹಳ್ಳಿಯಲ್ಲಿ ಅಂಧರಿಗೆ ಉಚಿತ ಶಾಲೆ ತೆರೆದರು. ಅರ್ಚಕ ವೃತ್ತಿಗೆ ಪ್ರೋತ್ಸಾಹ ನೀಡುವ ಸಂಸ್ಕೃತ ವೇದಾಗಮ ಶಾಲಾಕಾಲೇಜುಗಳನ್ನು ಶುರು ಮಾಡಿದರು, ಮಧ್ಯಮ ವರ್ಗ ಡೊನೇಷನ್ ಕೊಟ್ಟು ಓದಿಸುವ ಉತ್ಸುಕತೆಯಿದ್ದ ಸಂದರ್ಭದಲ್ಲಿ ಉನ್ನತ ವ್ಯಾಸಂಗಕ್ಕೆ ಅನುಕೂಲವಾಗುವಂತಹ ನಾಲ್ಕು ಎಂಜಿನಿಯರಿಂಗ್,

ಎರಡು ವೈದ್ಯಕೀಯ, ಮತ್ತು ಎರಡು ಆಯುರ್ವೇದಿಕ್ ಕಾಲೇಜುಗಳನ್ನು ಸ್ಥಾಪಿಸಿದರು, ನಾಲ್ಕು ಸುಸಜ್ಜಿತ ಆಸ್ಪತ್ರೆಗಳನ್ನು (ಬಿ.ಜಿ. ನಗರದಲ್ಲಿ ವೈದ್ಯಕೀಯ ಕಾಲೇಜಿಗಾಗಿ ಆಸ್ಪತ್ರೆ, ಬೆಂಗಳೂರಿನಲ್ಲಿ ಅತ್ಯಾಧುನಿಕ ಬಿಜಿಎಸ್ ಗ್ಲೋಬಲ್ ಆಸ್ಪತ್ರೆ) ಕಟ್ಟಿಸಿ ಜನರ ಸೇವೆಗೆ ಮುಂದಾದರು.

ಮಠದ ವ್ಯಾಪ್ತಿಯಲ್ಲಿ 1 ಮಿಲಿಯನ್‌ಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಕಲಿಯುತ್ತಿದ್ದಾರೆ. ಒಕ್ಕಲಿಗ ಮಠದ ಅಧಿಪತಿಯಾದರೂ ಎಲ್ಲ ಮತಗಳ ಬಗ್ಗೆ ಅವರಿಗೆ ಅಪಾರ ಗೌರವ ಹಾಗೂ ಆದರವಿತ್ತು. ದಲಿತರ ಉದ್ಧಾರಕ್ಕಾಗಿ ಶಿಕ್ಷಣ ಒದಗಿಸಲೆಂದು ಶಿಕ್ಷಣ ಸಮೂಹವನ್ನೇ ನಿರ್ಮಿಸಿ ಒಂದು ಕ್ರಾಂತಿಯನ್ನು ಮಾಡಿದರು. ಅನ್ನ, ಅಕ್ಷರ ಮತ್ತು ಆರೋಗ್ಯ ದಾಸೋಹದ ಮೂಲಕ ಬಡ ಜನರ ಸೇವೆಯನ್ನು ಮಾಡಿದರು.

**ಹಸಿರು ಕ್ರಾಂತಿಯ ಹರಿಕಾರ :**

ಪ್ರಾಣಿ ಪಕ್ಷಿಗಳಿಗೆ ಆಶ್ರಯದ ಜೊತೆಗೆ, ಆಹಾರ ಒದಗಿಸುವ ಫಲಭರಿತ ವೃಕ್ಷಗಳು ತಲೆ ಎತ್ತಬೇಕು, ತೋಟಗಾರಿಕೆಗೂ ಪ್ರೋತ್ಸಾಹ ಸಿಗಲೇಬೇಕೆಂಬ ಸಂಕಲ್ಪ ಶ್ರೀಗಳವರದು. ಅದಕ್ಕಾಗಿ ಶಾಲಾಕಾಲೇಜುಗಳಿಗೆ ಸಸಿ ವಿತರಿಸಿ, ಹಾಳು ಬಿದ್ದಿರುವ ಗ್ರಾಮೀಣ ಪ್ರದೇಶದ ತೋಟಗಳನ್ನು ಸಂರಕ್ಷಿಸಿ ಎಲ್ಲಾ ಕಡೆ ಹಸಿರು ನಳನಳಿಸುವಂತೆ ಮಾಡುವುದರ ಮೂಲಕ 'ಹಸಿರುಕ್ರಾಂತಿ ಹರಿಕಾರ'ರೆಂದು ಹೆಸರುಗಳಿಸಿದ ಶ್ರೀಗಳು 5 ಕೋಟಿ ಗಿಡಗಳನ್ನು ನೆಡುವ ಮೂಲಕ ಒಂದು ಹೊಸ ಶಕೆಯನ್ನು ಆರಂಭಿಸಿದರು.

ಬರಗಾಲದಿಂದಾಗಿ ಮೇವಿನ ಕೊರತೆ ಉಂಟಾದಾಗ ಜಾನುವಾರುಗಳ ಬದುಕು ಶೋಚನೀಯವಾಗಿದ್ದಾಗ, ಗೋವುಗಳು ಕಟುಕರ ಪಾಲಾಗುತ್ತಿದ್ದ ಸಮಯದಲ್ಲಿ ಪರಿಸ್ಥಿತಿ ಹೀಗೆ ಮುಂದುವರಿದರೆ ಗೋ ಸಂತತಿಯೇ ಕ್ಷೀಣವಾಗುವ ಸಮಯವನ್ನರಿತ ಶ್ರೀಗಳು ನಾಡಿನಾದ್ಯಂತ ಅತ್ಯಾಧುನಿಕ ಸುಸಜ್ಜಿತವಾದ ಗೋಶಾಲಾ ನಿರ್ಮಾಣ ಮಾಡಿ ಗೋ ಸಂರಕ್ಷಣೆಗೂ ಮುನ್ನುಡಿ ಬರೆದರು.

**ಜೀರ್ಣೋದ್ಧಾರ– ಶಿಬಿರಗಳ ರೂವಾರಿ :**

ಶ್ರೀಗಳು ತಮ್ಮ ಜೀವಿತಾವಧಿಯಲ್ಲಿ ಲೆಕ್ಕವಿಲ್ಲದಷ್ಟು ಸಭೆ ಸಮಾರಂಭಗಳಲ್ಲಿ ಪ್ರವಚನ ನೀಡಿದ್ದಾರೆ. ಸಾವಿರಾರು ದೇಗುಲಗಳ ಶಿಲಾನ್ಯಾಸವನ್ನು ತಮ್ಮ ಅಮೃತ ಹಸ್ತದಿಂದ ನೆರವೇರಿಸಿದ್ದಾರೆ. ಎಲ್ಲಾ ವರ್ಗದವರಿಗೂ ವೇದಾಗಮ, ಸಂಸ್ಕೃತ ಶಾಲೆ ಮತ್ತು ಕಾಲೇಜು ತೆರೆದಿದ್ದಾರೆ. ಮಠದಲ್ಲಿ ಕಲಿತವರು ನಾನಾ ಕ್ಷೇತ್ರಗಳಲ್ಲಿ ಸಾಕಷ್ಟು ಹೆಸರು ಮಾಡಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಕುಲಕಸುಬು ಆಧರಿಸಿ ಉದ್ಯೋಗ ತರಬೇತಿ, ಸಲಕರಣೆಗಳ ವಿತರಣೆ, ವಿಕಲಚೇತನರಿಗೆ ಸವಲತ್ತು, ವರ್ಷದಲ್ಲಿ ಕನಿಷ್ಠ 30 ಕಡೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಹೀಗೆ ಹತ್ತು ಹಲವು ಸೇವಾ ಕೆಲಸಗಳ ರೂವಾರಿಯೂ ಆದರು.

**ಕಾಲಭೈರವ ದೇಗುಲ ನಿರ್ಮಾಣ :**

ಶ್ರೀಗಳು ದೇಶ ವಿದೇಶಗಳಲ್ಲಿ ಸಂಚರಿಸಿ ಹಿಂದೂಧರ್ಮ, ಸಂಸ್ಕೃತಿಯ ಪ್ರಸಾರ ಮಾಡಿದ್ದಾರೆ. ಹಲವಾರು ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದ್ದಾರೆ. ಶ್ರೀ ಮಠದ ಕ್ಷೇತ್ರಪಾಲಕ ಶ್ರೀ ಕಾಲಭೈರವೇಶ್ವರಸ್ವಾಮಿ ದೇವಾಲಯವನ್ನು ಸುಮಾರು 100 ಕೋಟಿ ವೆಚ್ಚದಲ್ಲಿ ನಿರ್ಮಿಸಿದರು. ಅಷ್ಟಭೈರವ, ಅಷ್ಟಾಷ್ಟ ಭೈರವರನ್ನೊಳಗೊಂಡ ಈ ಕಾಲಭೈರವೇಶ್ವರಸ್ವಾಮಿ ದೇಗುಲ ಇಂದಿಗೂ ಸಾವಿರಾರು ಭಕ್ತರಿಗೆ ಕಾಲಭೈರವನ ದರ್ಶನ ಮಾಡಿಸುವ ಪುಣ್ಯಕ್ಷೇತ್ರವಾಗಿದೆ.

**ಶ್ರೀ ಗಳಿಗೆ ಸಂದ ಗೌರವಾಧರಗಳು :**

ಸಮಾಜದ ನಾನಾ ಕ್ಷೇತ್ರಗಳ ಏಳಿಗೆಗೆ ಬಹಳಷ್ಟು ಶ್ರಮಿಸಿದ ಶ್ರೀಗಳಿಗೆ ದೇಶ ವಿದೇಶಗಳ ಹಲವು ಬಿರುದು, ಪ್ರಶಸ್ತಿಗಳು ಶ್ರೀ ಗಳಿಗೆ ಗೌರವ ಸಮರ್ಪಣಾ ಮಾಲೆಗಳಾಗಿವೆ.

**ಮನೆ ಮದ್ದು :**



**ಬಾದಾಮಿ ಹಾಲು**

ಬಾದಾಮಿ ಹಾಲಿನ ಜೊತೆ ಹಸಿ ಅಥವಾ ಒಣ ಖರ್ಜೂರ ಮತ್ತು ಒಣದ್ರಾಕ್ಷಿ ಹಾಕಿ ಸೇವನೆ ಮಾಡುವ ಅಭ್ಯಾಸ ಇಟ್ಟುಕೊಳ್ಳಬೇಕು. ಇದರಿಂದ ದೇಹಕ್ಕೆ ಸಾಕಷ್ಟು ಪ್ರಮಾಣದಲ್ಲಿ ಪೌಷ್ಟಿಕಾಂಶಗಳು ಸಿಗುತ್ತವೆ. ನಿಮ್ಮ ದೇಹ ಆರೋಗ್ಯಕರವಾಗಿರುತ್ತದೆ.

ಶಿಕ್ಷಣ, ಆರೋಗ್ಯ ಸೇರಿದಂತೆ ಸಮಾಜಸೇವೆಗಾಗಿ 2010ರಲ್ಲಿ ಕೇಂದ್ರ ಸರ್ಕಾರ ಪ್ರತಿಷ್ಠಿತ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ದೇಶ ವಿದೇಶಗಳ ನಾನಾ ಸಂಘಟನೆಗಳು ಸ್ವಾಮೀಜಿಯ ಸೇವಾಕಾರ್ಯ ಮೆಚ್ಚಿ ಹಲವಾರು ಪ್ರಶಸ್ತಿ ನೀಡಿ ಶ್ರೀಗಳಿಗೆ ಗೌರವ ಸಲ್ಲಿಸಿದ್ದಾರೆ. ಇದು ಶ್ರೀಗಳ ಸೇವಾಕಾರ್ಯ ನಿರಂತರ ಪ್ರೋತ್ಸಾಹಕ್ಕೂ ಕಾರಣವಾಗಿತ್ತು.

* 2009ರ ಏಪ್ರಿಲ್ ನಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿವಿ ಗೌರವ ಡಾಕ್ಟರೇಟ್ ನೀಡಿದೆ.
* 2009ರ ಮೇ ನಲ್ಲಿ ಬೆಂಗಳೂರು ವಿವಿ ಗೌರವ ಡಾಕ್ಟರೇಟ್ ಪ್ರಧಾನ ಮಾಡಿತು.
* 2008ರ ಜನವರಿ ಯಲ್ಲಿ ಅಮೆರಿಕದ ಇಂಟರ್‌ನ್ಯಾಷನಲ್ ವೇದಿಕ್ ಹಿಂದೂ ವಿವಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು.
* 2002 ರಲ್ಲಿ ಕರ್ನಾಟಕ ಸರಕಾರದಿಂದ 'ಪರಿಸರ ರತ್ನ' ನೀಡಿದೆ
* 2006 ರಲ್ಲಿ ಜೈನ ಸಮುದಾಯದ 'ವಿದ್ಯಾ ಸಾಮ್ರಾಟ್' ಪ್ರಶಸ್ತಿಗೂ ಭಾಜನರಾದರು
* 2007ರ ಜೂನ್ ನಲ್ಲಿ ಅಮೆರಿಕ, ಯೂರೋಪ್ ದೇಶಗಳ ಹಿಂದೂ ದೇಗುಲಗಳ ಪರಿಷತ್ತಿನ 'ಸನಾತನ ಧರ್ಮರತ್ನ' ಕೀರ್ತಿಯು ಲಭಿಸಿತು.
* 2009ರ ಜನವರಿಯಲ್ಲಿ ನಾಗಮಂಗಲದಲ್ಲಿ 65ನೇ ಜನ್ಮದಿನೋತ್ಸವ ಸಂದರ್ಭದಲ್ಲಿ 'ಅಕ್ಷಯ ಸಂತ' ಬಿರುದು ಲಭಿಸಿತು.
* 1990 ರಲ್ಲಿ ಗ್ಲೋಬಲ್ ಎಕನಾಮಿಕ್ ಕೌನ್ಸಿಲ್ ಸಂಸ್ಥೆಯ 'ರಾಷ್ಟ್ರೀಯ ಏಕತಾ ಪ್ರಶಸ್ತಿ' ಮುಡಿಗೇರಿತು.
* 1993: ಚಿಕಾಗೊದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ 'ಅಭಿನವ ವಿವೇಕಾನಂದ' ಬಿರುದು ಸಲ್ಲಿಕೆಯಾಯಿತು.



**ಕಾಲ ಭೈರವೈಕ್ಯ :**

ಸಿಂಗಾಪುರದಲ್ಲಿ 'ಮೌಂಟ್ ಎಲಿಜಬೆತ್ ಆಸ್ಪತ್ರೆ'ಯಲ್ಲಿ ಚಿಕಿತ್ಸೆಗೆ ಒಳಪಟ್ಟಿದ್ದ ಸ್ವಾಮೀಜಿಯವರು ಮುಂದೆ 'ಹೃದಯದ ಚಿಕಿತ್ಸೆ'ಗೂ ಒಳಪಟ್ಟಿದ್ದರು. 'ಮಧುಮೇಹ' ಅವರನ್ನು ಸತತವಾಗಿ ಕಾಡಿತ್ತು. ಎದೆನೋವಿನಿಂದ ಬೆಂಗಳೂರಿನ ಕೆಂಗೇರಿ ಬಳಿಯ ಬಿ.ಜಿ.ಎಸ್. ಗ್ಲೋಬಲ್ ಆಸ್ಪತ್ರೆಯಲ್ಲಿ ದಾಖಲಿಸಲ್ಪಟ್ಟಿದ್ದ ಸ್ವಾಮೀಜಿಯವರ ಆರೋಗ್ಯ ಡಯಾಲಿಸಿಸ್ ಬಳಿಕವೂ ಸರಿಹೋಗದೆ, 2013 ರ ಜನವರಿ 13 ರಂದು ಭೈರವೈಕ್ಯರಾದರು.

ಪಾರ್ಥೀವ ಶರೀರವನ್ನು ರಾತ್ರಿಯೇ ವಿಜಯನಗರದ ಶಾಖಾ ಮಠಕ್ಕೆ ತರಲಾಯಿತು. ಬಳಿಕ ಜನವರಿ 14 ರಂದು ಬೆಳಿಗ್ಗೆ 9.30ರ ವರೆಗೆ ಸಾರ್ವಜನಿಕರ ಅಂತಿಮದರ್ಶನಕ್ಕೆ ಅವಕಾಶ ನೀಡಲಾಯಿತು. ಸಾಗರೋಪಾದಿಯಲ್ಲಿ ಬಂದ ಲಕ್ಷಾಂತರ ಭಕ್ತರು, ಗಣ್ಯಾತಿಗಣ್ಯರು ಸ್ವಾಮೀಜಿಯವರ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದರು.

ಶ್ರೀಕ್ಷೇತ್ರ ಆದಿಚುಂಚನಗಿರಿಗೆ ಮೆರವಣಿಗೆಯಲ್ಲಿ ಕೊಂಡೊಯ್ದು ಭಕ್ತರ ದರ್ಶನಕ್ಕಿಟ್ಟು ಅದೇ ದಿನ ಸಂಜೆ 5:30ಗಂಟೆ ಸುಮಾರಿನ ಗೋಧೂಳಿ ಮುಹೂರ್ತದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆಯನ್ನು ಉತ್ತರಾಧಿಕಾರಿ ಡಾ॥ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ನಾಥ ಸಂಪ್ರದಾಯದ ಪ್ರಕಾರ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನೆರವೇರಿಸಿದರು. ಇದರೊಂದಿಗೆ ಆದಿಚುಂಚನಗಿರಿಯ ಸಂತಸೂರ್ಯ ಕಾಲಭೈರವನಲ್ಲಿ ಲೀನರಾದರು. ಅವರ ಸೇವೆ ಇಂದಿಗೂ ಅಜರಾಮರವಾಗಿ ಉಳಿದು ಹಣತೆಯಂತೆ ಸಮಾಜಕ್ಕೆ ಬೆಳಕು ನೀಡುತ್ತಿದೆ. ॐ

# ಟಾನ್ಸಿಲೈಟಿಸ್ – ಶೀತದ ಗಂಟು



–ಡಾ॥ ರವಿ. ಜಿ. ಸಿ, ಆದಿಚುಂಚನಗಿರಿ ಆಸ್ಪತ್ರೆ, ಬಿಜಿ ನಗರ.

ಶೀತದ ಗಂಟು ಹೆಚ್ಚಾಗಿ ಮಕ್ಕಳಲ್ಲಿ ಕಂಡುಬರುತ್ತದೆ. ಈ ರೋಗವು ಬ್ಯಾಕ್ಟೀರಿಯಾಗಳಿಂದ ಹರಡುತ್ತದೆ. ಮಕ್ಕಳಿಗೆ ಹೆಚ್ಚು ತಂಪು ಪಾನಿಯಗಳು (ಪೆಪ್ಸಿ), ತಂಪು ಪದಾರ್ಥಗಳು, ಐಸ್ ಕ್ರೀಮ್‌ಗಳನ್ನೂ ಕೊಡುವುದರಿಂದ ಈ ರೋಗವು ಹೆಚ್ಚಾಗುತ್ತದೆ. ಚಳಿಗಾಲದಲ್ಲಿ ಈ ರೋಗ ಲಕ್ಷಣಗಳು ಹೆಚ್ಚಾಗಿ ಕಾಣುತ್ತದೆ. ಇದಕ್ಕಾಗಿ ರೋಗನಿರೋಧಕ ಮಾತ್ರೆಗಳನ್ನು ಕೊಡುವುದರಿಂದ ಮಕ್ಕಳ ಬೆಳವಣಿಗೆಯು ಕುಗ್ಗುತ್ತದೆ. ಕಲುಷಿತವಾದ ನೀರು ಕುಡಿಯುವುದು ಗಂಟಲಿನಲ್ಲಿ ಕಂಡು ಬರುವ ಸಮಸ್ಯೆಗಳಲ್ಲಿ ಒಂದು ಟಾನ್ಸಿಲ್. ಗಂಟಲು ಗ್ರಂಥಿಯ ಹಿಂಭಾಗದಲ್ಲಿ ಎರಡು ಗುಳ್ಳೆಗಳಿರುತ್ತವೆ. ಇವುಗಳಿಗೆ 'ಟಾನ್ಸಿಲ್'ಎಂದು ಹೆಸರು.

ಈ ಟಾನ್ಸಿಲ್‌ಗಳು ಶ್ವಾಸನಾಳದ ಆರೋಗ್ಯವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಈ ಟಾನ್ಸಿಲ್‌ಗಳು ಶ್ವಾಸನಾಳದ ಸೋಂಕು ಉಂಟುಮಾಡಬಹುದಾದ ರೋಗಾಣುಗಳನ್ನು ತಡೆದು ಸೋಂಕಿನ ವಿರುದ್ಧ ಹೋರಾಡುವ ಪ್ರತಿಕಾಯಗಳನ್ನೂ ಕೂಡ ಉತ್ಪಾದಿಸುತ್ತವೆ. ಆದರೆ, ಕೆಲವೊಮ್ಮೆ ಈ ಟಾನ್ಸಿಲ್‌ಗಳಿಗೂ ಸೋಂಕು ತಗಲುವುದು.

ಬ್ಯಾಕ್ಟೀರಿಯಾ ಅಥವಾ ವೈರಸ್‌ಗಳ ದಾಳಿಯಂದಾಗಿ ಟಾನ್ಸಿಲ್‌ಗಳು ಉರಿಯೂತಕ್ಕೊಳಗಾಗಿ, ಊದಿಕೊಳ್ಳುವುದು. ಈ ರೀತಿ ಉಂಟಾದರೆ ಟಾನ್ಸಿಲೈಟಿಸ್ ಎಂದು ಕರೆಯಲಾಗುವುದು.

ಟಾನ್ಸಿಲೈಟಿಸ್ ಅಥವಾ ಟಾನ್ಸಿಲ್‌ಗಳ ಉರಿಯೂತವೂ ಮಕ್ಕಳಿಂದ ಹಿಡಿದು ದೊಡ್ಡವರವರೆಗೂ ಕಂಡು ಬರುತ್ತದೆ. ಟಾನ್ಸಿಲ್‌ಗಳು ಒಮ್ಮೆ ಸೋಂಕಿಗೆ ಒಳಗಾದರೆ ಆಗಾಗ ಸೋಂಕಿಗೆ ಒಳಗಾಗುತ್ತಲೇ ಇರುತ್ತವೆ. ಈ ರೀತಿ ತೊಂದರೆಯಿಂದ ಬಳಲುವವರು ಹವಾಮಾನ ಬದಲಾಗುತ್ತಿದ್ದಂತೆ ತುಂಬಾ ಎಚ್ಚರಿಕೆ ವಹಿಸಬೇಕು.

ಅದರಲ್ಲೂ ಮಳೆಗಾಲದಲ್ಲಿ ಕೆಮ್ಮು, ಶೀತ ಅಧಿಕವಾಗಿ ಉಂಟಾಗುವುದರಿಂದ ಈ ಟಾನ್ಸಿಲ್ ತೊಂದರೆ ಮರುಕಳಿಸಬಹುದು. ಟಾನ್ಸಿಲ್ ತೊಂದರೆಯು ಅಡೆನೋವೈರಸ್‌ಗಳು, ಇನ್ ಫ್ಲೂಯೆಂಜಾದಂತಹ ವೈರಸ್‌ಗಳಿಂದ ಉಂಟಾಗಬಹುದು.

**ಈ ಕಾಯಿಲೆ ಕಾಣಿಸಿಕೊಂಡರೆ ಈ ಕೆಳಗಿನ ಪ್ರಮುಖ ಲಕ್ಷಣಗಳಿಂದ ಗುರುತಿಸಬಹುದು.**

**ಲಕ್ಷಣಗಳು:**

01. ಟಾನ್ಸಿಲ್‌ಗಳು ಉರಿ ಊತಕ್ಕೊಳಗಾಗಿ ಬಾತುಕೊಳ್ಳಬಹುದು.
02. ಶ್ವಾಸನಾಳದ ಅಡಚಣೆ ಉಂಟಾದರೆ ನೋವು ಮತ್ತು ಉಸಿರಾಟದ ತೊಂದರೆ.
03. ಗಂಟಲು ನೋವು (ಗಂಟಲು ಮುಟ್ಟಲೂ ಸಾಧ್ಯವಾಗದಂತಹ ನೋವು).
04. ಟಾನ್ಸಿಲ್‌ಗಳು ಕೆಂಪಾಗುವುದು.
05. ಗಂಟಲಿನಲ್ಲಿ ನೋವಿನಿಂದ ಕೂಡಿದ ಮಚ್ಚೆಗಳು ಅಥವಾ ಹುಣ್ಣುಗಳು
06. ಧ್ವನಿ ವ್ಯತ್ಯಾಸ ಉಂಟಾಗುವುದು ಅಥವಾ ಸ್ವರ ಇಲ್ಲದಾಗುವುದು
07. ತಲೆನೋವು
08. ಹಸಿವು ಇಲ್ಲದಿರುವುದು ಮತ್ತು ತಿನ್ನಲು ಸಾಧ್ಯವಾಗುವುದಿಲ್ಲ
09. ಕಿವಿ ನೋವು

10. ಬಾಯಿ ವಾಸನೆ
11. ಕುತ್ತಿಗೆ ಹಾಗೂ ದವಡೆಯ ಬಳಿ ಗ್ರಂಥಿಗಳು ಊದಿಕೊಳ್ಳುವುದು.
12. ಕಷ್ಟವಾದ ನುಂಗುವಿಕೆ/ ಉಗುಳು ಮತ್ತು ಊಟ ನುಂಗಲು ನೋವು ಗಂಟಲು ಪರೀಕ್ಷೆ ಮಾಡಿದಾಗ – ಟಾನ್ಸಿಲ್‌ಗಳು ಕೆಂಪಾಗಿ, ಊದಿರುತ್ತದೆ ಹಾಗೂ ಟಾನ್ಸಿಲ್‌ಗಳ ಮೇಲೆ ಒಂದು ಬೆಳೆದ ಪದರೆ ಕಾಣುತ್ತದೆ.

**ಟಾನ್ಸಿಲ್ ಬಂದರೆ ಪಾಲಿಸಬೇಕಾದ ಎಚ್ಚರಿಕೆಗಳು:**

01. ಸ್ವಚ್ಛತೆ : ಊಟವನ್ನು ಮಾಡುವ ಮೊದಲು ಕೈಗಳನ್ನು ಶುಚಿಗೊಳಿಸಬೇಕು. ಶೀತ, ಕೆಮ್ಮು ಇದ್ದರೆ ಸ್ಪೂನ್ ಬಳಸಿ ಊಟ ಮಾಡುವುದು ಒಳ್ಳೆಯದು. ಇತರರು ಕೆಮ್ಮುವಾಗ ಅಥವಾ ಸೀನುವಾಗ ಅವರಿಂದ ಸ್ವಲ್ಪ ದೂರವಿರಬೇಕು.
02. ತಣ್ಣಗಿನ ಪದಾರ್ಥ ತಿನ್ನಬಾರದು : ತಣ್ಣೀರು ಕುಡಿಯುವುದಾಗಲಿ, ತಣ್ಣಗಿನ ಪದಾರ್ಥ ತಿನ್ನುವುದಾಗಲಿ ಮಾಡಬಾರದು.
03. ಸಿಟ್ರಿಸ್ ಅಂಶವಿರುವುದನ್ನು ತಿನ್ನಬಾರದು: ಸಿಟ್ರಿಸ್ ಅಂಶವಿರುವ ಪದಾರ್ಥಗಳಿಂದ ದೂರವಿರಬೇಕು
04. ಮಧ್ಯಪಾನ, ಧೂಮಪಾನದಿಂದ ದೂರವಿರಬೇಕು: ಟಾನ್ಸಿಲ್ ತೊಂದರೆ ಇರುವವರು ಮದ್ಯಪಾನ ಮತ್ತು ಧೂಮಪಾನ ಅಭ್ಯಾಸವಿದ್ದರೆ ಅದನ್ನು ಬಿಡಬೇಕು.
05. ಆಹಾರ: ಟಾನ್ಸಿಲ್ ಬಂದರೆ ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಬೇಕು ಮತ್ತು ಮೃದುವಾದ ಆಹಾರ ಸೇವನೆ ಮಾಡಬೇಕು.
06. ಚಿಕಿತ್ಸೆ: ಈ ರೀತಿ ತೊಂದರೆ ಕಾಣಿಸಿಕೊಂಡರೆ ನಿರ್ಲಕ್ಷ್ಯ ಮಾಡದೆ ವೈದ್ಯರನ್ನು ಕಂಡು ಸೂಕ್ತ ಚಿಕಿತ್ಸೆ ತೆಗೆದುಕೊಳ್ಳಬೇಕು. ಈ ರೋಗ ಉಲ್ಬಣಗೊಂಡರೆ ಮಾತ್ರ ಶಸ್ತ್ರ ಚಿಕಿತ್ಸೆ ಮಾಡಿ ಗುಣಪಡಿಸಲಾಗುವುದು.

**ಉಪಚಾರ ವಿಧಾನಗಳು:**

01. ವಿಶ್ರಾಂತಿ ಹಾಗೂ ಹೆಚ್ಚು ನೀರನ್ನು ಕೊಡಬೇಕು.
02. ನೋವಿನ ಮಾತ್ರೆ ಹಾಗೂ ರೋಗನಿರೋಧಕ ಮಾತ್ರೆಗಳನ್ನು 7–10 ದಿನಗಳಿಗೆ ಕೊಡಲಾಗುತ್ತದೆ.
03. ಟಾನ್ಸಿಲೆಕ್ಟಮಿಯನ್ನು ಈ ಕಾರಣಗಳಿಂದ ಮಾಡಲಾಗುತ್ತದೆ. ವರ್ಷದಲ್ಲಿ 7 ಕ್ಕಿಂತ ಹೆಚ್ಚು ಸಲವಾದರೆ 2 ವರ್ಷ, ಸತತವಾಗಿ ಪ್ರತಿ ವರ್ಷವು 5 ಸಲವಾದರೆ 3 ವರ್ಷ ಸತತವಾಗಿ ಪ್ರತಿ ವರ್ಷವು 3 ಸಲವಾದರೆ.

**ರೋಗ ನಿಯಂತ್ರಣ:**

01. ಮಕ್ಕಳಿಗೆ ತಂಪು ಪದಾರ್ಥಗಳನ್ನು, ಪಾನಿಯಗಳನ್ನು ಕೊಡಬಾರದು.
02. ಈ ರೋಗ ಲಕ್ಷಣಗಳು ಕಂಡ ತಕ್ಷಣವೇ ವೈದ್ಯರ ಬಳಿ ಹೋಗಿ ಚಿಕಿತ್ಸೆ ಪಡೆಯಬೇಕು. ಗಂಟಲಿನಲ್ಲಿರುವ ಟಾನ್ಸಿಲ್ ಗ್ರಂಥಿಯು ಮಕ್ಕಳಿಗೆ ರೋಗನಿರೋಧಕ ಶಕ್ತಿಯನ್ನು ಪ್ರಸಧಿಸುತ್ತದೆ. ಆದರೆ ತಂಪು ಪಾನೀಯ ಐಸ್ ಕ್ರೀಮ್ ಮತ್ತು ಶೀತದ ಪದಾರ್ಥಗಳ ಸೇವನೆಯಿಂದ ಈ ಶೀತದ ಗುಣಗಳು ಉಂಟಾಗುತ್ತದೆ. ॐ

**ಸಮೃದ್ಧಿ ಸುಜ್ಞಾನ**

**ಯಾರಿಗೆ ಬದುಕುವುದಕ್ಕೆ ಬರುವುದೊ, ಅವರು ಯಾವುದೇ ಸೌಲಭ್ಯವಿಲ್ಲದಿದ್ದರೂ ಸಂತೋಷವಾಗಿರುತ್ತಾರೆ. ಯಾರಿಗೆ ಬದಕಲು ಬರುವುದಿಲ್ಲವೊ, ಅವರು ಎಲ್ಲ ಸೌಲಭ್ಯವಿದ್ದರೂ ದುಃಖಪಡುತ್ತಾರೆ.**

# ಭಕ್ತರ ತಪ್ಪನ್ನು ತಿದ್ದುವ ಭಗವಂತ

ಆಶಾ ನಾಗಭೂಷಣ.



ಒಂದು ಪಟ್ಟಣದಲ್ಲಿ ನಿತ್ಯಾನಂದ ಗುಪ್ತ ಎಂಬುವನು ತನ್ನ ಪತ್ನಿ ಗೋಮತಿ ಜೊತೆ ವಾಸಿಸುತ್ತಿದ್ದನು. ಬಹಳ ದೊಡ್ಡ ವ್ಯಾಪಾರಿ, ಬೇಕಾದಷ್ಟು ಸಂಪಾದನೆ ಇದೆ. ನಿತ್ಯಾನಂದ ಪತ್ನಿ ಗೋಮತಿ, ಒಳ್ಳೆಯ ಸಾಧ್ವಿಮಣಿ, ಯಾರೇ ಬಂದು ಕೇಳಿದರೆ ಇಲ್ಲ ಎನ್ನದೆ ಇರುವುದನ್ನು ಸಂತೋಷವಾಗಿ ಕೊಡುತ್ತಿದ್ದಳು. ನಿತ್ಯಾನಂದ ಮನೆಯಲ್ಲಿದ್ದರೆ ಕೊಡಬೇಡ ಎನ್ನುತ್ತಿದ್ದನೊ ಏನೋ? ಆದರೆ ವ್ಯವಹಾರಕ್ಕೆ ಹೊರಗೆ ಹೆಚ್ಚು ಇರುವುದರಿಂದ, ಪತ್ನಿ ಕೊಡುವುದನ್ನು ಅವನೆಂದು ಕೇಳಿರಲಿಲ್ಲ. ನಿತ್ಯಾನಂದ ವಿಷ್ಣುವಿನ ಪರಮ ಭಕ್ತನಾಗಿದ್ದನು. ನಿತ್ಯವು ಲಕ್ಷ್ಮೀ ನಾರಾಯಣರ ದೇವಸ್ಥಾನಕ್ಕೆ ಹೋಗುತ್ತಿದ್ದ. ಪೂಜೆ ಮಂಗಳಾರತಿ ಮಾಡಿಸುತ್ತಿದ್ದ, ಭಜನೆ ಮಾಡುತ್ತಿದ್ದ. ದೇವಸ್ಥಾನದ ವಿಶೇಷ ಪೂಜಾ ಕಾರ್ಯಗಳಲ್ಲಿ ತಾನು ಭಾಗಿಯಾಗುತ್ತಿದ್ದ. ಮನೆಯಲ್ಲಿ ಲಕ್ಷ್ಮೀನಾರಾಯಣ ವಿಗ್ರಹ ಇಟ್ಟುಕೊಂಡು, ನಿತ್ಯವೂ ಹೂವಿನ ಅಲಂಕಾರ, ಸ್ತೋತ್ರ ಪಠನೆ, ಪೂಜೆ ನಂತರ ಬಗೆ ಬಗೆಯ ನೈವೇದ್ಯ ತೋರಿಸಿ, ಮಂಗಳಾರತಿ ಮಾಡುತ್ತಿದ್ದ. ಆದರೆ ಇವನು ಕಂಜೂಸ್ ಆಗಿದ್ದ ಕಾರಣ ಯಾರಿಗೂ ದಾನ ಮಾಡುತ್ತಿರಲಿಲ್ಲ.

ಹೀಗಿರುವಾಗ ಒಂದು ದಿನ ನಿತ್ಯಾನಂದನು ಮನೆಯಲ್ಲೆ ಇದ್ದನು. ಆ ಹೊತ್ತಿಗೆ ಒಬ್ಬ ಬಡವ, ಮನೆ ಮುಂದೆ ಬಂದು ಮೂರು ದಿನದಿಂದ ಆಹಾರವಿಲ್ಲ ಸ್ವಲ್ಪ ತಿನ್ನಲು ಕೊಡಿ ಎಂದು ಬೇಡಲು ಬಂದಿದ್ದನು. ಗೋಮತಿ ಅವನನ್ನು ನಿಲ್ಲಲು ಹೇಳಿ ಅವನಿಗಾಗಿ ತಿಂಡಿ, ಸ್ವಲ್ಪ ಅಡುಗೆಯನ್ನು ಬಡಿಸಿಕೊಂಡು ಕೊಡಲು ಹೊರಟಳು. ಇದನ್ನು ನೋಡುತ್ತಿದ್ದ ನಿತ್ಯಾನಂದನು, ಪತ್ನಿಗೆ ನೀನು ಯಾರಿಗೂ ದಾನ ಕೊಡಬಾರದು, ಅವನು ಅಷ್ಟು ಗಟ್ಟಿಮುಟ್ಟಾಗಿದ್ದಾನೆ ದುಡಿದು ತಿನ್ನಲಿ, ಹೀಗೆ ಕೈ ಕಾಲು ಗಟ್ಟಿ ಇದ್ದವರಿಗೆ ನಾವು ದಾನ ಮಾಡುತ್ತಾ ಹೋದರೆ ಕೂಡಿಟ್ಟ ನಮ್ಮ ಸಂಪತ್ತೆಲ್ಲ ಕರಗಿ ಹೋಗುತ್ತದೆ. ನಾವು ಕಷ್ಟಪಟ್ಟು ದುಡಿದಿರುವುದನ್ನು ಬಂದವರಿಗೆಲ್ಲ ಕೊಟ್ಟರೆ, ಕೈಕಾಲಲ್ಲಿ ಶಕ್ತಿ ಇರುವವರು ಬೇಡಿ ತಿಂದು ಸೋಮಾರಿಗಳಾಗುತ್ತಾರೆ ಕೊಡಬಾರದು ಎಂದನು. ಇದನ್ನು ಕೇಳಿಸಿಕೊಂಡ ಆ ಭಿಕ್ಷುಕ ಹಾಗೆ ಹೋದನು.

ಬೇಜಾರಾದ ಗೋಮತಿ, ಹೋಗಲಿ ಬಿಡಿ ಅವನೇನು ಸಂಪತ್ತು ಕೇಳಿದನೇ? ಏನೋ ಸ್ವಲ್ಪ ಆಹಾರ ಕೇಳಿದ. ಹಸಿದವರಿಗೆ ಆಹಾರ ಕೊಡುವುದು ನಮ್ಮ ಧರ್ಮ. ನಮಗಾದರೂ ಬೇಕಾದಷ್ಟು ಸಂಪತ್ತು ಇದೆ ಒಂದು ಹಿಡಿ ಅನ್ನವನ್ನು ಕೊಟ್ಟ ಮಾತ್ರಕ್ಕೆ ನಮ್ಮ ಸಂಪತ್ತು ಕರಗಿ ಹೋಗುವುದಿಲ್ಲ. ಮನುಷ್ಯ ಮನುಷ್ಯನಿಗೆ ಸಹಾಯ ಮಾಡಬೇಕು. ಇಲ್ಲದಿದ್ದರೆ ಭಗವಂತನು ಮೆಚ್ಚುವುದಿಲ್ಲ ಎಂದಳು. ನಿತ್ಯಾನಂದನು, ಹೌದೌದು ನಿನ್ನ ಮಾತು ಕೇಳಿ ಬದುಕಿದ್ದರೆ, ನಾವು ಎರಡು ಹೊತ್ತಿನ ಊಟಕ್ಕೂ ಒದ್ದಾಡಬೇಕಾಗುತ್ತೆ. ನಿನಗೆ ಬುದ್ಧಿ ಹೇಳಿ ಪ್ರಯೋಜನವಿಲ್ಲ ಎಂದನು. ಹೆಂಡತಿ ಏನು ಹೇಳದೆ ಸುಮ್ಮನಾದಳು. ಮರುದಿನ ಬೆಳಗ್ಗೆ ಮತ್ತೊಬ್ಬ ಭಿಕ್ಷುಕ ಬಂದನು. ಮನೆಯಲ್ಲಿಯೇ ಇದ್ದ ನಿತ್ಯಾನಂದ ಅವನೇ ಮುಂದೆ ಬಂದು ಆ ಭಿಕ್ಷುಕನಿಗೆ ಏನೂ ಕೊಡುವುದಿಲ್ಲ ಎಂದು ಹಾಗೆ ಕಳುಹಿಸಿದ. ಮತ್ತೊಂದು ದಿನ ಮುದುಕಿ ಬೇಡಲು ಬಂದಳು ಆಗ ಅವನು ಇರಲಿಲ್ಲ. ಗೋಮತಿ ಆ ಬಡವಿಗೆ ಆಹಾರ, ಸೀರೆ, ಸ್ವಲ್ಪ ಹಣ ಕೊಟ್ಟು ಕಳಿಸಿದಳು.

ಹೀಗಿರುವಾಗ, ಒಂದು ದಿನ ಕೆಲಸದ ನಿಮಿತ್ತ ನಿತ್ಯಾನಂದನು ಪಕ್ಕದ ಗ್ರಾಮಕ್ಕೆ ಒಂದು ಗಾಡಿಯಲ್ಲಿ ಹೊರಟನು. ಗಾಡಿಯಲ್ಲಿ ಅವನೊಬ್ಬನೇ ಇದ್ದನು. ಅಲ್ಲೊಬ್ಬ ವ್ಯಕ್ತಿ ಓಡಿ ಬಂದು, ಸ್ವಾಮಿ ನಾನು ಬೇಡಲು ಬಂದ ಬಿಕಾರಿಯಲ್ಲ. ನನಗೆ ಬೇಕಾದಷ್ಟು ಸಂಪತ್ತು ಇದೆ. ಈ ದಿನ ನಾನು ತಂದ ಹಣವನ್ನು ಕಳ್ಳರು ಅಪಹರಿಸಿದರು. ನನ್ನ ಗ್ರಾಮವು ಬಹಳ ದೂರದಲ್ಲಿದೆ ನಡೆದು ಹೋಗಲು ಆಗುವುದಿಲ್ಲ. ದಯವಿಟ್ಟು ನನಗೆ ಸಹಾಯ ಮಾಡಿ. ನಿಮ್ಮ ಜೊತೆಗಾಡಿಯಲ್ಲಿ ನಾನೂ ಬರುತ್ತೇನೆ. ನಿಮ್ಮ ಉಪಕಾರಕ್ಕೆ ನಾನು ಕೃತಜ್ಞನಾಗಿರುತ್ತೇನೆ. ನನ್ನ ಮನೆ ಬಂದ ಕೂಡಲೇ ಗಾಡಿಯ ಬಾಡಿಗೆಯನ್ನು ಕೊಡುತ್ತೇನೆ ಎಂದನು. ನಿತ್ಯಾನಂದ, ಅವನನ್ನೇ ನೋಡುತ್ತಾ, ಓಹೋ ಭಿಕ್ಷೆ ಬೇಡಲು ಇದೊಂದು ಹೊಸ ನಾಟಕವೇ? ನೀವೆಲ್ಲಾ ಎಂತೆಂಥ ಚಾಲಾಕಿ ಮನುಷ್ಯರು, ಮೈಮುರಿದು ದುಡಿದು ತಿನ್ನಲು ನೀವೆಲ್ಲ ಸೋಮಾರಿಗಳು. ನಡಿಯಾಚೆ, ಸಹಾಯ ಅಂತೆ ಸಹಾಯ, ನಾನು ಸಹಾಯ ಮಾಡಲ್ಲ. ನಿನ್ನಂಥ ಎಷ್ಟೋ ಜನ ಭಿಕಾರಿಗಳನ್ನು ನೋಡಿದ್ದೇನೆ. ಗಾಡಿಯವನಿಗೆ ಮುಂದೆ ಓಡಿಸು ಎಂದನು. ಆ ಗ್ರಾಮದಲ್ಲಿ ಇಳಿದ ಮೇಲೆ, ಹಾದಿ ಬೀದಿಯಲ್ಲಿರುವ ಭಿಕ್ಷುಕರು ಬೇಡಲು ಬಂದರೆ ಅವರಿಗೆ ಏನನ್ನು ಕೊಡದೆ ಬೈದು ಮುಂದೆ ಹೋಗುತ್ತಿದ್ದನು.

ಇದನ್ನೆಲ್ಲ ದೇವಲೋಕದಲ್ಲಿ ನಾರಾಯಣನ ಜೊತೆ ಕುಳಿತು ನೋಡುತ್ತಿದ್ದ ಲಕ್ಷ್ಮಿಯು, ನಾರಾಯಣನಿಗೆ ಸ್ವಾಮಿ, ನಿತ್ಯಾನಂದನನ್ನು ನೋಡಿದಿರಾ? ಅಷ್ಟು ಸಂಪತ್ತು ಇದ್ದರೂ ಒಬ್ಬರಿಗೂ ಬಿಡಿಗಾಸು ಕೊಡುವುದಿಲ್ಲ, ತಿನ್ನಲು ಆಹಾರ ಕೊಡುವುದಿಲ್ಲ, ಹೋಗಲಿ ಕೇಳಿದವರಿಗೆ ಸಹಾಯವನ್ನು ಮಾಡುವುದಿಲ್ಲ, ಇವನೆಂತ ಮೂರ್ಖ ಮನುಷ್ಯ ಎಂದಳು. ಅದಕ್ಕೆ ವಿಷ್ಣು, ದೇವಿ ಅದು ನನಗೂ ಗೊತ್ತು.

ಇದನ್ನೆ ಕುರಿತು ನಾನು ಯೋಚಿಸುತ್ತೇನೆ. ಏಕೆಂದರೆ ಅವನು ನನ್ನ ಮಹಾ ದೊಡ್ಡ ಭಕ್ತ. ಆದರೆ ಅವನ ಮನಸ್ಸು ತುಂಬಾ ಚಿಕ್ಕದು. ಇದನ್ನು ಕೇಳಿದ ಲಕ್ಷ್ಮಿ, ಹಾಗಾದರೆ ಸ್ವಾಮಿ ಅವನನ್ನು ನೀವು ಉದ್ಧಾರ ಮಾಡಿರಿ ಎಂದಳು. ಯೋಚಿಸಿದ ವಿಷ್ಣು, ಒಂದು ರಾತ್ರಿ ನಿತ್ಯಾನಂದ ಗಾಢವಾದ ನಿದ್ದೆಯಲ್ಲಿದ್ದಾಗ ಅವನಿಗೆ ಕನಸು ಕಂಡಿತು. ಅದರಲ್ಲಿ ನಾರಾಯಣನು ದರ್ಶನ ಕೊಟ್ಟು, ನಿತ್ಯಾನಂದ ನೀನು ನನ್ನ ಪರಮ ಭಕ್ತನೇನು ಸರಿ, ಆದರೆ ನೀನೇಕೆ ಆಹಾರವಾಗಲಿ ಹಣವಾಗಲಿ ದಾನ ಮಾಡುವುದಿಲ್ಲ. ನಿನ್ನ ಗಮನವೆಲ್ಲ ಸಂಪಾದನೆಯ ಮೇಲೆ ಇದೆ. ನಿತ್ಯಾನಂದನು ಕ್ಷಮಿಸಿ ಪ್ರಭು, ನೀವು ಹೇಳಿದಂತೆ ನನ್ನ ಗಮನವೆಲ್ಲ ಸಂಪಾದನೆಯ ಮೇಲೆ ನೆಟ್ಟಿದೆ. ಇನ್ನು ಮುಂದೆ ನೀವು ಹೇಳಿದಂತೆ ದಾನ ಮಾಡುತ್ತೇನೆ ಎಂದನು. ವಿಷ್ಣುವಿಗೆ ಸಂತೋಷವಾಯಿತು, ನಾರಾಯಣನು ಹೀಗೆ ಹೇಳಿದನು, ನಿತ್ಯಾನಂದ ನಾಳೆ ಬೆಳಿಗ್ಗೆ ನೀನು ಒಬ್ಬ ಬ್ರಾಹ್ಮಣ ದಂಪತಿಯನ್ನು ಹುಡುಕಿ ಮನೆಗೆ ಕರೆತಂದು, ಅವರಿಗೆ ಹೊಟ್ಟೆ ತುಂಬಾ ಬಡಿಸಿ ಸಂತೋಷ ಪಡಿಸಬೇಕು. ನಿನಗೆ ತೃಪ್ತಿಯಾಗದಿದ್ದರೆ ಅವರ ಜೋಳಿಗೆಯಲ್ಲಿ ತುಂಬುವಷ್ಟು ದವಸ ಧಾನ್ಯ ಹಣ ಏನು ಬೇಕಾದರೂ ಹಾಕಿ ತುಂಬಿಸಿ ಬಿಡು. ಇದರಿಂದ ನಿನಗೆ ತುಂಬಾ ಒಳ್ಳೆಯದಾಗುತ್ತದೆ ಎಂದು ಅಂತರ್ದಾನನಾದನು.

ಕನಸಿನಿಂದ ಎಚ್ಚೆತ್ತ ನಿತ್ಯಾನಂದ, ಪತ್ನಿಯನ್ನು ಎಬ್ಬಿಸಿ ಕನಸಿನ ವಿಚಾರವನ್ನು ಹೇಳಿದ. ಮರುದಿನ ಗಂಡ ಹೆಂಡತಿ ಬೇಗ ಎದ್ದು ದೇವರ ಪೂಜೆಯನ್ನು ಮಾಡಿ, ಬ್ರಾಹ್ಮಣ ದಂಪತಿಯನ್ನು ಕರೆತರಲು ಹುಡುಕಲು ಹೊರಟರು, ಅದೇನೋ, ಎಷ್ಟೇ ಅಲೆದರು ಅವರಿಗೆ ಬ್ರಾಹ್ಮಣ ದಂಪತಿ ಸಿಗಲಿಲ್ಲ. ಸುಸ್ತಾಗಿ ಮನೆಗೆ ಬಂದರು. ಎಲ್ಲಿ ಹುಡುಕಿ ತರೋಣ ಬ್ರಾಹ್ಮಣ ದಂಪತಿಯನ್ನು ಎಂದು ಚಿಂತಿಸುತ್ತಾ ಕುಳಿತಿರುವಾಗ ಹೊರಗಿನ ಬಾಗಿಲಿಂದ ಒಂದು ಧ್ವನಿ ಕೇಳಿಸಿತು. ಬ್ರಾಹ್ಮಣ ಗಂಡ ಹೆಂಡತಿ ಬಾಗಿಲಲ್ಲಿ ನಿಂತಿದ್ದು, ನಾವು ಬಹಳ ದೂರದಿಂದ ಬಂದಿದ್ದೇವೆ ನಿನ್ನೆಯಿಂದ ಆಹಾರ ತಿಂದಿಲ್ಲ ಬಹಳ ಹಸಿದಿದ್ದೇವೆ. ದಯವಿಟ್ಟು ಏನಾದರೂ ಸ್ವಲ್ಪ ಭೋಜನವನ್ನು ಕೊಡಿ ಎಂದು ಕೇಳಿದರು. ನಿತ್ಯಾನಂದ ಸಂತೋಷದಿಂದ ಎದ್ದು ಬಂದು, ತಾವು ಬ್ರಾಹ್ಮಣರೇ ಎಂದು ಕೇಳಿದನು. ಹೌದು ಸ್ವಾಮಿ ಬಡ ಬ್ರಾಹ್ಮಣ ಎಂದನು.

ಬಹಳ ಬಳಲಿದ್ದೀರಿ ಬನ್ನಿ ಒಳಗೆ ನಿಮಗಾಗಿ ಬಿಸಿ ಭೋಜನ ಕೊಡುತ್ತೇವೆ ಎಂದು ಒಳಗೆ ಕರೆದು ಕೂರಿಸಿ, ಕುಡಿಯಲು ನೀರು ಕೊಟ್ಟು ಉಪಚರಿಸಿದನು. ಗೋಮತಿ ಬಿಸಿಬಿಸಿಯಾದ ಪೂರಿ ಪಲ್ಯ ಅನ್ನ, ಸಾರು, ಬಡಿಸಿದಳು ಬ್ರಾಹ್ಮಣ ದಂಪತಿ ನಿಧಾನವಾಗಿ ಒಂದೊಂದೇ ತಿನ್ನುತ್ತ ಅಡಿಗೆ ಮನೆಯಲ್ಲಿದ್ದ ಎಲ್ಲಾ ಅಡುಗೆ ಪದಾರ್ಥವನ್ನು ಬಿಡದಂತೆ ಹಾಕಿದ್ದೆಲ್ಲ ಖಾಲಿ ಮಾಡಿದರು. ಇನ್ನು ಬಡಿಸಲು ಏನೂ ಇರಲಿಲ್ಲ. ನಿತ್ಯಾನಂದನಿಗೆ ಬೇಸರವಾಯಿತು. ದೇವರ ಮುಂದೆ ನಿಂತು ಹೇ ಭಗವಾನ್ ವಿಷ್ಣು, ನಾನು ಬ್ರಾಹ್ಮಣ ದಂಪತಿಗೆ ಹೊಟ್ಟೆ ತುಂಬಾ ಬಡಿಸಲಾಗಲಿಲ್ಲ ಮಾಡಿದ ಅಡುಗೆ ಎಲ್ಲ ಖಾಲಿಯಾಯಿತು ಈಗ ಏನು ಮಾಡಲಿ ಎಂದು ಬೇಡಿದನು. ಆಗ ಊಟಕ್ಕೆ ಕುಳಿತಿದ್ದ ಬ್ರಾಹ್ಮಣ ನಿತ್ಯಾನಂದ ನೀನು ಬೇಜಾರು ಮಾಡಿಕೊಳ್ಳಬೇಡ, ನೀವಿಬ್ಬರೂ ಪ್ರೀತಿಯಿಂದ ಬಡಿಸಿದರಿ ಅದೇ ನಮಗೆ ತೃಪ್ತಿಯಾಗಿದೆ ಸಾಕು ಎಂದನು. ಆದರೆ ನಿತ್ಯಾನಂದನಿಗೆ ಸಮಾಧಾನವಾಗಲಿಲ್ಲ. ಆಗ ಕನಸಿನಲ್ಲಿ ವಿಷ್ಣು ಹೇಳಿದ್ದು ನೆನಪಾಯಿತು. ನಿನಗೆ ತೃಪ್ತಿಯಾಗುವಷ್ಟು ಬ್ರಾಹ್ಮಣನು ತಂದ ಜೋಳಿಗೆ ತುಂಬಿಸಿ ಬಿಡು, ಇದರಿಂದ ನಿನಗೆ ಒಳ್ಳೆಯದಾಗುತ್ತದೆ ಎಂದಿದ್ದು ನೆನಪಾಯಿತು. ಮನೆಯಲ್ಲಿದ್ದ ದವಸ ಧಾನ್ಯ, ಆತನ ತಿಜೋರಿಯಿಂದ ಕಂತೆ ಕಂತೆ ಹಣದ ಕಟ್ಟುಗಳನ್ನೇ ತಂದು ಬ್ರಾಹ್ಮಣನ ಜೋಳಿಗೆಗೆ ಹಾಕಿದನು. ಅದು ಸಣ್ಣ ಜೋಳಿಗೆ ಆದರೂ ತುಂಬಲಿಲ್ಲ. ನಿತ್ಯಾನಂದ ಪತ್ನಿಯನ್ನು ಇನ್ನೇನು ಕೊಡಲಿ ಎಂದು ಕೇಳಿದ. ಒಳ್ಳೆಯ ಬಟ್ಟೆಗಳನ್ನೆಲ್ಲ ತಂದು ಹಾಕಿದಳು. ಆದರೂ ತುಂಬಲಿಲ್ಲ. ಮತ್ತಷ್ಟು ತುಂಬಿದ ಹಣವನ್ನೆಲ್ಲ ತಂದು ಹಾಕಿದರು. ಅದು ಆಭರಣಗಳು, ಬೆಳ್ಳಿ ಪಾತ್ರೆಗಳು, ಅಡುಗೆ ಮನೆಯ ಬಳಸುವ ಪಾತ್ರೆಗಳು, ಬೆಲೆ ಬಾಳುವ ಎಲ್ಲವನ್ನು ತಂದು ಹಾಕಿದರೂ ಜೋಳಿಗೆ ತುಂಬಲಿಲ್ಲ.

ಗೋಮತಿ ಏನು ಮಾಡಲಿ ತಿಜೋರಿಯೆಲ್ಲ ಖಾಲಿಯಾಯಿತು ಆದರೂ ತುಂಬಲಿಲ್ಲ ಎಂದನು. ಮನೆಯಲ್ಲಿದ್ದ ಬೀರು ಪೆಟಾರಿ, ಬೆಂಚು, ಕುರ್ಚಿ, ಹಾಕಿದರು ಜೋಳಿಗೆ ತುಂಬಲಿಲ್ಲ. ಮತ್ತೆ ಪತ್ನಿಯನ್ನು ಏನು ಮಾಡಲಿ ಗೋಮತಿ ಇನ್ನೇನು ಇದೆ ಎಂದನು. ಆಕೆ ನಮ್ಮ ಬಳಿ ಇನ್ನು ಏನು ಇಲ್ಲ. ಆದರೆ ನಮ್ಮದು ಎನ್ನುವ ಈ ಮನೆ ಇದೆ ಇದನ್ನು ಕೊಟ್ಟುಬಿಡೋಣ ಎಂದಳು. ನಿತ್ಯಾನಂದನು ಅದೇ ಸರಿ ಎಂದು ಬ್ರಾಹ್ಮಣನಿಗೆ ತನ್ನ ಮನೆಯ ಕಾಗದ ಪತ್ರವನ್ನೆಲ್ಲ ತಂದುಕೊಟ್ಟು, ಈ ಮನೆ ನಿಮ್ಮದು ನೀವು ಹಾಯಾಗಿ ಈ ಮನೆಯಲ್ಲಿ ಇರಿ ನಾವು ಹೊರಗೆ ಹೋಗುತ್ತೇವೆ ಎಂದು ಹೊರಟರು.

ಗಂಡ ಹೆಂಡತಿ ಹೊರಡಲು ಹೆಜ್ಜೆ ಇಟ್ಟಿದ್ದರೋ, ಇಲ್ಲವೋ ಸಾಕ್ಷಾತ್ ವಿಷ್ಣು ಮಹಾಲಕ್ಷ್ಮಿ ಪ್ರತ್ಯಕ್ಷರಾದರು. ನಿತ್ಯಾನಂದನು ಇಬ್ಬರನ್ನ ನೋಡಿ ಪ್ರಭು, ನಾನು ಏನು ನೋಡುತ್ತಿರುವೆ? ತಾಯಿ ಮಹಾಲಕ್ಷ್ಮಿ ತಂದೆ ಮಹಾವಿಷ್ಣು, ನಮ್ಮ ಮನೆಗೆ ಬಂದು ದರ್ಶನ ಕೊಟ್ಟಿದ್ದೀರಾ? ಎಂಥಾ ಕಠಿಣ ತಪಸ್ಸು ಮಾಡಿದವರಿಗೂ ದರ್ಶನ ಕೊಡದ ನೀವು, ನಮ್ಮ ಮನೆಗೆ ಬಂದು ದರ್ಶನ ಕೊಟ್ಟಿದ್ದೀರಿ ಮಹಾಪ್ರಭು ನನ್ನದು ಎಂತಹ ಸೌಭಾಗ್ಯ. ನಾನು ಮಾಡಿದ್ದು ದೊಡ್ಡ ಅಪರಾಧ ನನ್ನನ್ನು ಕ್ಷಮಿಸಿ ಎಂದು ಕಾಲಿಗೆ ನಮಸ್ಕರಿಸಿದನು. ನಿತ್ಯಾನಂದ ನಿನ್ನನ್ನು ನೋಡಿ ನನಗೆ ಸಂತೋಷವಾಯಿತು. ನಿನ್ನ ಪತ್ನಿ ಮಹಾ ಪುಣ್ಯವಂತೆ ಅವಳಿಗೆ ನಾನು ದರ್ಶನ ಕೊಡುವಂತಾಯಿತು. ನಾನು ಹೇಳಿದಂತೆ ನೀನು ಮಾಡಿದೆ ಯಾವುದನ್ನು ಸುಳ್ಳು ಹೇಳಲಿಲ್ಲ ಆಸೆಪಟ್ಟು ಮುಚ್ಚಿಟ್ಟುಕೊಳ್ಳಲಿಲ್ಲ. ನೀನು ನನ್ನ ಪರೀಕ್ಷೆಯಲ್ಲಿ ಗೆದ್ದಿರುವೆ. ನಿನ್ನ ಪ್ರಾಮಾಣಿಕವಾದ ಶ್ರದ್ಧೆ ಭಕ್ತಿಗಳಿಗೆ ನಾನು ಸಂತೃಪ್ತನಾಗಿದ್ದೇನೆ. ನನಗೆ ಎಲ್ಲವನ್ನು ದಾನ ಮಾಡಿ ನೀನೊಬ್ಬ ಮಹಾದಾನಿ ಎನಿಸಿರುವೆ. ನಿಮ್ಮಿಬ್ಬರಿಗೂ ಸಕಲ ಸನ್ಮಂಗಳವಾಗಲಿ ಎಂದು ಆಶೀರ್ವದಿಸಿ ಅದೃಶ್ಯ ರಾದರು, ನೋಡು ನೋಡುತ್ತಿದ್ದಂತೆ ನಿತ್ಯಾನಂದನ ಮನೆಮೊದಲು ಹೇಗೆ ಇತ್ತು, ಮನೆ ಹಾಗೆ ತುಂಬಿತು.

ನಿತ್ಯಾನಂದನು, ಭಗವಂತನ ಮಾತಿನಂತೆ ಬಡಬಗ್ಗರಿಗೆ ಅನ್ನ, ವಸ್ತ್ರ, ಬಂದ ಲಾಭದಲ್ಲಿ ಹಣವನ್ನು ದಾನ ಮಾಡುತ್ತಾ ಬಂದನು. ಅವನು ಮಾಡುತ್ತಿದ್ದ ಕೆಲಸವೆಲ್ಲವೂ ಹೂವಿನ ಸರ ಎತ್ತಿದಷ್ಟೇ ಸುಲಭವಾಗಿ ನಡೆಯಿತು. ಬಹಳ ಕಾಲ ಸಂತೋಷದಿಂದ ಜೀವಿಸಿ, ಭಗವಂತನ ಪಾದ ಸೇರಿದರು. ॐ

**ನಮಸ್ತೇಸ್ತು ಮಹಾಮಾಯೆ ಶ್ರೀ ಪೀಠೇ ಸುರಪೂಜಿತೇ**
**ಶಂಖ ಚಕ್ರ ಗದಾಹಸ್ತೇ ಮಹಾಲಕ್ಷ್ಮೀ ನಮೋಸ್ತುತೇ !!**

# ಸುಭಾಷಿತಾನಿ



**ವಿದ್ವಾನ್ ಮಲ್ಲಣ್ಣ,** ವಿಷಯ ಪರಿವೀಕ್ಷಕರು, ಮೈಸೂರು ವಲಯ.

ಬಹಳ ಹಿಂದಿನ ಕಾಲದಿಂದಲೂ ನಮ್ಮ ಜನ ಸುಭಾಷಿತಗಳನ್ನು ಮೆಚ್ಚಿಕೊಂಡು ಅವುಗಳಲ್ಲಿನ ಜಾಣ್ಮೆ, ಪ್ರತಿಭೆ, ಮತ್ತು ಚಾತುರ್ಯಕ್ಕೆ ಮಾರುಹೋಗಿದ್ದಾರೆ, ಅವುಗಳಲ್ಲಿನ ವ್ಯಂಗ್ಯೋಕ್ತಿ ಹಾಗೂ ಅನ್ಯೋಕ್ತಿಗಳ ಸೊಬಗನ್ನು ಅನುಭವಿಸಿ ಮೆಲುಕು ಹಾಕಿದ್ದಾರೆ. ಸುಭಾಷಿತಗಳಲ್ಲಿ ಪ್ರಸ್ತುತವಾಗಿರುವ ವಿಷಯ ಸರ್ವಕಾಲಿಕವಾದದು. ಎಲ್ಲಾ ದೇಶದ ಎಲ್ಲಾ ನಿತ್ಯ ಸತ್ಯಗಳಿಗೂ ಜನರಿಗೂ ಅದು ಅನ್ವಯಿಸುತ್ತದೆ. ಅವು ಮಾನವ ಜೀವನದ ವ್ಯವಹಾರಗಳಿಗೂ ಸಂಬಂಧಿಸಿರುವುದು ಇದಕ್ಕೆ ಕಾರಣ. ಇವು ನಮ್ಮ ಸಂಸ್ಕೃತಿಯ ಪ್ರತೀಕವಾಗಿದೆ. ಇವುಗಳು ಹಳೆಯವು ಎಂಬ ಮಾತೇ ಇಲ್ಲ. ಪ್ರತಿ ಸಾರಿ ಓದಿದಾಗಲೂ ಹೊಸತನವನ್ನು ಕಾಣಬಹುದು ಮತ್ತು ಸರ್ವಕಾಲಿಕ ಸತ್ಯವಾಗಿದೆ.

**ಉತ್ಸಾಹ ಸಂಪನ್ನಂ ಅದೀರ್ಘಸೂತ್ರಂ ಕ್ರಿಯಾವಿಧಿಜ್ಞಂ ವ್ಯಸನೇಷು ಅಸಕ್ತಂ ।**
**ಶೂರಂ ಕೃತಜ್ಞಂ ದೃಢ ಸೌಹೃದಂ ಚ ಲಕ್ಷ್ಮೀ: ಸ್ವಯಂ ಯಾತಿ ನಿವಾಸಹೇತೋ: ॥**

ಜಗತ್ತಿನಲ್ಲಿ ಯಾವಾಗಲೂ ಉತ್ಸಾಹದಿಂದ ಜೀವಿಸುವವನು ಕಾರ್ಯವನ್ನು ನಿಧಾನಿಸದೇ ಮಾಡುವವನು. ಕಾರ್ಯದಕ್ಷತೆಯನ್ನು ಅರಿತವನು, ಯಾವುದೇ ಕೆಟ್ಟ ಚಟದಲ್ಲಿ ಆಸಕ್ತನಾಗದವನು, ಶೂರ ಕೃತಜ್ಞ ಮತ್ತು ಸ್ನೇಹ ಸ್ವಭಾವವನ್ನು ಕಾಪಾಡಿಕೊಂಡವನು ಎಲ್ಲಿರುತ್ತಾನೋ ಅಲ್ಲಿಗೆ ಸಂಪತ್ತು ಶಾಶ್ವತವಾಗಿ ವಾಸಮಾಡಬಹುದೆಂದು ಹುಡುಕಿಕೊಂಡು ಬರುತ್ತಾಳೆ. ಈ ರೀತಿ ಆಲಸಿತನವಿಲ್ಲದ (ಸೋಮಾರಿತನ) ಜೀವನೋತ್ಸಾಹ ಹೊಂದಿ ಎಲ್ಲರೊಂದಿಗೆ ಪ್ರೀತಿಯಿಂದ ವ್ಯವಹರಿಸುವವನು.

ಉಪಕಾರ ಸ್ಮರಣೆಯಿದ್ದವನು ಪರಾಕ್ರಮಿ ಲಕ್ಷ್ಮಿಗೆ ಪ್ರಿಯನು, ಒಳ್ಳೆಯ ಸ್ವಭಾವ ಹೊಂದಿದವರಲ್ಲಿ ಸಂಪತ್ತು ಶಾಶ್ವತವಾಗಿರುವುದೆಂದು ಹಿತೋಪದೇಶದಲ್ಲಿ ಸೂಚಿಸಲಾಗಿದೆ.

**ಕಿಂ ತಯಾ ಕ್ರಿಯತೆ ಧೇನ್ವಾ ಯಾ ನ ಸೂತೆ ನ ದುಗ್ದದಾ ।**
**ಕೋರ್ಥ ಪುತ್ರೇಣ ಜಾತೇನ ಯೋ ನ ವಿದ್ವಾನ್ ನ ಭಕ್ತಿಮಾನ್ ॥**

ದನಗಳು ಮತ್ತು ಮಕ್ಕಳು ಯಾವ ಯಾವ ರೀತಿಯಲ್ಲಿ ಸಫಲರೆನಿಸುತ್ತಾರೆ? ಎಂಬ ವಿಷಯವನ್ನು ಪಂಚತಂತ್ರದಲ್ಲಿ ವಿವರಿಸಿದ್ದಾರೆ.

ಹಾಲನ್ನು ಕೊಡದ ಕರುಗಳಿಗೆ ಜನ್ಮ ನೀಡಿದ ದನವು ಪ್ರಯೋಜನಕ್ಕಾಗುವುದಿಲ್ಲ. ಅದೇ ರೀತಿ ಯಾರು ಹಿರಿಯರಲ್ಲಿ ಗೌರವ ಹೊಂದುವುದಿಲ್ಲವೋ, ವಿದ್ಯಾವಂತರಲ್ಲವೋ ಅಂತಹ ಮಕ್ಕಳಿಂದ ತಾಯಿ ತಂದೆಯವರಿಗೆ ಗೌರವ ಸಿಗುವುದಿಲ್ಲ. ಹೀಗೆ ಯಾವ ವಸ್ತು ಏನು ಮಾಡಿದರೆ ಯೋಗ್ಯವೋ ಆ ರೀತಿಯಲ್ಲಿಯೇ ಬಾಳಿದರೆ ಮಾತ್ರ ಒಳ್ಳೇಯದಾಗುವುದು.

**ದಾನಾಯ ಲಕ್ಷ್ಮೀ ಸುಕೃತಾಯ ವಿದ್ಯಾ ಚಿಂತಾ ಪರಬ್ರಹ್ಮ ವಿನಿಶ್ಚಯಾಯ ।**
**ಪರೋಪಕಾರಾಯ ವಚಾಂಸಿಯಸ್ಯ ವಂದ್ಯಃ ತ್ರಿಲೋಕೀ ತಿಲಕಃ ಸ ಏವ ॥**

ಸಜ್ಜನರ ಮಹಿಮೆಯನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಎನಿಸುವುದು. ಅವರಲ್ಲಿರುವ ಎಲ್ಲಾ ವಿಷಯಗಳು ಇನ್ನೊಬ್ಬರಿಗೆ ಉಪಕಾರ ಮಾಡುವುದಕ್ಕಾಗಿಯೇ ಇರುತ್ತದೆ. ಎಂಬುದನ್ನು ಸುಭಾಷಿತ ರತ್ನ ಭಂಡಾರದಲ್ಲಿ ತಿಳಿಸಿದ್ದಾರೆ. ಸಂಪತ್ತು ದಾನಕ್ಕಾಗಿ, ವಿದ್ಯೆಯು ಒಳ್ಳೆಯ ಕಾರ್ಯಮಾಡಲು, ಚಿಂತನೆಯ ಶಕ್ತಿ ಪರಬ್ರಹ್ಮ ನಿಶ್ಚಯಕ್ಕಾಗಿ ಮಾತುಗಳು ಪರೋಪಕಾರಕ್ಕಾಗಿರುತ್ತವೆ. ಇಂತಹವರು ಮೂರು ಲೋಕದಲ್ಲಿ ತಿಲಕದಂತೆ ಶ್ರೇಷ್ಠರೆನಿಸುವರು.

**ಭೂತಾನಾಂ ಪ್ರಾಣಿನಃ ಶ್ರೇಷ್ಠಾಃ ಪ್ರಾಣಿನಾಂ ಬುದ್ಧಿ ಜೀವಿನಃ ಬುದ್ಧಿಮತ್ಸು ನರಾಃ ಶ್ರೇಷ್ಠಾಃ ನರಾಣಾಂ ಸಾತ್ವಿಕಾಃ ಸ್ಮೃತಾಃ ।**
**ಸಾತ್ವಿಕೇಷು ಚ ವಿದ್ವಾಂಸಃ ವಿದ್ವತ್ಸು ಕೃತ ಬುದ್ದಯಃ ಕೃತಬುದ್ಧಿಶು ಕರ್ತಾರಃ ಕತೃಷು ಪರಬ್ರಹ್ಮವೇದಿನಃ ॥**

ಈ ಜಗತ್ತಿನಲ್ಲಿ ಏನೇನು ಶ್ರೇಷ್ಠವಾಗಿದೆ ಎಂದು ಸುಂದರವಾಗಿ ತಿಳಿಸಲಾಗಿದೆ. ವಿವಿಧ ಜೀವಿಗಳಲ್ಲಿ ಪ್ರಾಣಿಗಳು ಶ್ರೇಷ್ಠವಾಗಿವೆ. ಪ್ರಾಣಿಗಳಲ್ಲಿ ಬುದ್ಧಿ ಜೀವಿಗಳು ಶ್ರೇಷ್ಠವಾಗಿವೆ. ಬುದ್ಧಿ ಜೀವಿಗಳಲ್ಲಿ ಮಾನವರು ಶ್ರೇಷ್ಠರಾಗಿದ್ದಾರೆ. ಮಾನವರಲ್ಲಿ ಸಾತ್ವಿಕರು ಶ್ರೇಷ್ಠರು. ಸಾತ್ವಿಕ ಗುಣವುಳ್ಳವರಲ್ಲಿ ಪಂಡಿತರು ಉತ್ತಮರಾಗಿದ್ದಾರೆ. ವಿದ್ವಾಂಸರಲ್ಲಿಯೂ ಪರಿಣತಿ ಪಡೆದವರು ಶ್ರೇಷ್ಠರೆನಿಸಿದ್ದಾರೆ. ಪರಿಣತರಲ್ಲಿಯೂ ಸದಾಚಾರದ ಕಾರ್ಯಮಾಡುವವರು ಉತ್ತಮರೆನಿಸಿದ್ದಾರೆ. ಇವರಿಗಿಂತಲೂ ಬ್ರಹ್ಮಜ್ಞಾನಿಗಳು ಅತಿ ಶ್ರೇಷ್ಠರೆನಿಸಿದ್ದಾರೆ ಎಂದು ಜ್ಞಾನಿಗಳನ್ನು ಸರ್ವಶ್ರೇಷ್ಠರೆಂದು ತಿಳಿಸಲಾಗಿದೆ.

**ಮಾತಾ ಮಿತ್ರಂ ಪಿತಾಚೇತಿ ಸ್ವಭಾವಾತ್ ತ್ರಿತಯಂ ಹಿತಂ । ಕಾರ್ಯಕಾರಣತಃ ಚಾನ್ಯೆ ಭವಂತಿ ಹಿತಬುದ್ದಯಃ ॥**

ಮಾನವನಿಗೆ ಹಿತವನ್ನುಂಟು ಮಾಡುವವರಲ್ಲಿ ತಾಯಿ-ತಂದೆ ಮತ್ತು ಮಿತ್ರರು ಯಾವುದೇ ಪ್ರತಿಫಲವನ್ನು ಬಯಸದೇ ಒಳ್ಳೇಯದನ್ನು ಮಾಡುತ್ತಾರೆ. ಅದು ಅವರ ಸ್ವಾಭಾವ. ಆದರೆ ಉಳಿದವರು ಒಳ್ಳೆಯ ಮಾತನಾಡಲು ಒಳ್ಳೆಯ ಕಾರ್ಯಮಾಡಲು ಒಂದು ಕಾರ್ಯ ಇದ್ದೇ ಇರುತ್ತದೆ. ತಮ್ಮ ಕಾರ್ಯ ಸಾಧಿಸಿಕೊಳ್ಳಲು ಇತರರು ಒಳ್ಳೆಯವರಂತೆ ಕಾರ್ಯ ಮಾಡುತ್ತಾರೆಂದು ಹಿತೋಪದೇಶದಲ್ಲಿ ತಿಳಿಸಿದ್ದಾರೆ.

**ಕವೀನಾಂ ಪ್ರತಿಭಾ ಚಕ್ಷುಃ ಶಾಸ್ತ್ರಂ ಚಕ್ಷುಃ ವಿಪಶ್ಚಿತಾಂ । ಜ್ಞಾನಂ ಚಕ್ಷುಃ ಮಹರ್ಷಿಣಾಂ ಚರಾಃ ಚಕ್ಷುಃ ಮಹೀಕ್ಷಿತಾಂ ॥**

ಸಾಮಾನ್ಯ ಮಾನವರಿಗೆ ಕಣ್ಣುಗಳಿರುತ್ತವೆ. ಎದುರಿಗಿದ್ದ ವಸ್ತು ಕಾಣಿಸುತ್ತದೆ. ಆದರೆ ವಿಶಿಷ್ಟ ವ್ಯಕ್ತಿಗಳಿಗೆ ವಿಶೇಷವಾದ ನಯನಗಳಿರುತ್ತವೆ. ಕವಿಗಳಿಗೆ ಪ್ರತಿಭೆಯಲ್ಲಿಯೇ ಕಣ್ಣು. ಪಂಡಿತರಿಗೆ ಶಾಸ್ತ್ರವು ಕಣ್ಣಾಗಿರುವುದು. ಮಹರ್ಷಿಗಳಿಗೆ ಜ್ಞಾನವೇ ಕಣ್ಣು. ರಾಜರಿಗೆ ದೂತರೇ ಕಣ್ಣಾಗಿ ಎಲ್ಲಾ ವಿಷಯ ತಿಳಿದು ಬಂದು ತಿಳಿಸುತ್ತಾರೆ. ವಿಶಿಷ್ಠವಾದ ಕಣ್ಣಿನ ಕಾರ್ಯ ಅತ್ಯಂತ ಮಹತ್ವ ಪಡೆದಿರುವುದು ಎಂದು ರಾಮಾಯಣ ಮಂಜರಿಯಲ್ಲಿ ತಿಳಿಸಿದ್ದಾರೆ.

**ಪಿತ್ರಾಃ ಇವ ಪಿತುಃ ಗೇಹೆ ವಿಷಯ ಯಸ್ಯ ಮಾನವಾಃ । ನಿರ್ಭಯಾಃ ವಿಚರಿಷ್ಯಂತಿ ಸರಾಜಾ ರಾಜಸತ್ತಮಃ ॥**

ಅತ್ಯಂತ ಶ್ರೇಷ್ಠನಾದ ರಾಜನ ರಾಜ್ಯವು ಹೇಗಿರುವುದು ಎಂದಿಲ್ಲಿ ತಿಳಿಸಿದ್ದಾರೆ, ಮಕ್ಕಳು ತಂದೆಯ ಮನೆಯಲ್ಲಿ ಹೇಗೆ ಭಯವಿಲ್ಲದೇ ತಮ್ಮ ವ್ಯವಹಾರಗಳಲ್ಲಿ ತೊಡಗಿರುತ್ತಾರೆ. ಹಾಗೆ ರಾಜ್ಯದಲ್ಲಿ ರಾಜನ ಭಯವಿಲ್ಲದೇ ಪ್ರಜೆಗಳು ಭಯವಿಲ್ಲದೇ ವ್ಯವಾಹಾರವನ್ನು ಮಾಡಿದೆ ಆ ರಾಜನು ಅತ್ಯಂತ ಶ್ರೇಷ್ಠರಾಜನೆನಿಸುತ್ತಾನೆ. ಭಯವು ಇರಬೇಕು ಸ್ವಾತಂತ್ರ್ಯ ಇರಬೇಕು ಎಂದು ಅಭಿಪ್ರಾಯ. ॐ

ಮುಂದುವರಿಯುವುದು ...............

# ಕನ್ನಡ ಕಣ್ವ ಬಿ.ಎಂ.ಶ್ರೀಕಂಠಯ್ಯ



'ಕನ್ನಡ ನಾಡಿಗೆ ಕನ್ನಡವೇ ಗತಿ, ಅನ್ಯಥಾ ಶರಣಂ ನಾಸ್ತಿ' ಎಂದು ಗುಣಗಾನ ಮಾಡಿ ಕನ್ನಡ ಭಾಷೆಯ ಘನತೆ ತೋರಿಸಿಕೊಟ್ಟ ಕವಿಕುಲೋತ್ತಮ ಬಿಎಂಶ್ರೀ.

ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯನವರು 20ನೇ ಶತಮಾನದ ಆದಿಭಾಗದಲ್ಲಿ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನು ನೀಡಿದ ಕವಿ ಮತ್ತು ಸಾಹಿತಿ.

ಬಿ.ಎಂ.ಶ್ರೀಯವರು ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಸಂಪಿಗೆ ಎಂಬ ಗ್ರಾಮದಲ್ಲಿ ಮೈಲಾರಯ್ಯ ಮತ್ತು ಭಾಗೀರಥಮ್ಮನವರ ಸುಪುತ್ರರಾಗಿ 1884 ನೇ ಜನವರಿ 03 ರಂದು ಜನಿಸಿದರು. ಇದು ತಾಯಿಯ ತವರೂರು. ತಂದೆಯ ಊರು ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಬೆಳ್ಳೂರು.

ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಕನ್ನಡಿಗರು ಕನ್ನಡ ಮಾತನಾಡಲು ಸಂಕೋಚಪಡುತ್ತಿದ್ದ ಕಾಲ. ಆಗ ಎಲ್ಲಾ ಕಾರ್ಯವು ಇಂಗ್ಲೀಷ್‌ನಲ್ಲೇ ನಡೆಯುತ್ತಿತ್ತು. ಕನ್ನಡಕ್ಕೆ

ಯಾವುದೇ ಉನ್ನತ ಸ್ಥಾನ ಮಾನಗಳಿರಲಿಲ್ಲ. ಅಂತಹ ಸಮಯದಲ್ಲಿ ಕನ್ನಡವನ್ನು ಅದಕ್ಕಿರುವ ಒಂದು ನ್ಯಾಯವಾದ ಸ್ಥಾನವನ್ನು ದೊರಕಿಸಿಕೊಡಲೇಬೇಕು ಎಂದು ಆಶಿಸಿ, ತಮ್ಮ ಜೀವನವನ್ನು ಕನ್ನಡಕ್ಕಾಗಿ ಮುಡಿಪಾಗಿಟ್ಟವರು ಬಿ.ಎಂ.ಶ್ರೀಕಂಠಯ್ಯನವರು.

ಶ್ರೀಕಂಠಯ್ಯನವರು ತಮ್ಮ ಬಾಲ್ಯದ ಶಿಕ್ಷಣವನ್ನು ಬೆಳ್ಳೂರಿನಲ್ಲಿ ಕಲಿತರು. ನಂತರದಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ ಪದವಿಯನ್ನು, ಮದರಾಸು ವಿಶ್ವವಿದ್ಯಾಲಯದಿಂದ ಬಿ.ಎಲ್. ಪದವಿಯನ್ನು ಪಡೆದು, 1909ರಲ್ಲಿ ಎಂ.ಎ. ಪದವಿ ಪಡೆದರು. ಅದೇ ವರ್ಷ ಮೈಸೂರು ಕಾಲೇಜಿನಲ್ಲಿ ಇಂಗ್ಲೀಷ್ ಅಧ್ಯಾಪಕರಾಗಿ ಸೇರಿಕೊಂಡರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ 25 ವರ್ಷ ಸೇವೆ ಸಲ್ಲಿಸಿ, 1930 ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ವರ್ಗವಾಗಿ 1942 ರವರೆಗೆ ಕಾಲೇಜಿನ ಸರ್ವತೋಮುಖ ಬೆಳವಣಿಗೆಗಾಗಿ ಅವಿರತವಾಗಿ ಶ್ರಮಿಸಿದರು. 1944 ರಲ್ಲಿ ಧಾರವಾಡದ ಕೆ.ಇ.ಬೋರ್ಡ್‌ನ ಮುಖ್ಯಸ್ಥರಾಗಿ ನೇಮಕಗೊಂಡು ಅವರು ಆರ್ಟ್ಸ್ ಕಾಲೇಜಿನ ಪ್ರಾಂಶುಪಾಲರಾಗಿ ಕೊನೆಯವರೆಗೆ ಅಲ್ಲಿಯೇ ಕೆಲಸ ಮಾಡಿದರು.

ಬಿ.ಎಂ.ಶ್ರೀಕಂಠಯ್ಯನವರು ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗಾಗಿ ಅವಿಶ್ರಾಂತವಾಗಿ ದುಡಿದರು. ಹಾಗೂ ಅವರ ಪ್ರೀತಿಯ ವಿದ್ಯಾರ್ಥಿಗಳಾದ ಮಾಸ್ತಿ, ಕುವೆಂಪು, ಎಸ್.ವಿ.ರಂಗಣ್ಣ, ತೀ.ನಂ.ಶ್ರೀಕಂಠಯ್ಯ, ಜಿ.ಪಿ.ರಾಜರತ್ನಂ, ಡಿ.ಎಲ್.ನರಸಿಂಹಾಚಾರ್ ಮುಂತಾದವರಿಗೆ ಕನ್ನಡದಲ್ಲಿ ಸಾಹಿತ್ಯ ರಚನೆ ಮಾಡಲು ಪ್ರೋತ್ಸಾಹಿಸಿದರು.

'ಕನ್ನಡ ನಾಡಿಗೆ ಕನ್ನಡವೇ ಗತಿ, ಅನ್ಯಥಾ ಶರಣಂ ನಾಸ್ತಿ', ಇಂಗ್ಲೀಷಲ್ಲ, ಹಿಂದಿಯಲ್ಲ. ಈ ಕನ್ನಡ ಸಾವಿರಾರು ವರ್ಷಗಳಿಂದಲೂ ಬೆಳದುಕೊಂಡು ಬಂದಿರುವ ಭಾಷೆ. ಕನ್ನಡ ಭಾಷೆಗೆ ಯಾವ ರೀತಿಯಲ್ಲೂ ಅಪಾಯ ತಟ್ಟದ ಹಾಗೆ, ಕನ್ನಡ ನಾಡಿನಲ್ಲಿ ಅದಕ್ಕೆ ಪ್ರಧಾನ ಸ್ಥಾನವನ್ನು ಕೊಟ್ಟು, ಭಗವಂತನು ನಮಗೆ ಕೊಟ್ಟಿರುವ ಧನ ಬಲವನ್ನು ಮತ್ತು ಬುದ್ಧಿ ಬಲವನ್ನು ಅದಕ್ಕಾಗಿ ವಿನಿಯೋಗಿಸುವುದು ಕನ್ನಡಿಗರ ಕರ್ತವ್ಯ ಎಂದು 1928 ರ ಕಲ್ಬುರ್ಗಿಯಲ್ಲಿ ನಡೆದ 14 ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಹಾಡಿದ ಮಾತುಗಳನ್ನು ಕನ್ನಡಿಗರಾದ ನಾವೆಲ್ಲರೂ ಅರ್ಥ ಮಾಡಿಕೊಂಡು ಮುನ್ನಡೆಯಬೇಕು.

ಬಿ.ಎಂ.ಶ್ರೀರವರ 'ಹೊಂಗನಸು', 'ಇಂಗ್ಲೀಷ್ ಗೀತೆಗಳು' ಎಂಬ ಕವನ ಸಂಕಲನವು 1921 ರಲ್ಲಿ ಪ್ರಕಟಗೊಂಡಿತು. ನ್ಯೂಮನ್ ಕವಿ ಬರೆದ Lead Kindly Light ಎಂಬ ಕವಿತೆಯನ್ನು ಕನ್ನಡದಲ್ಲಿ ಅನುವಾದ ಮಾಡಿದ 'ಕರುಣಾಳು ಬಾ ಬೆಳಕೆ' ತುಂಬಾ ಜನಪ್ರಸಿದ್ಧವಾಯಿತು.

ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು ಇರುಳು ಕತ್ತಲೆಯ ಗವಿ ಮನೆ ದೂರ ಕನಿಕರಿಸಿ

ಕೈ ಹಿಡಿದು ನಡೆಸೆನ್ನನು. ಈ ಕವಿತೆಯನ್ನು ಕೇಳಿದರೆ ದಾಸರ ಪದಗಳು ಕಣ್ಮುಂದೆ ಬಂದು ಆಲಿಸಿದಂತಾಗುತ್ತದೆ.

Lord Ullin's daughter ಕವಿತೆಯು ಕನ್ನಡದಲ್ಲಿ

ಪಡುವ ದಿಬ್ಬದ ಗೌಡನೊಬ್ಬನು ಬಿಡದೆ ತೊರೆಯನ ಕೂಗಿಕೊಂಡನು ತಡೆಯದೀಗಲೆ ಗಡುವ ಹಾಯಿಸು ಕೊಡುವೆ ಕೇಳಿದ ಹೊನ್ನನು ! ಎಂಬಂಥ ಸಾಲುಗಳಿಂದ ಬರೆಯಲ್ಪಡುವ ಕವಿತೆಯಲ್ಲಿ ಗ್ರಾಮೀಣ ಸೊಗಡಿದೆ.

**ನಾಟಕಕಾರ :**

ಬಿ.ಎಂ.ಶ್ರೀ.ಯವರು ಕನ್ನಡದಲ್ಲಿ ಬರೆದ ಗದಾಯುದ್ಧ, ಅಶ್ವತ್ಥಾಮ, ಪಾರಸಿಕರು ನಾಟಕಗಳು ಬಹಳ ಪ್ರಸಿದ್ಧವಾದವು.

ಬಿ.ಎಂ.ಶ್ರೀ.ರವರು ಕನ್ನಡ ಭಾಷೆಯ ಉಳಿವಿಗಾಗಿ ಸಲ್ಲಿಸಿದ ಸೇವೆಗೆ ಮೈಸೂರಿನ ಮಹಾರಾಜರು 1938 ರಲ್ಲಿ ರಾಜಸೇವಾಸಕ್ತ ಎಂಬ ಬಿರುದನ್ನು ನೀಡಿ ಗೌರವಿಸಿದರು. 1928 ರಲ್ಲಿ ಗುಲ್ಬರ್ಗಾದಲ್ಲಿ ನಡೆದ 14 ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಅದರ ಏಳಿಗೆಗಾಗಿ ಶ್ರಮಿಸಿದರು.

ಬಿ.ಎಂ.ಶ್ರೀ.ರವರು ತಮ್ಮ ಜೀವಿತದ ಕಾಲದಲ್ಲಿ ಕನ್ನಡ ಸಾಹಿತ್ಯಕ್ಕಾಗಿ ಮೀಸಲಿಟ್ಟ ಕನ್ನಡದ ಕಣ್ವ ಇವರು 1946 ರ ಜನವರಿ 05 ರಂದು ಧಾರವಾಡದಲ್ಲಿ ಕೆಲಸ ಮಾಡುತ್ತಿರುವ ಸಮಯದಲ್ಲೇ ಇಹಲೋಕ ತ್ಯಜಿಸಿದರು.

ಬಿ.ಎಂ.ಶ್ರೀ ರವರು ಕನ್ನಡ ಸಾಹಿತ್ಯದ ದಿಗ್ಗಜರಾಗಿ ಸಾರಸ್ವತಲೋಕ ಎಂದೂ ಮರೆಯದಂತ ವಿಫುಲವಾದ ಸಾಹಿತ್ಯ ಕೃಷಿಯನ್ನು ನಡೆಸಿದವರು. ಇಂತಹ ಮೇರು ವ್ಯಕ್ತಿತ್ವದ ಕನ್ನಡದ ಕಣ್ವ ಬಿ.ಎಂ.ಶ್ರೀ. ॐ

**ಮನೆ ಮದ್ದು : ಆಲೂಗಡ್ಡೆ**

ಆಲೂಗಡ್ಡೆ ಜೊತೆಗೆ ಆಲೂಗಡ್ಡೆ ರೆಸಿಪಿಗಳನ್ನು ಆಗಾಗ ಮನೆಯಲ್ಲಿ ತಯಾರು ಮಾಡಿಕೊಂಡು ಸೇವನೆ ಮಾಡುವ ಅಭ್ಯಾಸ ಇಟ್ಟುಕೊಂಡಿದ್ದರೆ ಬೇಗನೆ ನಿಮ್ಮ ದೇಹದ ತೂಕ ಹೆಚ್ಚಾಗಲಿದೆ. ಆಲೂಗಡ್ಡೆಯನ್ನು ಒಂದು ವಾರಕ್ಕೆ ಎರಡು ಬಾರಿ ಸೇವನೆ ಮಾಡುವ ಅಭ್ಯಾಸ ಇಟ್ಟುಕೊಳ್ಳಿ.



# ಶಬ್ಧ ಗಾರುಡಿಗ ದ.ರಾ. ಬೇಂದ್ರೆ

ನೀ ಹೀಂಗ ನೋಡಬ್ಯಾಡ ನನ್ನ, ನೀ ಹೀಂಗ ನೋಡಿದರೆ ನನ್ನ, ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ.. ಎಂದು ನೋವನ್ನು ಸಹ ಕಾವ್ಯಮಯ ಮಾಡಿದ ಶ್ರೇಷ್ಠ ಗ್ರಾಮೀಣ ಸೊಗಡಿನ ಕುಂದಾನಗರಿಯ ಕವಿ ದ.ರಾ.ಬೇಂದ್ರೆ.

ವರಕವಿ ದ.ರಾ.ಬೇಂದ್ರೆಯವರು ಜೀವನದಲ್ಲಿ ನೊಂದು, ಬೆಂದು ಬಳಲಿದವರಾದರೂ ಕಾವ್ಯದ ಮೂಲಕವಾಗಿ ಮಿಂಚಿದ ರತ್ನ. ಜೀವನದಲ್ಲಿ ಮಕ್ಕಳ ಸಾವು, ಪತ್ನಿಯ ಸಾವು ಬೆಂದ್ರೆಯವರಿಗೆ ಅತೀವ ದುಃಖವನ್ನುಂಟು ಮಾಡಿದವು. ಆದರೂ ಇದಾವುದಕ್ಕೂ ಧೃತಿಗೆಡದೆ ಕೊರತೆಯ ಬದುಕಿನಲ್ಲಿಯೇ ಅಪಾರವಾದ ಶ್ರೇಷ್ಠ ಸಾಹಿತ್ಯ ಸಂಪತ್ತನ್ನು ನಿರ್ಮಾಣ ಮಾಡಿದ ಹೆಗ್ಗಳಿಕೆ ಬೇಂದ್ರಯವರಿಗೆ ಸಲ್ಲುತ್ತದೆ.

**ಬಾಲ್ಯದ ಬೇಂದ್ರೆ :**

"ಕಷ್ಟಗಳು ಎಷ್ಟೇ ಬರಲಿ ಅವುಗಳನ್ನು ಯಾರಿಗೂ ಹೇಳದೆ ನನ್ನ ಪಾಡೇ ನನಗಿರಲಿ, ಅದರ ಹಾಡಿನಷ್ಟೇ ನೀಡುವೆ ನಿನಗೆ ಓ..ರಸಿಕಾ" ಎಂದು ಹೇಳುವ ಮೂಲಕ ಜನರ ಹೃದಯ ಗೆದ್ದ ಸಹೃದಯಿ ಕವಿ ಬೇಂದ್ರೆಯವರು.

ಆಡಿಕೆಯ ಮಾತುಗಳನ್ನೇ ಕಾವ್ಯದಲ್ಲಿ ಪಳಗಿಸಿದ ಸಾಹಿತಿ ದ.ರಾ.ಬೇಂದ್ರೆ –ಯವರು 31 ಜನವರಿ 1886 ರಂದು ಉತ್ತರ ಕರ್ನಾಟಕದ ಧಾರವಾಡದಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ದತ್ತಾತ್ರೇಯ ರಾಮಚಂದ್ರ ಬೇಂದ್ರೆ. ಇವರ ತಂದೆ ರಾಮಚಂದ್ರ ಬೇಂದ್ರೆ, ತಾಯಿ ಅಂಬವ್ವ. ಬೇಂದ್ರೆಯವರು ವೈದಿಕ ಮನೆತನದಲ್ಲಿ ಹುಟ್ಟಿ ಉತ್ತಮ ಸಂಸ್ಕಾರವನ್ನು ಪಡೆದರು. ಧಾರವಾಡವೇ ಬೇಂದ್ರೆಯವರ ಜನ್ಮಭೂಮಿ, ಕರ್ಮಭೂಮಿ, ಧರ್ಮಭೂಮಿ ಹಾಗೂ ಸಿದ್ಧಿಯ ಕ್ಷೇತ್ರವೂ ಆಯಿತು.

**ತಾಯಿ ಹೆಸರೇ ಕಾವ್ಯನಾಮ :**

ಅಂಬಿಕೆಯ ತನಯ ತಾನು ದತ್ತ ಎಂದು ಹೇಳಿಕೊಂಡು ಕಾವ್ಯನಾಮವನ್ನು ಅಂಬಿಕಾತನಯದತ್ತ ಎಂದಿಟ್ಟುಕೊಂಡರು. ನಂತರದ ದಿನಗಳಲ್ಲಿ ಕನ್ನಡ ಸಾಹಿತ್ಯದಲ್ಲಿನ ಕೆಲವೇ ಶ್ರೇಷ್ಠ ಕವಿಗಳಲ್ಲಿ ಬೇಂದ್ರೆಯವರು ಒಬ್ಬರೆನಿಸಿದರು. ಆಡು ಭಾಷೆಯಲ್ಲಿ ಸುಲಲಿತವಾದ ಶೈಲಿಯಲ್ಲಿ ಕಾವ್ಯವನ್ನು ರಚಿಸುವ ಮೂಲಕ ಧೀಮಂತ ಕವಿ ಎಂಬ ಕೀರ್ತಿಗೆ ಪಾತ್ರರಾದರು. ಧಾರವಾಡದಲ್ಲಿಯೇ 1902ರಲ್ಲಿ ಕನ್ನಡ ಶಾಲೆ ಪ್ರವೇಶಿದ ಬೇಂದ್ರೆಯವರು ಮುಂದೆ 1913ರಲ್ಲಿ ಮೆಟ್ರಿಕ್ ಪೂರೈಸಿ ನಂತರ ಮಹಾರಾಷ್ಟ್ರದ ಪುಣೆ ನಗರದ ಪರ್ಗ್ಯುಸನ್ ಕಾಲೇಜಿನಲ್ಲಿ ಬಿ.ಎ.ಪದವಿ ಪಡೆದು ಮತ್ತೆ ಧಾರವಾಡಕ್ಕೆ ಮರಳಿದರು. ನಂತರದ ದಿನಗಳಲ್ಲಿ ಎಂ.ಎ ಪದವಿಯನ್ನು ಪಡೆದು ಧಾರವಾಡದ ವಿಕ್ಟೋರಿಯಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು. ಅದೇ ಸಂದರ್ಭದಲ್ಲಿ ಉತ್ತಮ ಸಾಹಿತ್ಯ ರಸಿಕರ ಬಳಗವನ್ನು ಕಟ್ಟಿದರು. ಅದು ಗೆಳೆಯರ ಬಳಗವೆಂದೇ ಹೆಸರು ಗಳಿಸಿತ್ತಲ್ಲದೆ, ಈ ಬಳಗದಿಂದ ಹಲವಾರು ಮಹನೀಯರು ಸಾಹಿತ್ಯ ದಿಗ್ಗಜರೆನಿಸಿದರು.

**ನಾಕುತಂತಿಗೆ ಗೌರವ :**

ವಿದ್ಯಾಭ್ಯಾಸದ ಸಂದರ್ಭದಲ್ಲೇ ಕನ್ನಡ ಸಾಹಿತ್ಯದಲ್ಲಿ ಅಪಾರ ಒಲವನ್ನು ಹೊಂದಿದ್ದ ಬೇಂದ್ರೆಯವರು ಕಾವ್ಯವನ್ನು ಲೀಲಾಜಾಲವಾಗಿ ರಚಿಸಿದರು. ಕನ್ನಡ, ಇಂಗ್ಲೀಷ್, ಮರಾಠಿ, ಸಂಸ್ಕೃತ ಭಾಷೆಗಳಲ್ಲಿ ಒಟ್ಟು 67 ಕೃತಿಗಳನ್ನು ರಚಿಸಿದ್ದಾರೆ. ಬೇಂದ್ರೆಯವರು ರಚಿಸಿದ ನಾಕುತಂತಿ ಕವನ ಸಂಕಲನವು 1947ರಲ್ಲಿ ಕನ್ನಡ ಭಾಷೆಗೆ ಎರಡನೇ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟಿತು. ಈ ಕವನ ಸಂಕಲನದಲ್ಲಿ ಆತ್ಮ, ಆಧ್ಯಾತ್ಮ, ಲೌಕಿಕ, ಪಾರಮಾರ್ಥಿಕ, ಕೃಷಿ, ರಾಜಕೀಯ ಇತ್ಯಾದಿ ದ್ವಂದ್ವಗಳನ್ನು ಕಲಾತ್ಮಕವಾಗಿ ಬಿಂಬಿಸಿದ್ದಾರೆ. ಬೇಂದ್ರೆಯವರ ಕೃತಿಗಳಲ್ಲಿ ಒಂದೊಂದೂ ವಿವಿಧ ವಿಶೇಷಗಳಾಗಿ ಮೂಡಿಬಂದು ಜನಮನ್ನಣೆ ಗಳಿಸಿವೆ. ಅವುಗಳಲ್ಲಿ ಪ್ರಮುಖವಾದವು ಗರಿ, ನಾಕುತಂತಿ, ನಾದಲೀಲೆ, ಅರಳು–ಮರಳು, ಸಾಯೋಟ, ದೆವ್ವದ ಮನೆ, ಜಾತ್ರೆ ಮುಂತಾದವು ತುಂಬಾ ಪ್ರಸಿದ್ಧವಾಗಿವೆ.

**ಬಡತನದ ಹೂವು :**

ಬೇಂದ್ರೆಯವರು "ಬೆಂದು ಬೆಂಡಾದರು ಬೇಂದ್ರೆ" ಎಂದು ಒಂದು ಕಡೆ ಹೀಗೆ ತಿಳಿಸಿದ್ದಾರೆ. ಬಡತನದಲ್ಲಿ ಬೆಂದವರೇ ವರಕವಿ ಬೇಂದ್ರೆ ಎಂಬುದು ಈ ಮೇಲಿನ ಮಾತಿನಿಂದ ತಿಳಿದು



ಬರುವುದು. ಅವರ ಅನೇಕ ಕವನಗಳಲ್ಲಿ ಸಹ ದುಃಖದ ಅನುಭವ ಉಂಟಾಗುವುದು. ಆದರೆ ಬೇಂದ್ರೆಯವರ ಕಾವ್ಯದ ಸೆಲೆಯೆಂದರೆ ಆಧ್ಯಾತ್ಮವಾಗಿರುವುದು. ಆರಂಭಿಕ ಕವನಗಳಲ್ಲಿ ಮುಗ್ಧ ಕವಿಯ ಭಾವ ಕಂಡರೂ ಅಂತ್ಯದಲ್ಲಿ ಸಾಕ್ಷಾತ್ಕಾರ ಕಂಡು ಬರುವುದು ಅವರ್ಣನೀಯವಾಗಿದೆ.

**ಸಂದ ಪುರಸ್ಕಾರಗಳಿವು :**

ಕನ್ನಡ ನಾಡಿನ ಜನರ, ಸಾಹಿತಿಗಳ ನಾಲಿಗೆಯಲ್ಲಿ ಸದಾ ನೆನೆಯಲ್ಪಡುವಂತಹ ಕವಿಯಾದ ಬೇಂದ್ರೆಯವರಿಗೆ 1959 ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1965 ರಲ್ಲಿ ಕೇಳ್ಕರ ಪ್ರಶಸ್ತಿ, 1966 ರಲ್ಲಿ ಸಾಹಿತ್ಯ ಆಚಾರ್ಯ ಪ್ರಶಸ್ತಿ, 1968 ರಲ್ಲಿ ಪದ್ಮಶ್ರೀ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಇನ್ನೂ ಹಲವಾರು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಕನ್ನಡ ಸಾಹಿತ್ಯ ಪರಿಷತ್ತು ಬೇಂದ್ರಯವರನ್ನು 1943 ರಲ್ಲಿ ಶಿವಮೊಗ್ಗದಲ್ಲಿ ನಡೆದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ನೇಮಿಸುವ ಮೂಲಕ ಅವರನ್ನು ಗೌರವಿಸಿತು.

"ರಸವೇ ಜನನ, ವಿರಸವೇ ಮರಣ, ಸಮರಸವೇ ಜೀವನ" ಎಂದು ಸಾರಿದ ಬೇಂದ್ರೆ, ಶಬ್ದ ಗಾರುಡಿಗರೆಂದೇ ಕನ್ನಡ ನೆಲದಲ್ಲಿ ಪ್ರಸಿದ್ಧಿ ಪಡೆದ ಧೀಮಂತ ಸಾಹಿತಿಯಾಗಿದ್ದಾರೆ.

**ಸಾಹಿತ್ಯ ಕೃಷಿ :**

ಬೇಂದ್ರೆ ಬರೆದ ಸಾಹಿತ್ಯ ವಿಫುಲವೂ ಹೆಚ್ಚು ಮೌಲಿಕವೂ ಆಗಿದೆ. ಅವರಿಗೆ 'ಕಾವ್ಯವೇ ಜೀವನ, ಜೀವನವೇ ಕಾವ್ಯ' ವಾಗಿತ್ತು. 1922 ರಿಂದ 1981 ರ ಅವಧಿಯಲ್ಲಿ ಬೇಂದ್ರೆ 29 ಕವನ ಸಂಗ್ರಹಗಳನ್ನೂ, 9 ವಿಮರ್ಶಾ ಗ್ರಂಥಗಳನ್ನು, 14 ನಾಟಕಗಳನ್ನು, 1 ಕಥಾ ಸಂಕಲನವನ್ನು, 2 ಉಪನ್ಯಾಸ ಸಂಗ್ರಹಗಳನ್ನು, 7 ಅನುವಾದ ಕೃತಿಗಳನ್ನು, 5 ಮರಾಠಿ ಗ್ರಂಥಗಳನ್ನು, 1 ಇಂಗ್ಲೀಷ್ ಕೃತಿಯನ್ನು ಹೀಗೆ ಒಟ್ಟು 67 ಕೃತಿಗಳನ್ನು ಬರೆದಿದ್ದಾರೆ. ಸಂವಾದ, ವಿಠ್ಠಲ ಸಂಪ್ರದಾಯ, ಶಾಂತಲಾ ಇವು ಮರಾಠಿ ಕೃತಿಗಳು. ಬೇಂದ್ರೆ ಅವರು ಅಣಕವಾಡು –ಗಳನ್ನೂ, ನಗೆ ಬರಹಗಳನ್ನೂ ಸಹ ರಚಿಸಿದ್ದಾರೆ.

ಉತ್ತಮ ವಾಗ್ಮಿಗಳಾಗಿದ್ದ ಬೇಂದ್ರೆಯವರ ಉಪನ್ಯಾಸಗಳೆಂದರೆ ಜನರಿಗೆ ಹಿಗ್ಗು. ಅವರ ಮಾತೆಲ್ಲ ಕವಿತೆಗಳೋಪಾದಿಯಲ್ಲಿ ಹೊರಹೊಮ್ಮುತ್ತಿದ್ದವು. ಕನ್ನಡದಲ್ಲಿಯೇ ಅಲ್ಲದೆ ಮರಾಠಿ ಭಾಷೆಯಲ್ಲೂ ಬೇಂದ್ರೆ ಕೆಲವು ಕೃತಿಗಳನ್ನು ರಚಿಸಿದ್ದಾರೆ.

ಆಧ್ಯಾತ್ಮದ ವಿಷಯದಲ್ಲಿ ಅವರು ಒಲವು ಬೆಳೆಸಿಕೊಂಡಿದ್ದರು. ಅರವಿಂದರ ವಿಚಾರಗಳಲ್ಲಿ ಆಸಕ್ತಿ ತೋರಿದ ಅವರು ಅರವಿಂದರ ಕೃತಿಯನ್ನು ಇಂಗ್ಲೀಷಿನಿಂದ ಭಾಷಾಂತರ ಮಾಡಿಕೊಟ್ಟರು. ಜಾನಪದ ಧಾಟಿಯ ಅವರ ಎಷ್ಟೋ ಕವಿತೆಗಳನ್ನು ಗಾಯಕರು ಸುಶ್ರಾವ್ಯವಾಗಿ ಹಾಡಿದ್ದಾರೆ. ಅವರ ಕವಿತೆಗಳಿಗೆ ನಾದಮಾಧುರ್ಯ ಅಪಾರ.

ಇವರು ಬರೆದ 'ಪಾತರಗಿತ್ತಿ ಪಕ್ಕ ನೋಡಿದ್ದೇನ ಅಕ್ಕ' ಇಂದಿಗೂ ಚಿಣ್ಣರ ಅತ್ಯಂತ ಪ್ರೀತಿ ಪಾತ್ರ ಕವನವಾಗಿದೆ.

ಗಣಿತದ ಲೆಕ್ಕಾಚಾರ ಮಾಡುತ್ತ ಬಾಳೆಹಣ್ಣಿನ ಗೊನೆಯಲ್ಲಿ, ಹಲಸಿನ ಹಣ್ಣಿನ ಮುಳ್ಳುಗಳಲ್ಲಿ, ಜೇನುಗೂಡಿನಲ್ಲಿ, ನಿಮ್ಮ ಕಿರುಬೆರಳಿನ ಅಂಚಿಗಿಂತ ಚಿಕ್ಕದಾಗಿರುವ ಹೂವುಗಳಲ್ಲಿ ಎಲ್ಲೆಲ್ಲೂ ಲೆಕ್ಕಾಚಾರವಿದೆ ಅನ್ನುತ್ತಾ ಕೊನೆ ಕೊನೆಗೆ ದ.ರಾ.ಬೇಂದ್ರೆಯವರು ಗಣಿತದ ಲೆಕ್ಕಾಚಾರದಲ್ಲೇ ಮುಳುಗಿದ್ದರು. ಇವರನ್ನು 'ಕನ್ನಡದ ಠಾಗೋರ್' ಎಂದು ಕರೆಯಲಾಗುತ್ತದೆ. ನಮ್ಮ ಬೇಂದ್ರೆಯವರಿಗೆ ಸಂಖ್ಯೆಗಳು ಹೊಸ ಲೋಕವೊಂದನ್ನು ತೆರೆದಿದ್ದವು. ಬೇಂದ್ರೆ ಮನಸ್ಸಿಗೆ 441 ಹಾಗೂ ಹೃದಯಕ್ಕೆ 881 ಎಂದು ಸಂಖ್ಯೆ ನೀಡಿದ್ದರು.

ಧಾರವಾಡದಿಂದ ಪ್ರಕಟಗೊಳ್ಳುತ್ತಿದ್ದ 'ಸ್ವಧರ್ಮ' ಎನ್ನುವ ಪತ್ರಿಕೆಯಲ್ಲಿ ಮೊದಲು ಪ್ರಕಟಗೊಂಡ 'ಬೆಳಗು' ಕವಿತೆಯು, 1932 ರಲ್ಲಿ ಪ್ರಕಟಗೊಂಡ ಬೇಂದ್ರೆಯವರ 'ಗರಿ' ಸಂಕಲನದಲ್ಲಿದೆ. ಅದರಲ್ಲಿ ಮೊದಲ ಕವನವಾದ ಈ ಕವಿತೆಯು ರಚನೆಗೊಂಡಿದ್ದು 1919 ರಲ್ಲಿ. ಇದು 2019 ರಲ್ಲಿಯೂ ಪ್ರಸಿದ್ಧವಾಗಿದೆ.

**ಸಣ್ಣಕತೆಗಳ ಜನಕ :**

ನಾಡಿನ ತುಂಬೆಲ್ಲಾ ನಡೆದಾಡಿದ ಅವರಲ್ಲಿರುವಂತಹ ಪ್ರತಿಯೊಂದು ಸಾಹಿತ್ಯದ ನುಡಿಗಳು ಮಾನವನ ನಾಡಿ ಮಿಡಿತದಂತೆ ಹರಿದಾಡಿ ಇಡೀ ಕನ್ನಡ ಸಾಹಿತ್ಯ ರಂಗವನ್ನೆ ಶ್ರೀಮಂತಗೊಳಿಸಿವೆ ಎಂದರೆ ತಪ್ಪಾಗಲಾರದು. ಇಡೀ ಜೀವನದ ತುಂಬಾ ನಿಸ್ವಾರ್ಥ ಸೇವೆಗೈದ 'ಧಾರವಾಡದ ಅಜ್ಜ' ಅವರ ಕೆಲವೊಂದು ಮಕ್ಕಳ ಕವಿತೆಗಳು, ಕತೆಗಳು ಮಕ್ಕಳ ಮನಸ್ಸನ್ನು ಪರಿವರ್ತಿಸುತ್ತಿವೆ.

ಬೇಂದ್ರೆಯವರು 1981, ಅಕ್ಟೋಬರ್‌ನ ನರಕಚತುರ್ದಶಿಯ ದಿನ ಮುಂಬೈನ ಹರಕಿಶನ್ ದಾಸ್ ಆಸ್ಪತ್ರೆಯಲ್ಲಿ ವಿಧಿವಶರಾದರು. ಬೇಂದ್ರೆಯವರು ನಮ್ಮಿಂದ ಭೌತಿಕವಾಗಿ ದೂರವಾಗಿದ್ದರೂ, ಕಾವ್ಯದ ಮೂಲಕ ಇನ್ನೂ ಜೀವಂತವಾಗಿದ್ದಾರೆ. ಸರ್ಕಾರವು ಸಹ ಬೇಂದ್ರೆಯವರ ಕವನಗಳನ್ನು ಶಾಲಾ ಪಠ್ಯದಲ್ಲಿ ಅಳವಡಿಸುವ ಮೂಲಕ ಗೌರವ ಸೂಚಿಸಿರುವುದು ಸ್ವಾಗತಾರ್ಹವಾಗಿದೆ. ಅದರ ಜೊತೆಗೆ ಅವರ ಅಮೂಲ್ಯದ ಕೃತಿಗಳನ್ನು ಮುದ್ರಿಸಿ ಜನಸಾಮಾನ್ಯರಿಗೆ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ನಿಟ್ಟಿನಲ್ಲಿ ಸರ್ಕಾರವು ಗಮನಹರಿಸಿದರೆ ಬೇಂದ್ರೆ ಅಜ್ಜನಿಗೆ ಸಲ್ಲಿಸುವ ನಿಜ ಗೌರವ.

ॐ



# ಒಂದು ಕಪ್ ಮೊಸರೂ, ಅಪ್ಪನ ಬಿಸಿಯುಸಿರೂ

ಬೆಂಗಳೂರಿನ ಯಶವಂತಪುರದಿಂದ ಹಾಸನಕ್ಕೆ ಅಥವಾ ತುಮಕೂರಿಗೆ ಹೋಗುವ ದಾರಿಯಲ್ಲೇ ಗೊರಗುಂಟೆಪಾಳ್ಯವಿದೆ. ಅಲ್ಲಿಂದ ಹೆಬ್ಬಾಳಕ್ಕೆ ಹೋಗುವ ರಸ್ತೆಯಲ್ಲಿ ಅರ್ಧ ಕಿಲೋ ಮೀಟರ್ ಹೋದರೆ, ಸ್ಟ್ಯಾಂಡರ್ಡ್ ಮೆಕ್ಯಾನಿಕಲ್ ವರ್ಕ್ಸ್ ಫ್ಯಾಕ್ಟರಿ ಸಿಗುತ್ತದೆ. ಹೆಚ್ಚಿನ ಸದ್ದಾಗದಂತೆ ಕಾರ್ಯ ನಿರ್ವಹಿಸುವ ವಿದೇಶಿ ನಿರ್ಮಿತ ಯಂತ್ರಗಳು ಅಲ್ಲಿವೆ. ಫ್ಯಾನ್, ರೆಫ್ರಿಜರೇಟರ್, ಟಿ.ವಿ ಗಳಿಗೆ ಅಗತ್ಯವಾಗಿ ಬೇಕಾಗುವ ಬಿಡಿಭಾಗಗಳನ್ನು ಅಲ್ಲಿ ಉತ್ಪಾದಿಸಲಾಗುತ್ತದೆ. ಎಲ್ಲಾ ಪ್ರಮುಖ ಕಂಪನಿಗಳಿಗೂ ಬಿಡಿ ಭಾಗಗಳನ್ನು ಸಪ್ಲೈ ಮಾಡುತ್ತಿರುವುದರಿಂದ ಸ್ಟ್ಯಾಂಡರ್ಡ್ ಮೆಕ್ಯಾನಿಕಲ್ ಫ್ಯಾಕ್ಟರಿಗೆ ಒಳ್ಳೆಯ ಹೆಸರೂ ಇದೆ.

ಈ ಫ್ಯಾಕ್ಟರಿ ಮಾಲೀಕನೇ ರಂಗಸ್ವಾಮಿ. ಈತ, ಅರಸೀಕೆರೆ ಸಮೀಪದ ಹಳ್ಳಿಯವನು. ಸಿದ್ದಗಂಗಾ ಮಠದಲ್ಲಿ ಹೈಸ್ಕೂಲು, ತುಮಕೂರಿನಲ್ಲಿ ಐಟಿಐ ಓದಿದವನು ಸೀದಾ ಬಂದಿದ್ದು ಪೀಣ್ಯಕ್ಕೆ. ಹೆಲ್ಪರ್ ಆಗಿ ಒಂದು ಫ್ಯಾಕ್ಟರಿ ಸೇರಿಕೊಂಡವನು ಐದು ವರ್ಷದಲ್ಲಿ ಎಲ್ಲ ಬಗೆಯ ಕೆಲಸ ಕಲಿತ. ನಂತರ ಮಾರ್ಕೆಟಿಂಗ್ ಮ್ಯಾನೇಜರ್ ಆದ. ಮಾರಾಟಕ್ಕೆ ಸಂಬಂಧಿಸಿದ ಆಳ–ಅಗಲಗಳು ರಂಗಸ್ವಾಮಿಗೆ ಪರಿಚಯವಾದದ್ದೇ ಆಗ. ಹತ್ತಾರು ಕಂಪನಿಗಳ ಮುಖ್ಯಸ್ಥರ ಒಡನಾಟ, ವಿಶ್ವಾಸ, ಅಲ್ಲಿನ ವಹಿವಾಟುಗಳಿಗೆ ಇರುವ ಬೇಡಿಕೆಯನ್ನು ಗಮನಿಸಿದ ನಂತರ, ಹೇಗಿದ್ರೂ ಎಲ್ಲ ಕೆಲಸದ ಬಗ್ಗೆ ಗೊತ್ತಿದೆ. ಒಂದೆರಡು ಕಂಪನಿಗಳಿಂದ ಕಾಂಟ್ರಾಕ್ಟ್ ತಗೊಂಡು ಸ್ಪೇರ್ ಪಾರ್ಟ್ಸ್ ಉತ್ಪಾದನೆಯ ಸ್ವಂತ ಫ್ಯಾಕ್ಟರಿ ಶುರು ಮಾಡಿದ್ರೆ ಹೇಗೆ ಎಂಬ ಯೋಚನೆಯೂ ಅವನಿಗೆ ಬಂತು.

ರಂಗಸ್ವಾಮಿ ತಡಮಾಡಲಿಲ್ಲ. ಒಂದು ಪುಟ್ಟ ಶೆಡ್‌ನಲ್ಲಿ ಫ್ಯಾಕ್ಟರಿಯನ್ನು ಆರಂಭಿಸಿಯೇಬಿಟ್ಟ. ಯೌವನದ ಹುಮ್ಮಸ್ಸು ಹಾಗೂ ಗೆಲ್ಲಬೇಕೆಂಬ ಹಠದಿಂದ ಹಗಲಿರುಳೂ ದುಡಿದ. ಪರಿಣಾಮ, ಕೆಲವೇ ದಿನಗಳಲ್ಲಿ ರಂಗಸ್ವಾಮಿಯ ಬ್ಯಾಂಕ್ ಬ್ಯಾಲೆನ್ಸ್ ದುಪ್ಪಟ್ಟಾಯಿತು. ಅದುವರೆಗೂ ಸೆಕೆಂಡ್ ಹ್ಯಾಂಡ್ ಹೀರೋ ಹೋಂಡಾದಲ್ಲಿ ಓಡಾಡುತ್ತಿದ್ದವನು, ಒಟ್ಟಿಗೇ ಎರಡು ಕಾರ್ ಖರೀದಿಸುವಷ್ಟು ಶ್ರೀಮಂತನಾದ. 25 ಮಂದಿಗೆ ಕೆಲಸ ಕೊಟ್ಟ. ಫ್ಯಾಕ್ಟರಿಗೆ ಸ್ವಂತ ಬಿಲ್ಡಿಂಗ್ ಕಟ್ಟಿಸಿದ. ವಾಸಕ್ಕೆ, ಯಶವಂತಪುರದಲ್ಲೇ ಒಂದು ಮನೆ ಖರೀದಿಸಿದ. ಇಷ್ಟೆಲ್ಲ ಆದಮೇಲೆ, ರಂಗಸ್ವಾಮಿಯ ಯಶೋ ಗಾಥೆ ನೂರಾರು ಮಂದಿಯನ್ನು ತಲುಪಿತು. ಹೇಗಿದ್ದವನು ಹೇಗಾಗಿಬಿಟ್ಟ ಅಲ್ವ ಎಂದು ಎಲ್ಲರೂ ಬೆರಗಾಗುವ ವೇಳೆಗೇ, ಹಳೇ ಪರಿಚಯದ ಹುಡುಗಿಯೊಂದಿಗೆ ಮದುವೆಯಾದ ರಂಗಸ್ವಾಮಿ, ವರ್ಷದ ನಂತರ ಗಂಡು ಮಗುವಿನ ತಂದೆಯೂ ಆದ.

ಕೈ ತುಂಬಾ ವರಮಾನ ಕೊಡುವ ಕೆಲಸ, ಮನ ಮೆಚ್ಚಿದ ಹೆಂಡತಿ, ಖುಷಿ ಹೆಚ್ಚಿಸುವ ಮಗ, ಸಮಾಜದಲ್ಲಿ ವಿಶೇಷ ಸ್ಥಾನಮಾನ, ಯಾರಿಗೂ ಸಾಲ ಕೊಡಬೇಕಿಲ್ಲ ಎಂಬ ನಿರಾಳ ಭಾವ... ಲೈಫ್ ಈಸ್ ಬ್ಯೂಟಿಫುಲ್ ಎನ್ನಲು ಇಷ್ಟು ಸಾಕಲ್ಲವೇ? ರಂಗಸ್ವಾಮಿಯೂ ಇಂಥದ್ದೇ ಸಂಭ್ರಮದಲ್ಲಿದ್ದ. ಆಗಲೇ, ಯಾರೂ ನಿರೀಕ್ಷಿಸದ ಆಘಾತವೊಂದು ಅವನನ್ನು ಅಪ್ಪಳಿಸಿತು. ಅದೊಂದು ದಿನ ಮಾರ್ಕೆಟ್‌ಗೆ ಹೋಗಿ ವಾಪಸಾಗುತ್ತಿದ್ದ ರಂಗಸ್ವಾಮಿಯ ಪತ್ನಿಗೆ ವೇಗವಾಗಿ ಬಂದ ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ...

'ಈಗಾಗ್ಲೇ ನನಗೂ ನಲವತ್ತೈದು ತುಂಬಿದೆ. ಮಗ 7ನೇ ಕ್ಲಾಸ್‌ಗೆ ಬಂದಿದಾನೆ. ಹೀಗಿರುವಾಗ ಇನ್ನೊಂದು ಮದುವೆಯಾಗಿ ಸಾಧಿಸೋದೇನಿದೆ? ಸೆಕೆಂಡ್ ಮ್ಯಾರೇಜ್ ಮಾಡ್ಕೊಂಡೆ ಅಂತಿಟ್ಕೊಳ್ಳಿ, ಹೊಸದಾಗಿ ಬಂದ ಹೆಂಡತಿ ನನ್ನ ಮಗನನ್ನು ತಿರಸ್ಕಾರದಿಂದ ನೋಡಿಬಿಟ್ರೆ, ಅಥವಾ ಹೆಂಡತಿಯ ಮೇಲಿನ ಮೋಹದಿಂದ ನಾನೇ ವಿಲನ್ ಥರಾ ವರ್ತಿಸಿಬಿಟ್ರೆ?

ಬೇಡ ಬೇಡ. ಇಂಥ ಸಂದರ್ಭಗಳು ಜೊತೆಯಾಗೋದೇ ಬೇಡ. ನನಗಿನ್ನು ಮಗನೇ ಸರ್ವಸ್ವ. ಹೆಂಡತಿಯ ನೆನಪನ್ನು ಜೊತೆಗಿಟ್ಟುಕೊಂಡೇ ಇವನನ್ನು ಚೆನ್ನಾಗಿ ಓದಿಸ್ತೇನೆ...'. ಎರಡನೇ ಮದುವೆ ಮಾಡಿಕೊಳ್ಳಪ್ಪಾ ಎಂದು ಒತ್ತಾಯಿಸಲು ಬಂದ ಬಂಧುಗಳು ಹಾಗೂ ಹಿತೈಷಿಗಳಿಗೆ ರಂಗಸ್ವಾಮಿ ಹೇಳಿದ ಖಡಕ್ ಮಾತುಗಳಿವು.

ರಂಗಸ್ವಾಮಿ ಮಾತಿಗೆ ತಪ್ಪಲಿಲ್ಲ. ಅವನು ಮಗನನ್ನು ಕಣ್ರೆಪ್ಪೆಯಷ್ಟು ಜೋಪಾನವಾಗಿ ನೋಡಿಕೊಂಡ. ಒಳ್ಳೆಯ ಕಾಲೇಜಿನಲ್ಲಿ ಎಂಜಿನಿಯರಿಂಗ್ ಓದಿಸಿದ. ನನಗೆ ನೀನೇ ಪ್ರಪಂಚ. ನೀನು ಜೊತೆಗಿಲ್ಲದೆ ನಾನು ಬದುಕಲಾರೆ ಎಂಬುದನ್ನು ಪರೋಕ್ಷವಾಗಿ ಮನದಟ್ಟು ಮಾಡಿಕೊಟ್ಟ. ಮುಂದೊಂದು ದಿನ– 'ನನ್ನ ಕ್ಲಾಸ್ ಮೇಟ್ ಹುಡುಗೀನ ಲವ್ ಮಾಡಿದೀನಪ್ಪಾ. ಅವಳನ್ನೇ ಮದುವೆ ಆಗ್ತೀನಿ. ಅವರ ಮನೇಲಿ ಒಪ್ಪಿದಾರೆ. ನಿನ್ನ ಒಪ್ಪಿಗೆ ಬೇಕಪ್ಪಾ...' ವಿಧೇಯನಾಗಿಯೇ ಹೇಳಿದ್ದ ಮಗ. ರಂಗಸ್ವಾಮಿ ಅದನ್ನೂ ಆಕ್ಷೇಪಿಸಲಿಲ್ಲ. ಅದ್ಧೂರಿಯಾಗಿ ಮದುವೆ ಮಾಡಿಕೊಟ್ಟ. ಇದಾಗಿ ವರ್ಷ ಕಳೆಯುತ್ತಲೇ ಫ್ಯಾಕ್ಟರಿ ವ್ಯವಹಾರವನ್ನೆಲ್ಲ ಮಗನಿಗೆ ವಹಿಸಿಕೊಟ್ಟು, 'ನನಗೆ ವಯಸ್ಸಾಯಿತು ಕಣಪ್ಪಾ. ರೆಸ್ಟ್ ಬೇಕು ಅನ್ನಿಸ್ತಿದೆ. ಇನ್ಮುಂದೆ ನಾನು ಮನೇಲಿರ್ತೀನಿ. ಶ್ರದ್ಧೆ ಮತ್ತು ಎಚ್ಚರದಿಂದ ಫ್ಯಾಕ್ಟರಿ ನಡೆಸ್ಕೊಂಡು ಹೋಗು' ಎಂದಿದ್ದ. ಮರುದಿನವೇ ವಕೀಲರ ಜೊತೆಗೂ ಮಾತಾಡಿ ಫ್ಯಾಕ್ಟರಿಯನ್ನು ಮಗನ ಹೆಸರಿಗೆ ರಿಜಿಸ್ಟ್ರೇಷನ್ ಮಾಡಿಸಿಬಿಟ್ಟ.

ಚಿತ್ರಾನ್ನ–ಕಾಯಿಚಟ್ನಿ, ದೋಸೆ–ಜಾಮೂನ್, ಬಿಸಿಬೇಳೆಬಾತ್– ಚಿಪ್ಸ್, ವಾಂಗೀಬಾತ್–ಆಲೂಬೋಂಡಾ, ಪಲಾವ್–ಗಟ್ಟಿಮೊಸರು– ಹೀಗೆ ಪ್ರತಿಯೊಂದು ತಿಂಡಿಗೂ ಒಂದು ಸೈಡ್ ಐಟಂ ಇರಬೇಕು ಎಂಬುದು ರಂಗಸ್ವಾಮಿಯ ಆಸೆಯಾಗಿತ್ತು. ಅದರಲ್ಲೂ ಪಲಾವ್–ಮೊಸರು ಅವನ ಮೆಚ್ಚಿನ ತಿಂಡಿಯಾಗಿತ್ತು. ನಾವು ಎಷ್ಟು ದಿನ ಇರ್ತೀವೋ ಗೊತ್ತಿಲ್ಲ. ಇರುವಷ್ಟು ದಿನ ಚೆನ್ನಾಗಿ ತಿಂದುಂಡು ಬಾಳಬೇಕು ಎಂಬುದು ಅವನ ವಾದವಾಗಿತ್ತು.

ಅವತ್ತು ರಂಗಸ್ವಾಮಿಯ ಮಗ ಜಾಗಿಂಗ್ ಮುಗಿಸಿ ಬಾಗಿಲ ಬಳಿ ಬಂದಾಗಲೇ ಪಲಾವ್‌ನ ಘಮ–ಘಮ ವಾಸನೆ ಮೂಗಿಗೆ ಹರಿಡಿತು. ಓಹ್, ಇವತ್ತು ಅಪ್ಪನ ಫೇವರಿಟ್ ತಿಂಡಿ ಎಂದುಕೊಂಡು ಅವನು ಒಳಬರುವುದಕ್ಕೂ, ಡೈನಿಂಗ್ ಟೇಬಲ್ ಮುಂದೆ ತಿಂಡಿಗೆ ಕುಳಿತಿದ್ದ ರಂಗಸ್ವಾಮಿ–ಸ್ವಲ್ಪ ಮೊಸರು ಇದ್ರೆ ಕೊಡಮ್ಮ. ಪಲಾವ್ ಜೊತೆ ಮೊಸರು ಕೊಡೋದನ್ನೇ ಮರೆತಿದ್ದೀಯಲ್ಲ.. ಅನ್ನುವುದಕ್ಕೂ ಸರಿಹೋಯಿತು. ರಂಗಸ್ವಾಮಿಯ ಸೊಸೆ ಸರ್ರನೆ ಹೊರಬಂದವಳೇ– 'ಇಲ್ಲ, ಮೊಸರಿಲ್ಲ; ಮೊಸರು ಖಾಲಿಯಾಗಿದೆ' ಅಂದು ಭರ್ರನೆ ಹೋಗಿಬಿಟ್ಟಳು. ಹೌದಾ? ಹೋಗ್ಲಿ ಬಿಡಮ್ಮ ಎನ್ನುತ್ತಾ ರಂಗಸ್ವಾಮಿ ತಿಂಡಿಯ ಶಾಸ್ತ್ರ ಮುಗಿಸಿದ.

ದಿನವೂ ಹೆಂಡತಿಯೊಂದಿಗೆ ತಿಂಡಿ ತಿಂದು ನಂತರ ಫ್ಯಾಕ್ಟರಿಗೆ ಹೋಗುವುದು ರಂಗಸ್ವಾಮಿಯ ಮಗನ ದಿನಚರಿಯಾಗಿತ್ತು. ಅವತ್ತೂ ಹಾಗೆಯೇ ತಿಂಡಿಗೆ ಕೂತವನು ಅಸಹನೆ ಮತ್ತು ಗೊಂದಲದಿಂದ ಹೆಂಡತಿಯನ್ನು ನೋಡಿದ. ಕಾರಣ; ಹೆಂಡತಿ ತಂದಿಟ್ಟ ತಿಂಡಿಯೊಂದಿಗೆ ಅರ್ಧ ಲೀಟರಿನಷ್ಟು ಗಟ್ಟಿ ಮೊಸರಿತ್ತು. "ಅಪ್ಪ ಕೇಳಿದಾಗ ಮೊಸರೇ ಇಲ್ಲ ಅಂದೆಯಲ್ಲ? ಇದು ಎಲ್ಲಿತ್ತು? ಯಾಕೆ ಸುಳ್ಳು ಹೇಳ್ದೆ?" ಎಂದು ಪ್ರಶ್ನಿಸಿದ. ಆಕೆ– 'ಗಟ್ಟಿಯಾಗಿ ಮಾತಾಡಬೇಡಿ. ಸೈಲೆಂಟಾಗಿ ತಿಂಡಿ ತಿನ್ನಿ. ನಿಮ್ಮಪ್ಪ ಕೇಳ್ತಾರೆ ಅಂತ ಅವರು ಕೇಳಿದ್ದನ್ನೆಲ್ಲ ಕೊಡೋಕಾಗುತ್ತಾ? ಬಾಯಿ ಚಪಲ ಯಾವತ್ತೂ ಒಳ್ಳೆಯದಲ್ಲ. ಇವತ್ತು ಮೊಸರು ಕೇಳ್ತಾರೆ. ನಾಳೆ ತುಪ್ಪಾನೇ ಬೇಕು ಅಂತಾರೆ. ಕೇಳಿದ್ದನ್ನೆಲ್ಲ ರೆಡಿ ಮಾಡಿ ಇಟ್ಕೊಂಡಿರೋಕೆ ಆಗುತ್ತಾ?' ಅಂದುಬಿಟ್ಟಳು. ತಿರುಗಿ ಮಾತಾಡಿದರೆ ಜಗಳ ಆಗುತ್ತೆ. ಜಗಳ ಆಗಿಬಿಟ್ರೆ ರಾತ್ರಿ ಅನ್ನೋದು ನರಕ ಆಗುತ್ತೆ. ಉಹೂಂ, ಅಂಥ ಪರಿಸ್ಥಿತಿ ಜೊತೆಯಾಗಬಾರದು ಎಂದು ಯೋಚಿಸಿದ ರಂಗಸ್ವಾಮಿಯ ಮಗ, ಮೌನವಾಗಿ ಫ್ಯಾಕ್ಟರಿಗೆ ಹೋಗಿಬಿಟ್ಟ. ರಂಗಸ್ವಾಮಿ, ಮನೆಯ ಹೊರಗಿನ ಕೈ ತೋಟದಲ್ಲಿ ಇದ್ದುದರಿಂದ ಗಂಡ–ಹೆಂಡಿರ ಗುಸು–ಗುಸು ಶಬ್ದ ಅವನಿಗೆ ಗೊತ್ತಾಗಲೇ ಇಲ್ಲ.

ಅವತ್ತು ನಾಲ್ಕೈದು ಕಂಪನಿಗಳ ಮುಖಂಡರೊಂದಿಗೆ ಹೋಟೆಲೊಂದರಲ್ಲಿ ವ್ಯವಹಾರ ಸಂಬಂಧಿ ಮೀಟಿಂಗ್ ನಡೆಸಬೇಕಾಗಿ ಬಂತು. ಊಟದ ಸಮಯದಲ್ಲಿ ಅವರೆಲ್ಲಾ– "ಊಟ ಬೇಡ, ದೋಸೆ ವಡಾ ಥರದ ಐಟಮ್ಸ್ ತಗೊಳ್ಳೋಣ

ಎಂದರು. ಕಡೆಗೆ ಮೊಸರನ್ನ ಇರಲಿ" ಎಂದರು. ಮೊಸರಿನ್ನದಲ್ಲಿದ್ದ ಕೆನೆಮೊಸರು, ದಾಳಿಂಬೆ, ಗೋಡಂಬಿಯ ಚೂರುಗಳನ್ನು ಕಂಡಾಗ ಥಕ್ಕನೆ, ಮೊಸರು ಇದ್ಯಾ ಎಂದು ಕೇಳಿದ ಅಪ್ಪನ ಮುಖವೇ ಎದುರು ಕಂಡಂತಾಗಿ ರಂಗಸ್ವಾಮಿಯ ಮಗ ತತ್ತರಿಸಿಹೋದ. ತನಗಾಗಿ ಏನೆಲ್ಲಾ ತ್ಯಾಗ ಮಾಡಿದ ತಂದೆಗೆ ಒಂದು ಕಪ್ ಗಟ್ಟಿ ಮೊಸರು ಕೊಡಲು ಆಗಲಿಲ್ಲವಲ್ಲ ಎಂಬ ಚಿಂತೆ ಅವನನ್ನು ಕ್ಷಣಕ್ಷಣಕ್ಕೂ ಕಾಡತೊಡಗಿತು.

ಊಹೂಂ, ಅವನ ಹೆಂಡತಿಗೆ ಇಂಥ ಯಾವ 'ಗಿಲ್ಟ್' ಕೂಡ ಇರಲಿಲ್ಲ. ಪ್ರತಿಯೊಂದು ತಿಂಡಿಗೂ ಮತ್ತೊಂದು ಸೈಡ್ ಐಟಂ ಹಾಕಿಕೊಡೋಕೆ ಇದೇನು ಹೋಟ್ಲಾ? ಇಡೀ ದಿನ ಮನೇಲಿ ಇರೋರು ಕೊಟ್ಟಿದ್ದನ್ನು ತಿಂದುಕೊಂಡು ತೆಪ್ಪಗಿರಬೇಕು ಅಲ್ವ ಎಂದೇ ಅವಳು ವಾದಿಸಿದಳು. ಬೆಡ್‌ರೂಂ, ಜಗಳದ ತಾಣವಾದರೆ ಇಡೀ ದಿನದ ಕೆಲಸ ಕೆಡುತ್ತೆ ಎಂದು ಗೊತ್ತಿದ್ದುದರಿಂದ ರಂಗಸ್ವಾಮಿಯ ಮಗ ಹೆಂಡತಿಗೆ ಎದುರು ಮಾತಾಡಲು ಹೋಗಲಿಲ್ಲ.

ಹೀಗೇ ವಾರ ಕಳೆಯಿತು. ಅವತ್ತೊಂದು ದಿನ– 'ಯಾವುದೋ ಕೋರ್ಟ್ ಕೇಸ್ ಬಂದಿದೆಯಪ್ಪಾ. ನನಗೆ ಸ್ವಲ್ಪ ಕನ್‌ಫ್ಯೂಶನ್ ಇದೆ. ನೀನು ಜೊತೆಗಿದ್ರೆ ದೊಡ್ಡ ಧೈರ್ಯ. ಮಧ್ಯಾಹ್ನ ಬೇಗ ಬಂದ್ಬಿಡೋಣ...' ಎಂದೆಲ್ಲ ಹೇಳಿ ಆ ಮಗರಾಯ ತಂದೆಯೊಂದಿಗೆ ಕೋರ್ಟ್‌ಗೆ ಬಂದ. ಅಲ್ಲಿ ನೋಡಿದರೆ– ಫ್ಯಾಕ್ಟರಿ, ಮನೆ ಮತ್ತು ಇಡೀ ಆಸ್ತಿಯನ್ನು ರಂಗಸ್ವಾಮಿಯ ಹೆಸರಿಗೆ ಮರು ವರ್ಗಾಯಿಸಿದ ದಾಖಲೆ ಪತ್ರಗಳಿದ್ದವು. ಅವಕ್ಕೆಲ್ಲಾ ತುಂಬಾ ಒತ್ತಾಯದಿಂದಲೇ ಸಹಿ ಹಾಕಿಸಿದ ಮಗ– 'ಅಪ್ಪಾ, ನೀನು ಇನ್ನೊಂದು ಮದುವೆ ಮಾಡ್ಕೊಳಪ್ಪಾ. ಜನ ಏನಾದ್ರೂ ಅಂದುಕೊಳ್ಳಲಿ. ಅದರ ಬಗ್ಗೆ ಚಿಂತೆ ಮಾಡ್ಬೇಡ. ನಿನ್ನ ಜೊತೆಗೆ ನಾನಿರ್ತೀನಿ. ಈ ವಿಷಯದಲ್ಲಿ ನಿಂಗೆ ಸಪೋರ್ಟ್ ಮಾಡ್ತೀನಿ. ದಯವಿಟ್ಟು ಇನ್ನೊಂದು ಮದುವೆ ಮಾಡ್ಕೊ..' ಅಂದ.

ಈ ಮಾತುಗಳಿಂದ ರಂಗಸ್ವಾಮಿಗೆ ಅಚ್ಚರಿಯಾಯಿತು. 'ಯಾಕಪ್ಪಾ? ಯಾಕೆ ಹೀಗೆ ಹೇಳ್ತಿದೀಯ? ನಿನಗೆ ಏನಾದ್ರೂ ಕೊರತೆ ಆಯ್ತಾ? ನಾನು ನಿನಗೆ ಹೊರೆ ಅನ್ನಿಸಿಬಿಟ್ನಾ? ಏನಾದ್ರೂ ತಪ್ಪು ಮಾಡಿದೀನೇನೋ ನಾನು? ಎಲ್ಲವನ್ನೂ ನನ್ನ ಹೆಸರಿಗೇ ಮಾಡಿಸಿದೀಯಲ್ಲ ಯಾಕೋ..,

ಈ ಮಾತುಗಳನ್ನು ಅಷ್ಟಕ್ಕೇ ತಡೆದ ರಂಗಸ್ವಾಮಿಯ ಮಗ ಹೇಳಿದ: ಛೆ,ಛೆ ಖಂಡಿತ ನಿನ್ನಿಂದ ಯಾವುದೇ ತಪ್ಪಾಗಿಲ್ಲಪ್ಪಾ. ಪ್ರತಿ ಹೆಂಗಸು, ತನ್ನ ಗಂಡ ಮತ್ತು ಮಕ್ಕಳ ಬಗ್ಗೆ ಮಾತ್ರ ವಿಶೇಷ ಕಾಳಜಿ ವಹಿಸ್ತಾಳೆ. ಉಳಿದವರನ್ನು ನಿರ್ಲಕ್ಷ್ಯದಿಂದ ನೋಡೋದು ಅವಳಿಗೆ ಅಭ್ಯಾಸ ಆಗಿಬಿಟ್ಟಿರುತ್ತೆ. ಅಂಥದೊಂದು ನಿರ್ಲಕ್ಷ್ಯದ ಅನುಭವ ನಿನಗೆ ಎಂದೆಂದೂ ಆಗದಿರಲಿ ಎಂಬ ಸದಾಶಯದಿಂದಲೇ ಇನ್ನೊಂದು ಮದುವೆ ಆಗು ಅಂತ ಒತ್ತಾಯಿಸ್ತಾ ಇದೀನಿ. ನಾಳೆಯಿಂದ ನಾನು ಹೆಂಡತಿಯೊಂದಿಗೆ ಬಾಡಿಗೆ ಮನೆಗೆ ಹೋಗ್ತೇನೆ. ಫ್ಯಾಕ್ಟರಿಗೆ ನೀನು ಎಂ.ಡಿ., ನೀನೇ ಸಿ.ಇ.ಒ. ನಾನು ಒಬ್ಬ ನೌಕರನಾಗಿ ಕೆಲಸ ಮಾಡ್ತೀನಿ. ನಮ್ಮಲ್ಲಿ ಎಂಜಿನಿಯರ್‌ಗಳಿಗೆ ಕೊಡ್ತೀಯಲ್ಲ; ಅಷ್ಟೇ ಸಂಬಳವನ್ನು ನನಗೂ ಕೊಡು. ಒಂದು ಬಟ್ಟಲಿನಷ್ಟು ಮೊಸರು ಸಂಪಾದಿಸಲು ಮನುಷ್ಯನಿಗೆ ಎಷ್ಟು ಕಷ್ಟ ಇದೆ ಎಂಬುದನ್ನು ನನ್ನ ಹೆಂಡತಿಗೆ ಪರಿಚಯ ಮಾಡಿಕೊಡಬೇಕು. ಅದರ ಜೊತೆಗೆ, ವೃದ್ಧಾಪ್ಯದಲ್ಲಿ ತುಂಬಾ ಮುತುವರ್ಜಿಯಿಂದ ನೋಡಿಕೊಳ್ಳುವ ಒಬ್ಬರು ನಿನ್ನೊಂದಿಗೆ ಇರುವಂತೆ ವ್ಯವಸ್ಥೆ ಮಾಡಬೇಕು. ಫ್ಯಾಕ್ಟರಿಯನ್ನು ನಿನ್ನ ಹೆಸರಿಗೆ ವರ್ಗಾಯಿಸಿದ್ದಕ್ಕೆ, ನಾಳೆಯಿಂದ ಒಬ್ಬ ಆರ್ಡಿನರಿ ನೌಕರನಾಗಿ ಕೆಲಸಕ್ಕೆ ಬರ್ತಿರೋದಕ್ಕೆ ಬೇರೆ ಯಾವ ಕಾರಣವೂ ಇಲ್ಲ. ಒಳ್ಳೇದಾಗ್ಲಿ ಅಂತ ಆಶೀರ್ವದಿಸಪ್ಪ...'

ರಂಗಸ್ವಾಮಿ ಏನೂ ಮಾತಾಡಲಿಲ್ಲ. ನಡೆದಿರುವುದೇನೆಂದು ತನಗೆ ಅರ್ಥವಾಗಿದೆ ಎಂಬಂತೆ ಮಗನನ್ನು ಮೆಚ್ಚುಗೆಯಿಂದ ನೋಡಿದ. ಅವನನ್ನು ಬಾಚಿ ತಬ್ಬಿಕೊಂಡು ಹಣೆಗೆ ಮುತ್ತಿಟ್ಟ........ ॐ

**ಮಕ್ಕಳಿಗೆ ಸಂಸ್ಕಾರ ಕಲಿಸಿದರೆ ಸಾಕು, ಅವರೇ ಅವರ ಜೀವನವನ್ನ ಸುಂದರ ಮಾಡಿಕೊಳ್ಳುತ್ತಾರೆ, ಹಣ, ಆಸ್ತಿ, ಬ್ಯಾಂಕ್ ಬ್ಯಾಲೆನ್ಸ್ ಎಲ್ಲಾ ವ್ಯರ್ಥ....ಸಂಸ್ಕಾರ ಮುಖ್ಯ**



# ಸ್ವಾಮಿ ವಿವೇಕಾನಂದ



ವಿವೇಕಾನಂದ, ಮೂಲ ಹೆಸರು ನರೇಂದ್ರನಾಥ ದತ್ತ, ದತ್ತ ಅವರು ದತ್ ಎಂದು ಉಚ್ಚರಿಸುತ್ತಾರೆ. ಕಲ್ಕತ್ತಾದ ಶ್ರೀಮಂತ ಬಂಗಾಳಿ ಕುಟುಂಬದಲ್ಲಿ ನರೇಂದ್ರನಾಥ ದತ್ತ ಜನಿಸಿದರು, ವಿವೇಕಾನಂದರು ವಿಶ್ವನಾಥ ದತ್ತ ಮತ್ತು ಭುವನೇಶ್ವರಿ ದೇವಿಯ ಎಂಟು ಮಕ್ಕಳಲ್ಲಿ ಒಬ್ಬರು. ಅವರು ಜನವರಿ 12, 1863 ರಂದು ಮಕರ ಸಂಕ್ರಾಂತಿಯಂದು ಜನಿಸಿದರು. ತಂದೆ ವಿಶ್ವನಾಥ್ ಅವರು ಸಮಾಜದಲ್ಲಿ ಸಾಕಷ್ಟು ಪ್ರಭಾವ ಬೀರಿದ ಯಶಸ್ವಿ ವಕೀಲರಾಗಿದ್ದರು. ನರೇಂದ್ರನಾಥನ ತಾಯಿ ಭುವನೇಶ್ವರಿಯು ತನ್ನ ಮಗನ ಮೇಲೆ ಹೆಚ್ಚಿನ ಪ್ರಭಾವ ಬೀರಿದ ದೃಢವಾದ, ದೈವಭಕ್ತಿಯುಳ್ಳ ಮನಸ್ಸಿನ ಮಹಿಳೆಯಾಗಿದ್ದರು.

ಚಿಕ್ಕ ಹುಡುಗನಾಗಿದ್ದಾಗ ನರೇಂದ್ರನಾಥ ತೀಕ್ಷ್ಣ ಬುದ್ಧಿಶಕ್ತಿಯನ್ನು ಪ್ರದರ್ಶಿಸಿದ. ಅವರ ಚೇಷ್ಟೆಯ ಸ್ವಭಾವವು ಸಂಗೀತದಲ್ಲಿ ಅವರ ಆಸಕ್ತಿಯನ್ನು ನಿರಾಕರಿಸಿತು, ಅವರು ತಮ್ಮ ಅಧ್ಯಯನದಲ್ಲಿ ಉತ್ತಮ ಸಾಧನೆ ಮಾಡಿದರು, ಮೊದಲು ಮೆಟ್ರೋಪಾಲಿಟನ್ ಸಂಸ್ಥೆಯಲ್ಲಿ ಮತ್ತು ನಂತರ ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ. ಅವರು ಕಾಲೇಜಿನಿಂದ ಪದವಿ ಪಡೆಯುವ ಹೊತ್ತಿಗೆ, ಅವರು ವಿವಿಧ ವಿಷಯಗಳ ಬಗ್ಗೆ ಅಪಾರ ಜ್ಞಾನವನ್ನು ಪಡೆದರು. ಅವರು ಕ್ರೀಡೆ, ಜಿಮ್ನಾಸ್ಟಿಕ್ಸ್, ಕುಸ್ತಿ ಮತ್ತು ದೇಹದಾರ್ಢ್ಯದಲ್ಲಿ ಸಕ್ರಿಯರಾಗಿದ್ದರು. ಅವರು ಅತ್ಯಾಸಕ್ತಿಯ ಓದುಗರಾಗಿದ್ದರು ಮತ್ತು ಸೂರ್ಯನ ಕೆಳಗೆ ಬಹುತೇಕ ಎಲ್ಲವನ್ನೂ ಓದಿದರು. ಅವರು ಒಂದು ಕಡೆ ಭಗವದ್ಗೀತೆ ಮತ್ತು ಉಪನಿಷತ್ತುಗಳಂತಹ ಹಿಂದೂ ಧರ್ಮಗ್ರಂಥಗಳನ್ನು ಪರಿಶೀಲಿಸಿದರು, ಮತ್ತೊಂದೆಡೆ ಅವರು ಡೇವಿಡ್ ಹ್ಯೂಮ್, ಜೋಹಾನ್ ಗಾಟ್ಲೀಬ್ ಫಿಚ್ಟೆ ಮತ್ತು ಹರ್ಬರ್ಟ್ ಸ್ಪೆನ್ಸರ್ ಅವರಿಂದ ಪಾಶ್ಚಿಮಾತ್ಯ ತತ್ವಶಾಸ್ತ್ರ, ಇತಿಹಾಸ ಮತ್ತು ಆಧ್ಯಾತ್ಮಿಕತೆಯನ್ನು ಅಧ್ಯಯನ ಮಾಡಿದರು

ಸ್ವಾಮಿ ವಿವೇಕಾನಂದರು ಹಿಂದೂ ಸನ್ಯಾಸಿ ಮತ್ತು ಭಾರತದ ಅತ್ಯಂತ ಪ್ರಸಿದ್ಧ ಆಧ್ಯಾತ್ಮಿಕ ನಾಯಕರಲ್ಲಿ ಒಬ್ಬರು. ಅವರು ಕೇವಲ ಆಧ್ಯಾತ್ಮಿಕ ಮನಸ್ಸಿಗಿಂತ ಸಮೃದ್ಧ ಚಿಂತಕ, ಶ್ರೇಷ್ಠ ವಾಗ್ಮಿ ಮತ್ತು ಭಾವೋದ್ರಿಕ್ತ ದೇಶಭಕ್ತರಾಗಿದ್ದರು. ಅವರು ತಮ್ಮ ಗುರುಗಳಾದ ರಾಮಕೃಷ್ಣ ಪರಮಹಂಸರ ಮುಕ್ತ ಚಿಂತನೆಯ ತತ್ವವನ್ನು ಹೊಸ ಮಾದರಿಯಲ್ಲಿ ಮುನ್ನಡೆಸಿದರು. ಅವರು ಸಮಾಜದ ಸುಧಾರಣೆಗೆ ಅವಿರತವಾಗಿ ಶ್ರಮಿಸಿದರು, ಬಡವರು ಮತ್ತು ನಿರ್ಗತಿಕರ ಸೇವೆಯಲ್ಲಿ, ತಮ್ಮ ದೇಶಕ್ಕಾಗಿ ತಮ್ಮ ಸರ್ವಸ್ವವನ್ನು ಅರ್ಪಿಸಿದರು. ಅವರು ಹಿಂದೂ ಆಧ್ಯಾತ್ಮಿಕತೆಯ ಪುನರುಜ್ಜೀವನಕ್ಕೆ ಕಾರಣರಾಗಿದ್ದರು ಮತ್ತು ವಿಶ್ವ ವೇದಿಕೆಯಲ್ಲಿ ಹಿಂದೂ ಧರ್ಮವನ್ನು ಪೂಜ್ಯ ಧರ್ಮವಾಗಿ ಸ್ಥಾಪಿಸಿದರು. ವಿಶ್ವದಾದ್ಯಂತ ವ್ಯಾಪಕವಾದ ರಾಜಕೀಯ ಪ್ರಕ್ಷುಬ್ಧತೆಯ ಪ್ರಸ್ತುತ ಹಿನ್ನೆಲೆಯಲ್ಲಿ ಅವರ ಸಾರ್ವತ್ರಿಕ ಸಹೋದರತ್ವ ಮತ್ತು ಸ್ವಯಂ ಜಾಗೃತಿಯ ಸಂದೇಶವು ಪ್ರಸ್ತುತವಾಗಿದೆ. ಯುವ ಸನ್ಯಾಸಿ ಮತ್ತು ಅವರ ಬೋಧನೆಗಳು ಅನೇಕರಿಗೆ ಸ್ಫೂರ್ತಿಯಾಗಿದೆ ಹಾಗೂ ಅವರ ಮಾತುಗಳು ವಿಶೇಷವಾಗಿ ದೇಶದ ಯುವಕರಿಗೆ ಸ್ವಯಂ ಸುಧಾರಣೆಯ ಗುರಿಗಳಾಗಿವೆ. ಈ ಕಾರಣಕ್ಕಾಗಿಯೇ ಅವರ ಜನ್ಮದಿನವಾದ ಜನವರಿ 12 ಅನ್ನು ಭಾರತದಲ್ಲಿ ರಾಷ್ಟ್ರೀಯ ಯುವ ದಿನವನ್ನಾಗಿ ಆಚರಿಸಲಾಗುತ್ತದೆ.



**ಆಧ್ಯಾತ್ಮಿಕ ಬಿಕ್ಕಟ್ಟು ಮತ್ತು ರಾಮಕೃಷ್ಣ ಪರಮಹಂಸರೊಂದಿಗಿನ ಸಂಬಂಧ**

ನರೇಂದ್ರನಾಥ್ ಅವರ ತಾಯಿ ಧರ್ಮನಿಷ್ಠ ಮಹಿಳೆಯಾಗಿದ್ದರೂ ಅವರು ಮನೆಯಲ್ಲಿ ಧಾರ್ಮಿಕ ವಾತಾವರಣದಲ್ಲಿ ಬೆಳೆದಿದ್ದರೂ, ಅವರು ತಮ್ಮ ಯೌವನದ ಆರಂಭದಲ್ಲಿ ಆಳವಾದ ಆಧ್ಯಾತ್ಮಿಕ ಬಿಕ್ಕಟ್ಟನ್ನು ಎದುರಿಸಿದರು. ಅವರು ಕೆಲವು ಕಾಲ ಕೇಶಬ್ ಚಂದ್ರ ಸೇನ್ ನೇತೃತ್ವದ ಬ್ರಹ್ಮೋ ಆಂದೋಲನದೊಂದಿಗೆ ಸಂಬಂಧ ಹೊಂದಿದ್ದರು. ಬ್ರಹ್ಮೋ ಸಮಾಜವು ಮೂರ್ತಿಪೂಜೆ,

ಮೂಢನಂಬಿಕೆಗಳಿಂದ ಕೂಡಿದ ಹಿಂದೂ ಧರ್ಮಕ್ಕಿಂತ ಭಿನ್ನವಾಗಿ ಒಬ್ಬ ದೇವರನ್ನು ಗುರುತಿಸಿದೆ. ಅವನ ಮನಸ್ಸಿನಲ್ಲಿ ದೇವರ ಅಸ್ತಿತ್ವದ ಬಗ್ಗೆ ತಾತ್ವಿಕ ಪ್ರಶ್ನೆಗಳಿಗೆ ಉತ್ತರವಿಲ್ಲ. ಈ ಆಧ್ಯಾತ್ಮಿಕ ಬಿಕ್ಕಟ್ಟಿನ ಸಂದರ್ಭದಲ್ಲಿ, ವಿವೇಕಾನಂದರು ಸ್ಕಾಟಿಷ್ ಚರ್ಚ್ ಕಾಲೇಜಿನ ಪ್ರಾಂಶುಪಾಲರಾದ ವಿಲಿಯಂ ಹ್ಯಾಸ್ಟಿ ಅವರಿಂದ ಶ್ರೀ ರಾಮಕೃಷ್ಣರ ಬಗ್ಗೆ ಮೊದಲು ಕೇಳಿದರು. ಇದಕ್ಕೂ ಮೊದಲು, ದೇವರ ಬಗೆಗಿನ ಅವರ ಬೌದ್ಧಿಕ ಅನ್ವೇಷಣೆಯನ್ನು ಪೂರೈಸಲು, ನರೇಂದ್ರನಾಥ್ ಅವರು ಎಲ್ಲಾ ಧರ್ಮಗಳ ಪ್ರಮುಖ ಆಧ್ಯಾತ್ಮಿಕ ನಾಯಕರನ್ನು ಭೇಟಿ ಮಾಡಿದರು, "ನೀವು ದೇವರನ್ನು ನೋಡಿದ್ದೀರಾ?" ಎಂದು. ನರೇಂದ್ರನು ಪ್ರತಿ ಬಾರಿಯೂ ಸಮಾಧಾನಕರ ಉತ್ತರವಿಲ್ಲದೇ ಹೊರಟು ಹೋಗುತ್ತಿದ್ದ. ದಕ್ಷಿಣೇಶ್ವರ ಕಾಳಿ ದೇವಸ್ಥಾನದ ಆವರಣದಲ್ಲಿರುವ ಶ್ರೀ ರಾಮಕೃಷ್ಣರ ನಿವಾಸದಲ್ಲಿ ಅವರು ಇದೇ ಪ್ರಶ್ನೆಯನ್ನು ಮುಂದಿಟ್ಟರು. ಒಂದು ಕ್ಷಣವೂ ಹಿಂಜರಿಕೆಯಿಲ್ಲದೆ ಶ್ರೀ ರಾಮಕೃಷ್ಣರು ಉತ್ತರಿಸಿದರು: "ಹೌದು, ನಾನು ಹೊಂದಿದ್ದೇನೆ. ನಾನು ನಿನ್ನನ್ನು ನೋಡುವಷ್ಟು ಸ್ಪಷ್ಟವಾಗಿ ದೇವರನ್ನು ನೋಡುತ್ತೇನೆ, ಹೆಚ್ಚು ಆಳವಾದ ಅರ್ಥದಲ್ಲಿ ಮಾತ್ರ." ಆರಂಭದಲ್ಲಿ ರಾಮಕೃಷ್ಣರ ಸರಳತೆಯಿಂದ ಪ್ರಭಾವಿತರಾಗದ ವಿವೇಕಾನಂದರು ರಾಮಕೃಷ್ಣರ ಉತ್ತರದಿಂದ ಬೆರಗಾದರು. ರಾಮಕೃಷ್ಣರು ತಮ್ಮ ತಾಳ್ಮೆ ಮತ್ತು ಪ್ರೀತಿಯಿಂದ ಈ ವಾದದ ಯುವಕನನ್ನು ಕ್ರಮೇಣ ಗೆದ್ದರು.

1884 ರಲ್ಲಿ, ನರೇದ್ರನಾಥನು ತನ್ನ ತಂದೆಯ ಮರಣದ ಕಾರಣದಿಂದ ತನ್ನ ತಾಯಿ ಮತ್ತು ಕಿರಿಯ ಸಹೋದರರನ್ನು ಬೆಂಬಲಿಸಬೇಕಾಗಿದ್ದರಿಂದ ಸಾಕಷ್ಟು ಆರ್ಥಿಕ ಸಂಕಷ್ಟಕ್ಕೆ ಒಳಗಾಯಿತು. ತಮ್ಮ ಕುಟುಂಬದ ಆರ್ಥಿಕ ಯೋಗಕ್ಷೇಮಕ್ಕಾಗಿ ದೇವಿಯನ್ನು ಪ್ರಾರ್ಥಿಸುವಂತೆ ಅವರು ರಾಮಕೃಷ್ಣರನ್ನು ಕೇಳಿಕೊಂಡರು. ರಾಮಕೃಷ್ಣರ ಸಲಹೆಯ ಮೇರೆಗೆ ಅವರೇ ದೇವಸ್ಥಾನಕ್ಕೆ ಹೋಗಿ ಪ್ರಾರ್ಥನೆ ಸಲ್ಲಿಸಿದರು. ಆದರೆ ಒಮ್ಮೆ ಅವರು ದೇವಿಯನ್ನು ಎದುರಿಸಿದ ಅವರು ಹಣ ಮತ್ತು ಸಂಪತ್ತನ್ನು ಕೇಳಲು ಸಾಧ್ಯವಾಗಲಿಲ್ಲ, ಬದಲಿಗೆ ಅವರು 'ವಿವೇಕ' (ಆತ್ಮಸಾಕ್ಷಿ) ಮತ್ತು 'ಬೈರಾಗ್ಯ' (ಏಕಾಂತ) ಕೇಳಿದರು. ಆ ದಿನವು ನರೇಂದ್ರನಾಥರ ಸಂಪೂರ್ಣ ಆಧ್ಯಾತ್ಮಿಕ ಜಾಗೃತಿಯನ್ನು ಗುರುತಿಸಿತು ಮತ್ತು ಅವರು ತಪಸ್ವಿ ಜೀವನ ವಿಧಾನಕ್ಕೆ ಆಕರ್ಷಿತರಾದರು.

### ಬೋಧನೆಗಳು ಮತ್ತು ರಾಮಕೃಷ್ಣ ಮಿಷನ್

ವಿವೇಕಾನಂದರು 1897 ರಲ್ಲಿ ಭಾರತಕ್ಕೆ ಮರಳಿದರು, ಸಾಮಾನ್ಯ ಮತ್ತು ರಾಜಮನೆತನದವರ ಆತ್ಮೀಯ ಸ್ವಾಗತದ ನಡುವೆ. ಅವರು ದೇಶಾದ್ಯಂತ ಉಪನ್ಯಾಸಗಳ ಸರಣಿಯ ನಂತರ ಕಲ್ಕತ್ತಾವನ್ನು ತಲುಪಿದರು ಮೇ 1, 1897 ರಂದು ಕಲ್ಕತ್ತಾ ಬಳಿಯ ಬೇಲೂರು ಮಠದಲ್ಲಿ ರಾಮಕೃಷ್ಣ ಮಿಷನ್ ಅನ್ನು ಸ್ಥಾಪಿಸಿದರು. ರಾಮಕೃಷ್ಣ ಮಿಷನ್‌ನ ಗುರಿಗಳು ಕರ್ಮ ಯೋಗದ ಆದರ್ಶಗಳನ್ನು ಆಧರಿಸಿವೆ ಮತ್ತು ದೇಶದ ಸಂಕಷ್ಟದಲ್ಲಿರುವ ಜನರಿಗೆ ಸೇವೆ ಸಲ್ಲಿಸುವುದು ಇದರ ಪ್ರಾಥಮಿಕ ಉದ್ದೇಶವಾಗಿತ್ತು. ರಾಮಕೃಷ್ಣ ಮಿಷನ್ ವಿವಿಧ ರೀತಿಯ ಸಾಮಾಜಿಕ ಸೇವೆಯನ್ನು ಕೈಗೊಂಡಿದೆ, ಉದಾಹರಣೆಗೆ ಶಾಲೆಗಳು, ಕಾಲೇಜುಗಳು ಮತ್ತು ಆಸ್ಪತ್ರೆಗಳನ್ನು ಸ್ಥಾಪಿಸುವುದು, ಸಮ್ಮೇಳನ, ಸೆಮಿನಾರ್‌ಗಳು ಮತ್ತು ಕಾರ್ಯಾಗಾರಗಳ ಮೂಲಕ ವೇದಾಂತದ ಪ್ರಾಯೋಗಿಕ ತತ್ವಗಳ ಪ್ರಚಾರ, ದೇಶಾದ್ಯಂತ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳನ್ನು ಪ್ರಾರಂಭಿಸುವುದು.

ಅವರ ಧಾರ್ಮಿಕ ಆತ್ಮಸಾಕ್ಷಿಯು ಶ್ರೀರಾಮಕೃಷ್ಣರ ದೈವಿಕ ಅಭಿವ್ಯಕ್ತಿಯ ಆಧ್ಯಾತ್ಮಿಕ ಬೋಧನೆಗಳು ಮತ್ತು ಅದ್ವೈತ ವೇದಾಂತ ತತ್ವಶಾಸ್ತ್ರದ ಅವರ ವೈಯಕ್ತಿಕ ಆಂತರಿಕೀಕರಣದ ಸಂಯೋಜನೆಯಾಗಿದೆ. ನಿಸ್ವಾರ್ಥ ಕೆಲಸ, ಪೂಜೆ, ಮಾನಸಿಕ ಶಿಸ್ತು ಕೈಗೊಳ್ಳುವ ಮೂಲಕ ಆತ್ಮದ ದಿವ್ಯತೆಯನ್ನು ಸಾಧಿಸುವಂತೆ ನಿರ್ದೇಶನ ನೀಡಿದರು. ವಿವೇಕಾನಂದರ ಪ್ರಕಾರ, ಆತ್ಮದ ಸ್ವಾತಂತ್ರ್ಯವನ್ನು ಸಾಧಿಸುವುದು ಅಂತಿಮ ಗುರಿಯಾಗಿದೆ. ॐ

**ಸಂಪ್ರೀತಿ ಸುಘೋಷ**



ಮನುಷ್ಯ ಮಾಂಸಪಿಂಡವಾಗಿ ಬೆಳೆಯಬಾರದು, ಮಂತ್ರಪಿಂಡವಾಗಿ ಬೆಳೆಯಬೇಕು; ಆಗ ಮಾನವ ದಾನವನಾಗದೆ ದೇವನಾಗುತ್ತಾನೆ.

**ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ**



# ಗಣರಾಜ್ಯೋತ್ಸವ

ಭಾರತೀಯ ಗಣರಾಜ್ಯೋತ್ಸವ ಪ್ರತಿ ವರ್ಷದ ಜನವರಿ 26 ರಂದು ಆಚರಿಸಲಾಗುವ ದಿನಾಚರಣೆ. ಭಾರತೀಯ ಸಂವಿಧಾನ ಜಾರಿಗೆ ಬಂದು ಭಾರತವು ಗಣರಾಜ್ಯವಾದದ್ದು ಜನವರಿ 26, 1950 ರಂದು. ಇದರ ಪ್ರಯುಕ್ತ ಈ ದಿನವನ್ನು ಗಣರಾಜ್ಯೋತ್ಸವ ದಿನವನ್ನಾಗಿ ಆಚರಿಸಲಾಗುತ್ತದೆ. ಜನವರಿ 26 ಭಾರತದಾದ್ಯಂತ ಸರ್ಕಾರಿ ರಜಾ ದಿನವಾಗಿ ಆಚರಿಸುತ್ತಾರೆ. ಸಾಮಾನ್ಯವಾಗಿ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ಇದರ ಪ್ರಯುಕ್ತ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾರೆ. ಇದಲ್ಲದೆ ನವದೆಹಲಿಯಲ್ಲಿ ಭಾರತ ಸಶಸ್ತ್ರ ಪಡೆಗಳ ಪ್ರಭಾತಭೇರಿ ನಡೆಯುತ್ತದೆ ಮತ್ತು ದೇಶದೆಲ್ಲೆಡೆ ಜನರು ಹೆಮ್ಮೆಯಿಂದ ಈ ದಿನವನ್ನು ಆಚರಿಸಲಾಗುತ್ತದೆ.

**ಇತಿಹಾಸ**

ಭಾರತವು ಆಗಸ್ಟ್ 15, 1947 ರಂದು ಸ್ವತಂತ್ರವಾದ ನಂತರ, ಆಗಸ್ಟ್ 29 ರಂದು, ಡಾ. ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ಕರಡು ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯು ಸಂವಿಧಾನದ ಕರಡನ್ನು ಸಿದ್ಧಪಡಿಸಿ ನವೆಂಬರ್ 4, 1947 ರಂದು ವಿಧಾನಸಭೆಯಲ್ಲಿ ಮಂಡಿಸಿತು. ಇದನ್ನು ನವೆಂಬರ್ 26, 1949 ರಂದು ಅಂಗೀಕರಿಸಲಾಯಿತು ಮತ್ತು ಅನೇಕ ಪರಿಷ್ಕರಣೆಗಳು ಹಾಗೂ ತಿದ್ದುಪಡಿಗಳ ನಂತರ, ಭಾರತದ ಸಂವಿಧಾನವು ಜನವರಿ 26, 1950 ರಂದು ಜಾರಿಗೆ ಬಂದಿತು. ಭಾರತೀಯ ಸ್ವಾತಂತ್ರ್ಯ ಚಳುವಳಿ, ಜನವರಿ 26, 1929 ರಂದು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪೂರ್ಣ ಸ್ವರಾಜ್ಯವನ್ನು ಗುರಿಯಾಗಿಸಿಕೊಂಡಿತು. ಲಾಹೋರ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು ಮತ್ತು ದಿನವನ್ನು ಪೂರ್ಣ ಸ್ವರಾಜ್ ದಿನ ಎಂದು ಘೋಷಿಸಲಾಯಿತು. ಈ ಕಾರಣಕ್ಕಾಗಿಯೇ ಭಾರತದ ಸಂವಿಧಾನವನ್ನು ಸ್ವಾತಂತ್ರ್ಯದ ನಂತರ ಈ ದಿನದಂದು ಜಾರಿಗೆ ತರಲಾಯಿತು.

ಮುಖ್ಯ ಗಣರಾಜ್ಯೋತ್ಸವವನ್ನು ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ರಾಜ್‌ಪಾತ್‌ನಲ್ಲಿ ಭಾರತದ ರಾಷ್ಟ್ರಪತಿಗಳ ಮುಂದೆ ನಡೆಸಲಾಗುತ್ತದೆ. ಈ ದಿನ, ರಾಜ್‌ಪಾತ್‌ನಲ್ಲಿ ವಿಧ್ಯುಕ್ತ ಮೆರವಣಿಗೆಗಳು ನಡೆಯುತ್ತವೆ, ಇದನ್ನು ಭಾರತಕ್ಕೆ ಗೌರವವಾಗಿ ನಡೆಸಲಾಗುತ್ತದೆ.



ದೆಹಲಿ ಗಣರಾಜ್ಯೋತ್ಸವ ಮೆರವಣಿಗೆಯನ್ನು ರಾಜಧಾನಿ ನವದೆಹಲಿಯಲ್ಲಿ ರಕ್ಷಣಾ ಸಚಿವಾಲಯ ಆಯೋಜಿಸುತ್ತದೆ. ಭಾರತ ಗೇಟ್‌ನ ಹಿಂದೆ ರಾಜ್‌ಪಾತ್‌ನಲ್ಲಿರುವ ರಾಷ್ಟ್ರಪತಿ ಭವನ (ಅಧ್ಯಕ್ಷರ ನಿವಾಸ) ದ್ವಾರಗಳಿಂದ ಪ್ರಾರಂಭವಾದ ಈ ಘಟನೆಯು ಮೂರು ದಿನಗಳ ಕಾಲ ನಡೆಯುವ ಭಾರತದ ಗಣರಾಜ್ಯೋತ್ಸವದ ಪ್ರಮುಖ ಆಕರ್ಷಣೆಯಾಗಿದೆ. ಮೆರವಣಿಗೆ ಭಾರತದ ರಕ್ಷಣಾ ಸಾಮರ್ಥ್ಯ, ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಂಪರೆಯನ್ನು ಪ್ರದರ್ಶಿಸುತ್ತದೆ.

ನೌಕಾಪಡೆಗೆ ಹೆಚ್ಚುವರಿಯಾಗಿ ಭಾರತೀಯ ಸೇನೆಯ ಒಂಬತ್ತರಿಂದ ಹನ್ನೆರಡು ವಿಭಿನ್ನ ರೆಜಿಮೆಂಟ್‌ಗಳು, ಮತ್ತು ವಾಯುಪಡೆಯು ತಮ್ಮ ಬ್ಯಾಂಡ್‌ಗಳೊಂದಿಗೆ ತಮ್ಮ ಎಲ್ಲಾ ಉತ್ಕೃಷ್ಟ ಮತ್ತು ಅಧಿಕೃತ ಅಲಂಕಾರಗಳಲ್ಲಿ ಕಳೆದವು. ಭಾರತೀಯ ಸಶಸ್ತ್ರ ಪಡೆಗಳ ಕಮಾಂಡರ್–ಇನ್–ಚೀಫ್ ಆಗಿರುವ ಭಾರತದ ರಾಷ್ಟ್ರಪತಿಗಳು ವಂದನೆ ಸಲ್ಲಿಸುತ್ತಾರೆ. ಭಾರತದ ವಿವಿಧ ಪ್ಯಾರಾ–ಮಿಲಿಟರಿ ಪಡೆಗಳು ಮತ್ತು ಇತರ ನಾಗರಿಕ ಪಡೆಗಳ ಹನ್ನೆರಡು ತುಕಡಿಗಳು ಈ ಮೆರವಣಿಗೆಯಲ್ಲಿ ಭಾಗವಹಿಸುತ್ತವೆ.

ಈ ಸಮಾರಂಭದ ಮುಖ್ಯ ಅತಿಥಿಯಾಗಿ ಭಾರತದ ರಾಷ್ಟ್ರಪತಿಗಳು ಅಶ್ವದಳದ ಘಟಕವಾದ (ಪಿಬಿಜಿ) ಬೆಂಗಾವಲು ಆಗಮಿಸುತ್ತಾರೆ. ಅಧ್ಯಕ್ಷರು ಬಂದಾಗ, ಪಿಬಿಜಿ ಕಮಾಂಡರ್ ಅವರು ರಾಷ್ಟ್ರೀಯ ವಂದನೆ ನೀಡುವಂತೆ ಘಟಕವನ್ನು ಕೇಳುತ್ತಾರೆ, ಅದರ ನಂತರ ಸೇನೆಯು ಭಾರತೀಯ ರಾಷ್ಟ್ರಗೀತೆ ಜನ ಗಣ ಮನವನ್ನು ನುಡಿಸುತ್ತದೆ. ಸೈನ್ಯವು ಸಾಮೂಹಿಕ ಬ್ಯಾಂಡ್‌ಗಳಿಂದ ಪ್ರದರ್ಶನ ಸಮಾರಂಭವನ್ನು ಅಭಿವೃದ್ಧಿಪಡಿಸುತ್ತದೆ, ಇದರಲ್ಲಿ ಮಿಲಿಟರಿ ಬ್ಯಾಂಡ್‌ಗಳು, ಪೈಪ್ ಮತ್ತು ಡ್ರಮ್ ಬ್ಯಾಂಡ್‌ಗಳು, ವಿವಿಧ ಸೇನಾ ರೆಜಿಮೆಂಟ್‌ಗಳ ಬಗ್ಲರ್‌ಗಳು ಮತ್ತು ಟ್ರಂಪೆಟರ್‌ಗಳು ಮತ್ತು ನೌಕಾಪಡೆ ಮತ್ತು ವಾಯುಪಡೆಯ ಬ್ಯಾಂಡ್‌ಗಳು ಭಾಗವಹಿಸುತ್ತವೆ, ಇದು ಮಹಾತ್ಮ ಗಾಂಧಿಯವರ ನೆಚ್ಚಿನ ಅಬೈಡ್ ವಿಥ್ ಮಿ ನಂತಹ ಜನಪ್ರಿಯ ರಾಗಗಳನ್ನು ನುಡಿಸುತ್ತದೆ. ಸ್ತುತಿಗೀತೆ, ಮತ್ತು ಕೊನೆಯಲ್ಲಿ ಸಾರೇ ಜಹಾನ್ ಸೆ ಅಚ್ಛಾ ಗೀತೆಯನ್ನು ನುಡಿಸುತ್ತಾರೆ..

ಗಣರಾಜ್ಯೋತ್ಸವದ ಮುನ್ನಾದಿನದಂದು ಭಾರತದ ಅಧ್ಯಕ್ಷರು ಪ್ರತಿವರ್ಷ ಭಾರತದ ನಾಗರಿಕರಿಗೆ ಪದ್ಮಾ ಪ್ರಶಸ್ತಿಗಳನ್ನು ವಿತರಿಸಿದರು, ಇದು ಭಾರತದ ರತ್ನ ನಂತರದ ಪ್ರಮುಖ ಪ್ರಶಸ್ತಿ, ಇದು ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿ. ಈ ಪ್ರಶಸ್ತಿಯನ್ನು ಮೂರು ವಿಭಾಗಗಳಲ್ಲಿ ನೀಡಲಾಗಿದೆ, ಅಂದರೆ. ಪ್ರಾಮುಖ್ಯತೆಯ ಕ್ಷೀಣಿಸುತ್ತಿರುವ ಕ್ರಮದಲ್ಲಿ ಪದ್ಮವಿಭೂಷಣ, ಪದ್ಮಭೂಷಣ್ ಮತ್ತು ಪದ್ಮಶ್ರೀ ಪ್ರಶಸ್ತಿಗಳಾಗಿವೆ.

ಅಸಾಧಾರಣ ಮತ್ತು ವಿಶಿಷ್ಟ ಸೇವೆಗಾಗಿ ಪದ್ಮವಿಭೂಷಣ್. ಪದ್ಮವಿಭೂಷಣ್ ಭಾರತದ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿ. "ಉನ್ನತ ಕ್ರಮಾಂಕದ ವಿಶಿಷ್ಟ ಸೇವೆಗಾಗಿ ಪದ್ಮಭೂಷಣ್. ಪದ್ಮಭೂಷಣ್ ಭಾರತದ ಮೂರನೇ ಅತಿ ಹೆಚ್ಚು ನಾಗರಿಕ ಪ್ರಶಸ್ತಿ. "ವಿಶೇಷ ಸೇವೆ" ಗಾಗಿ ಪದ್ಮಶ್ರೀ ಪ್ರಶಸ್ತಿ ನೀಡಲಾಗುತ್ತದೆ. ಪದ್ಮಶ್ರೀ ಭಾರತದ ನಾಲ್ಕನೇ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಾಗಿವೆ. ॐ







# ಸಾವಯವ ಕೃಷಿ



✍ ಯೋಗಾನರಸಿಂಹ ಗುಂಗರಮೇಳೆ.

ಅತಿಯಾದ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಬಳಕೆಯಿಂದ ನೈಸರ್ಗಿಕ ಸಂಪನ್ಮೂಲಗಳಾದ ಮಣ್ಣು, ನೀರು ಮತ್ತು ಗಾಳಿ ಮಲಿನಗೊಳ್ಳುವುದರ ಜೊತೆಗೆ ಸಸ್ಯ ಮತ್ತು ಪ್ರಾಣಿಸಂಕುಲಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿದೆ ಹಾಗೂ ಭೂಮಿಯ ಭೌತಿಕ, ರಾಸಾಯನಿಕ ಹಾಗೂ ಜೈವಿಕ ಗುಣಧರ್ಮಗಳು ಕ್ಷೀಣಿಸಿ ಮಣ್ಣಿನ ಫಲವತ್ತತೆ ಮತ್ತು ಉತ್ಪಾದಕತೆ ಕುಂಠಿತಗೊಂಡಿದೆ. ರಾಸಾಯನಿಕ ವಸ್ತುಗಳ ಬಳಕೆಯಿಂದ ಬರಡಾಗುತ್ತಿರುವ ಭೂಮಿಗೆ ಚೈತನ್ಯ ತುಂಬಲು ಸಾವಯವ ಕೃಷಿ ಪದ್ಧತಿಯು ಅಗತ್ಯ ಮತ್ತು ಅನಿವಾರ್ಯವಾಗಿದೆ. ಸಾವಯವ ಕೃಷಿಯು ಒಂದು ಸಮಗ್ರ ಬೆಳೆ ಉತ್ಪಾದನಾ ಪದ್ಧತಿಯಾಗಿದ್ದು, ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿ, ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಂಡು ಪರಿಸರ ಸ್ನೇಹಿ ಜೈವಿಕ ವಿಧಾನಗಳನ್ನು ಬಳಸಿ ಗುಣಮಟ್ಟದ ಆಹಾರ ಉತ್ಪಾದನೆ ಮಾಡುವ ಕ್ರಮವಾಗಿದೆ.

**ಸಾವಯವ ಕೃಷಿಯ ಮುಖ್ಯ ಉದ್ದೇಶಗಳು**

ಸ್ಥಳೀಯ ಸಂಪನ್ಮೂಲಗಳನ್ನು ಬಳಕೆ ಮಾಡಿ ಮಣ್ಣಿನ ಫಲವತ್ತತೆಯನ್ನು ಸ್ಥಿರವಾಗಿ ಕಾಪಾಡುವುದು.

ಮಣ್ಣಿನ ಆರೋಗ್ಯ ಮತ್ತು ಉತ್ಪಾದಕತೆಯನ್ನು ಕೃಷಿ ತ್ಯಾಜ್ಯ ವಸ್ತುಗಳ ಮರುಬಳಕೆ ಹಾಗು ಸಾವಯವ ಮತ್ತು ಜೈವಿಕ ಗೊಬ್ಬರಗಳ ಬಳಕೆಯಿಂದ ಅಭಿವೃದ್ಧಿಪಡಿಸುವುದು.

ಕೀಟ, ರೋಗ ಮತ್ತು ಕಳೆಗಳನ್ನು ಜೈವಿಕ ಹಾಗೂ ಸಸ್ಯಜನ್ಯಗಳ ಬಳಕೆಯಿಂದ ನಿರ್ವಹಣೆ ಮಾಡುವುದು.

ಮಾನವ ಮತ್ತು ಜಾನುವಾರುಗಳ ಅವಶ್ಯಕತೆಗನುಗುಣವಾಗಿ ಉತ್ತಮ ಗುಣಮಟ್ಟದ ಪೌಷ್ಠಿಕ ಆಹಾರವನ್ನು ಉತ್ಪಾದಿಸುವುದು.

ಸಮಗ್ರ ಬೆಳೆ ಪದ್ಧತಿಗಳು, ಬೆಳೆ ಪರಿವರ್ತನೆ, ಅಂತರ ಬೆಳೆಗಳು, ಹೊದಿಕೆ ಬೆಳೆಗಳು ಮತ್ತು ಮಿಶ್ರ ಬೇಸಾಯ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು.

ಕೃಷಿ ಬೆಳೆಗಳ ಉತ್ಪಾದನೆಯ ಜೊತೆಗೆ ಹೈನುಗಾರಿಕೆ, ಕೋಳಿಸಾಕಣೆ ಇತ್ಯಾದಿ ಉಪ ಕಸುಬುಗಳನ್ನು ಒಳಗೊಂಡಂತೆ ಮಿಶ್ರ ಕೃಷಿಯನ್ನು ಮಾಡುವುದು.

ಜೀವ ವೈವಿಧ್ಯತೆ ಕಾಪಾಡುವುದರ ಜೊತೆಗೆ ಸಸ್ಯ, ಮಾನವ, ಪ್ರಾಣಿ ಸಂಕುಲ, ಸೂಕ್ಷ್ಮಾಣು ಜೀವಿಗಳ ಪ್ರಕೃತಿ ಸಂಬಂಧ ಸಮತೋಲನವನ್ನು ಕಾಪಾಡುವುದು.

ಸಾವಯವ ಕೃಷಿಯ ಪ್ರಮುಖ ಭಾಗಗಳು

**೧. ಸಾವಯವ ಗೊಬ್ಬರಗಳು**

ಸಾವಯವ ಗೊಬ್ಬರಗಳೆಂದರೆ ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್, ಎರೆಹುಳು ಗೊಬ್ಬರ, ಕೋಳಿ ಗೊಬ್ಬರ, ಕುರಿ ಗೊಬ್ಬರ, ಹಂದಿ ಗೊಬ್ಬರ, ಹಸಿರೆಲೆ ಗೊಬ್ಬರ, ಹಿಂಡಿಗಳು ಇತ್ಯಾದಿ.

ವಿವಿಧ ಸಾವಯವ ಗೊಬ್ಬರಗಳಲ್ಲಿರುವ ಪೋಷಕಾಂಶಗಳ ಪ್ರಮಾಣ

| ಗೊಬ್ಬರಗಳು | ಸಾರಜನಕ (%) | ಪೊಟ್ಯಾಷಿಯಂ (%) | ರಂಜಕ (%) |
|---|---|---|---|
| ಕೊಟ್ಟಿಗೆ ಗೊಬ್ಬರ | 0.4–1.0 | 0.8–1.2 | 0.4–0.8 |
| ಕಾಂಪೋಸ್ಟ್ ಗೊಬ್ಬರ | 0.5–1.5 | 1.0–1.9 | 0.7–0.9 |
| ಎರೆಹುಳು ಗೊಬ್ಬರ | 1.10 | 0.98 | 0.86 |
| ಕುರಿ/ಆಡು ಗೊಬ್ಬರ | 3.00 | 2.00 | 1.00 |
| ಕೋಳಿ ಗೊಬ್ಬರ | 3.03 | 1.40 | 2.63 |
| ತೆಂಗಿನ ನಾರಿನ ಪುಡಿ ಕಾಂಪೋಸ್ಟ್ | 1.03 | 1.03 | 0.27 |
| ಅಡಿಕೆ ಸಿಪ್ಪೆ ಕಾಂಪೋಸ್ಟ್ | 1.39 | 1.36 | 0.63 |
| ಹಸಿರೆಲೆ ಗೊಬ್ಬರ | 0.61–0.91 | 0.30–0.65 | 0.12–0.18 |

**(1) ಕೊಟ್ಟಿಗೆ ಗೊಬ್ಬರ**

ದನದ ಗೊಬ್ಬರ ಅಥವಾ ಸಗಣಿ ಗೊಬ್ಬರವನ್ನು ಕೊಟ್ಟಿಗೆ ಗೊಬ್ಬರವೆಂದು ಕರೆಯಲಾಗುತ್ತದೆ. ಕೊಟ್ಟಿಗೆಯಿಂದ ದೊರೆಯುವ ಸಗಣಿ, ಗಂಜಲ ಮತ್ತು ಇತರೆ ಕಸವನ್ನು ಗುಂಡಿಯಲ್ಲಿ ಪದರಗಳಲ್ಲಿ ತುಂಬುವುದರಿಂದ 3–4 ತಿಂಗಳುಗಳಲ್ಲಿ ಸಾವಯವ ಪದಾರ್ಥಗಳು ಜೈವಿಕ ಕ್ರಿಯೆಯಿಂದ ಕಳಿತು ಕೊಟ್ಟಿಗೆ ಗೊಬ್ಬರವಾಗುತ್ತದೆ. ಕೊಟ್ಟಿಗೆ ಗೊಬ್ಬರವನ್ನು ಬಿತ್ತನೆಗೆ 2–3 ವಾರ ಮೊದಲು ಮಣ್ಣಿನಲ್ಲಿ ಚೆನ್ನಾಗಿ ಬೆರೆಸುವುದರಿಂದ ಬೆಳೆಗೆ ಪ್ರಯೋಜನಕಾರಿಯಾಗುವುದು.

**(2) ಕಾಂಪೋಸ್ಟ್ ಗೊಬ್ಬರ**

ಕೊಟ್ಟಿಗೆಯಿಂದ ದೊರೆಯುವ ಸಗಣಿ, ಗಂಜಲ, ಕಸದ ಜೊತೆಗೆ ಬೆಳೆಗಳಿಂದ ದೊರೆತ ಎಲೆ, ತರಗು, ಬೂದಿ, ಕಳೆಗಳು, ಅನೇಕ ತರಹದ ಕೃಷಿ ತ್ಯಾಜ್ಯ ವಸ್ತುಗಳನ್ನು ಗುಂಡಿಯಲ್ಲಿ ಅಥವಾ ಭೂಮಿಯ ಮೇಲೆ ವಿವಿಧ ಪದರಗಳಲ್ಲಿ ತುಂಬುವುದರಿಂದ 3–4 ತಿಂಗಳುಗಳಲ್ಲಿ ಸಾವಯವ ಪದಾರ್ಥಗಳು ಜೈವಿಕ ಕ್ರಿಯೆಯಿಂದ ಕಳಿತು ಪಕ್ವವಾಗಿ ಉತ್ತಮ ಗೊಬ್ಬರವಾಗುತ್ತದೆ. ಕಾಂಪೋಸ್ಟ್‌ನ ಗುಣಮಟ್ಟವು ಬಳಸುವ ಸಾವಯವ ತ್ಯಾಜ್ಯ ವಸ್ತುಗಳ ಮೇಲೆ ಅವಲಂಭಿಸಿರುತ್ತದೆ.

ಕಾಂಪೋಸ್ಟ್ ತಯಾರಿಕಾ ವಿಧಾನಗಳು : ಇಂದೋರ್ ಪದ್ಧತಿ, ಬೆಂಗಳೂರು ಪದ್ಧತಿ, ನಾಡೆಫ್ ಪದ್ಧತಿ, ಜಪಾನ್ (ತೊಟ್ಟಿ) ಪದ್ಧತಿ ಮತ್ತು ಗುಡ್ಡೆ (ವಿಂಡ್‌ರೊ) ಪದ್ಧತಿಗಳು ಪ್ರಮುಖ ಕಾಂಪೋಸ್ಟ್ ತಯಾರಿಕಾ ವಿಧಾನಗಳು. ಕಾಂಪೋಸ್ಟ್ ತಯಾರಿಕೆಯಲ್ಲಿ ಸಾವಯವ ವಸ್ತುಗಳ ಕಳಿಯುವಿಕೆಯನ್ನು ಹೆಚ್ಚಿಸಲು ಅಸ್ಪರಜಿಲ್ಲಸ್, ಪೆನ್ಸಿಲಿಯಂ, ಟ್ರೈಕೊಡರ್ಮಾ, ಪ್ಲೊರೊಟಸ್, ಬ್ಯಾಸಿಲಸ್, ಸೂಡೋಮೊನಾಸ್, ಪಾಲಿಫೋರಸ್, ಇತ್ಯಾದಿ ಸೂಕ್ಷ್ಮಾಣುಜೀವಿಗಳನ್ನು ಬಳಕೆ ಮಾಡಲಾಗುತ್ತದೆ.

**ಅ). ಇಂದೋರ್ ಪದ್ಧತಿ : ಉಪಯೋಗಿಸುವ ಸಾವಯವ ವಸ್ತುಗಳು: ಸಸ್ಯ ಮತ್ತು ಬೆಳೆಯ ತ್ಯಾಜ್ಯ ವಸ್ತುಗಳು, ದನಕರುಗಳ ಸಗಣಿ, ಕೊಟ್ಟಿಗೆಯ ಕಸಕಡ್ಡಿಗಳು ಹಾಗು ಕಟ್ಟಿಗೆಯ ಬೂದಿ.**

**ತಯಾರಿಸುವ ವಿಧಾನ :** ಕಾಂಪೋಸ್ಟ್ ಗುಂಡಿಗಳನ್ನು 2 ರಿಂದ 2.5 ಮೀ. ಅಗಲ. 0.9 ಮೀ. ಆಳ ಹಾಗೂ 3 ರಿಂದ 10 ಮೀ. ಉದ್ದದವರೆಗೂ ಮಾಡಿಕೊಳ್ಳಬಹುದು. ಮೊದಲು ದನಕರುಗಳ ಕೊಟ್ಟಿಗೆಯಿಂದ ತಂದ ತ್ಯಾಜ್ಯ ವಸ್ತುಗಳನ್ನು ದಪ್ಪ ಪದರವಾಗಿ ಹಾಕಬೇಕು. ಅದರ ಮೇಲೆ ಕಟ್ಟಿಗೆ ಬೂದಿ, ಕೃಷಿ ತ್ಯಾಜ್ಯ ವಸ್ತುಗಳನ್ನು ಹರಡಬೇಕು. ನಂತರ ದನಗಳ ಸಗಣಿ ಹಾಗೂ ಮಣ್ಣನ್ನು ಪದರಗಳಲ್ಲಿ ಹರಡಬೇಕು. ಈ ರೀತಿ ಪದರಗಳನ್ನು ಸುಮಾರು 1 ಮೀ. ಎತ್ತರದವರೆಗೆ ಹಾಕುತ್ತಾ ಹೋಗಬೇಕು. ಗುಂಡಿಯ ಕೊನೆಯ ಭಾಗದಲ್ಲಿ 1 ಮೀ. ನಷ್ಟು ಸ್ಥಳವನ್ನು ಗೊಬ್ಬರ ತಿರುವು ಹಾಕಲು ಮತ್ತು ಮಿಶ್ರ ಮಾಡಲು ಬಿಡಬೇಕು. ಗುಂಡಿ ತುಂಬಿದ 15 ದಿವಸಗಳಲ್ಲಿ ಮೊದಲನೆಯ ಬಾರಿ ತಿರುವಿ ಹಾಕಬೇಕು. ನಂತರ 15 ದಿನಗಳ ಮೇಲೆ ಎರಡನೆ ಬಾರಿ ಮತ್ತು 2 ತಿಂಗಳ ನಂತರ ಮೂರನೆಯ ಬಾರಿ ತಿರುವಿ ಮತ್ತೆ ಒಂದು ತಿಂಗಳು ಕಳಿಯಲು ಬಿಡಬೇಕು. ಆಗಾಗ್ಗೆ ಮೇಲು ಬಾಗದಲ್ಲಿ ನೀರನ್ನು ಚಿಮುಕಿಸಬೇಕು. ಸುಮಾರು 4 ತಿಂಗಳುಗಳಲ್ಲಿ ಕಾಂಪೋಸ್ಟ್ ಸಿದ್ಧವಾಗುತ್ತದೆ.



**ಆ). ಬೆಂಗಳೂರು ಪದ್ಧತಿ: ಉಪಯೋಗಿಸುವ ಸಾವಯವ ವಸ್ತುಗಳು: ನಗರ ತ್ಯಾಜ್ಯ ವಸ್ತುಗಳು, ಮನುಷ್ಯರ ತ್ಯಾಜ್ಯ ಮತ್ತು ಮಣ್ಣು.**

ತಯಾರಿಸುವ ವಿಧಾನ : ಈ ಪದ್ಧತಿಯಲ್ಲಿ 10 ಮೀ. ಉದ್ದ, 2 ಮೀ. ಅಗಲ ಹಾಗೂ 1 ಮೀ. ಆಳವಿರುವ ಕಂದಕವನ್ನು ತೋಡಬೇಕು. ಈ ಕಂದಕದ ಕೆಳಭಾಗದಲ್ಲಿ ನಗರ ತ್ಯಾಜ್ಯ ವಸ್ತುಗಳನ್ನು 15 ಸೆಂ. ಮೀ. ದಪ್ಪ ಪದರವಾಗಿ ಹರಡಿ ನೀರನ್ನು ಚಿಮುಕಿಸಬೇಕು. ಅನಂತರ ಮನುಷ್ಯರ ತ್ಯಾಜ್ಯವನ್ನು 5 ಸೆಂ. ಮೀ. ದಪ್ಪ ಪದರವಾಗಿ ಹಾಕಬೇಕು. ಅದರ ಮೇಲೆ 5 ಮಿ. ಮೀ. ದಪ್ಪವಾಗಿ ಮಣ್ಣನ್ನು ಹಾಕಬೇಕು. ಈ ಕ್ರಮವನ್ನು ಭೂಮಿಯಿಂದ 45–60 ಸೆಂ. ಮೀ. ಮೇಲೆ ಬರುವಂತೆ ಪುನರಾವರ್ತಿಸಬೇಕು. ಕೊನೆಯಲ್ಲಿ ಮಣ್ಣಿನ ರಾಡಿಯಿಂದ 2 ಅಂಗುಲ ದಪ್ಪ ಮೆತ್ತೆ ಹಾಕಿ ಮುಚ್ಚಬೇಕು. ಇಲ್ಲಿ ತಿರುವಿ ಹಾಕುವ ಹಾಗೂ ನೀರು ಚಿಮುಕಿಸುವ ಅಗತ್ಯವಿಲ್ಲ. ಇದು ಕಡಿಮೆ ಮಳೆ ಬೀಳುವ ಪ್ರದೇಶಗಳಿಗೆ ಹಾಗೂ ನಗರ ಪ್ರದೇಶಗಳಿಗೆ ಸೂಕ್ತ. ಕಾಂಪೋಸ್ಟ್ ಆಗುವ ಕಾಲಾವಧಿ 8 ರಿಂದ 9 ತಿಂಗಳು.

**ಇ). ನಾಡೆಫ್ ಪದ್ಧತಿ : ಉಪಯೋಗಿಸುವ ಸಾವಯವ ವಸ್ತುಗಳು: ಕೃಷಿ ತ್ಯಾಜ್ಯಗಳು, ಸಗಣಿ, ಮತ್ತು ಮಣ್ಣು.**

ತಯಾರಿಸುವ ವಿಧಾನ : ಸುಮಾರು 3 ರಿಂದ 4 ಮೀ. ಉದ್ದ, 2 ಮೀ. ಅಗಲ ಮತ್ತು 1–2 ಮೀ. ಎತ್ತರವಿರುವ ತೊಟ್ಟಿಯನ್ನು ಇಟ್ಟಿಗೆ ಬಳಸಿ ಕಟ್ಟಿಕೊಳ್ಳಬೇಕು. ಈ ತೊಟ್ಟಿಯ ಗೋಡೆಯನ್ನು ಕಟ್ಟುವಾಗ, ಅಲ್ಲಲ್ಲಿ 15 ಸೆಂ. ಮೀ. ಸುತ್ತಳತೆಯ ಕಿಂಡಿಗಳನ್ನು ಬಿಟ್ಟು ತೊಟ್ಟಿಯೊಳಗೆ ಗಾಳಿ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು. ತೊಟ್ಟಿಯಲ್ಲಿ 15 ಸೆಂ. ಮೀ. ದಪ್ಪ ಪದರವಾಗಿ ಕೃಷಿ ತ್ಯಾಜ್ಯಗಳನ್ನು ಹರಡಬೇಕು. ಇದರ ಮೇಲೆ ಗೋಬರ್ ಗ್ಯಾಸ್ ಬಗ್ಗಡ ಇಲ್ಲವೆ ಸಗಣಿ ಬಗ್ಗಡವನ್ನು ಹಾಕಬೇಕು. ಅನಂತರ 4 ರಿಂದ 5 ಮಂಕರಿಯಷ್ಟು ಮಣ್ಣನ್ನು ಮೂರನೆಯ ಪದರವಾಗಿ ಹರಡಬೇಕು. ಈ ರೀತಿ 4 ರಿಂದ 5 ಪದರಗಳನ್ನು ತೊಟ್ಟಿಯ ಅಂಚಿನ ಮೇಲೆ ಸುಮಾರು 30–45 ಸೆಂ. ಮೀ. ಎತ್ತರದವರೆಗೆ ಗುಡಿಸಲು ಮಾದರಿಯಲ್ಲಿ ತುಂಬಬೇಕು. ತುಂಬಿದ 15–20 ದಿವಸಗಳ ನಂತರ ಸಾವಯವ ವಸ್ತುಗಳ ಮಟ್ಟ ಕುಸಿಯುವುದರಿಂದ ಮತ್ತೊಮ್ಮೆ ತುಂಬಿ ಕಳಿಯಲು ಬಿಡಬೇಕು. ನೀರನ್ನು ಚಿಮುಕಿಸುವ ಅಥವಾ ಗೊಬ್ಬರವನ್ನು ತಿರುವಿಹಾಕುವ ಅವಶ್ಯಕತೆ ಇರುವುದಿಲ್ಲ. ಸುಮಾರು 3 ರಿಂದ 4 ತಿಂಗಳುಗಳಲ್ಲಿ ಕಾಂಪೋಸ್ಟ್ ತಯಾರಾಗುತ್ತದೆ. ॐ

ಮುಂದುವರೆಯುವುದು.. .. ..

# ನೇತಾಜಿ ಸುಭಾಷ್ ಚಂದ್ರ ಬೋಸ್

ಸುಭಾಷ್ ಚಂದ್ರ ಬೋಸ್ ಜನಿಸಿದ್ದು 1897ರ ಜನವರಿ 23 ರಂದು, ಒಡಿಶಾದ ಕಟಕ್‌ನಲ್ಲಿ. ತಂದೆ ಜಾನಕೀನಾಥ ಬೋಸ್, ತಾಯಿ ಪ್ರಭಾವತಿ. ಆ ದಂಪತಿಗಳ 14 ಜನ ಮಕ್ಕಳಲ್ಲಿ ಸುಭಾಷ್ 9 ನೆಯವರು. ಕಟಕ್‌ನಲ್ಲಿ ರಯಾವೆನ್‌ಶಾ ಕೊಲಿಜಿಯೇಟ್ ಶಾಲೆಯಲ್ಲಿ ಪ್ರಾಥಮಿಕ ವ್ಯಾಸಂಗ, ಅಲ್ಲಿ ಮುಖ್ಯೋಪಾಧ್ಯಾಯ ಬೇಣಿಮಾಧವದಾಸ್‌ರಿಂದ ಪ್ರೇರಣೆ, ಮುಂದೆ ವಿವೇಕಾನಂದರ ಸಾಹಿತ್ಯಗಳು, ಪತ್ರಗಳು ಮತ್ತು 'ಕೊಲೊಂಬೋದಿಂದ ಆಲ್ಮೋರಾಕ್ಕೆ' ಉಪನ್ಯಾಸಗಳಿಂದ ಪ್ರಭಾವಿತರಾದ ಬೋಸರು ಅರವಿಂದರ 'ಆರ್ಯ' ಮಾಸಪತ್ರಿಕೆಯ ತಪ್ಪದ ಓದುಗರಾದರು.

1919ರಲ್ಲಿ ತತ್ವಶಾಸ್ತ್ರ ವಿಭಾಗದಲ್ಲಿ ಬಿ.ಎ. ಪದವಿ, ನಂತರ 1919ರ ಸೆಪ್ಟೆಂಬರ್ 15ರಂದು ಐ.ಸಿ.ಎಸ್ ಪರೀಕ್ಷೆಗಾಗಿ ಇಂಗ್ಲೆಂಡಿಗೆ ಪಯಣ. 1920ರ ಸೆಪ್ಟಂಬರ್‌ನಲ್ಲಿ ನಾಲ್ಕನೇ ಸ್ಥಾನಿಗರಾಗಿ ಐ.ಸಿ.ಎಸ್ ಪದವಿ ಪ್ರಾಪ್ತಿ. ವಿದೇಶಿ ನೌಕರಿ ಒಲ್ಲೆ ಎಂದು ಗಳಿಸಿದ್ದ ಐ.ಸಿ.ಎಸ್. ಪದವಿಯನ್ನು 1921ರ ಏಪ್ರಿಲ್ 22ರಂದು ಬ್ರಿಟಿಷ್ ಸರ್ಕಾರದ ಭಾರತ ವ್ಯವಹಾರ ಸಚಿವ ಎಡ್ವಿನ್ ಮಾಂಟೆಗುಗೆ ಪತ್ರವೊಂದನ್ನು ಬರೆದು ಮರಳಿಸಿದ್ದರು ಬೋಸ್!

ನೇತಾಜಿ ಎಂದೇ ಪ್ರಸಿದ್ಧರಾದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಜನನಾಯಕರಲ್ಲಿ ಒಬ್ಬರು. ಸ್ವಾಮಿ ವಿವೇಕಾನಂದರ ವಿಚಾರಗಳಿಂದ ಪ್ರಭಾವಿತರಾದ ಇವರು ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಅತ್ಯಂತ ವಿಶಿಷ್ಟ ಪಾತ್ರವಹಿಸಿದವರು. ಅವರು ಭಾರತದ ಮಹಾನ್ ವ್ಯಕ್ತಿಯಾಗಿದ್ದರು. ಅವರು ಭಾರತೀಯ ಸ್ವಾತಂತ್ರ್ಯದ ಕಾರಣಕ್ಕಾಗಿಯೇ ಹೋರಾಡಿದ್ದರು. ಭಾರತವು ಸ್ವಾತಂತ್ರ್ಯ ಪಡೆಯಲು ಭಾರತಕ್ಕೆ ಸಹಾಯ ಮಾಡಿದ ಜರ್ಮನಿ, ಜಪಾನ್, ರಷ್ಯಾಗಳಂತಹ ದೇಶಗಳು ಬ್ರಿಟಿಷ್ ವಿರುದ್ಧ ಹೋರಾಡಲು ಮತ್ತು ಸ್ವಾತಂತ್ರ್ಯ ಪಡೆಯಲು ಬೋಸರಿಗೆ ಸಹಾಯ



ಮಾಡಲು ಸಿದ್ಧವಾಗಿದ್ದವು ಎಂದು ಭಾವಿಸಲಾಗಿವೆ. ಗಾಂಧಿಯವರು ಸ್ವಾತಂತ್ರ್ಯ ಪಡೆಯುವ ಬಗೆಗೆ ಒಂದೇ ಮಾರ್ಗದಲ್ಲಿದ್ದರು. ಆದರೆ ಬೋಸ್ ಸ್ವಾತಂತ್ರ್ಯಕ್ಕೆ ಸಶಸ್ತ್ರ ಹೋರಾಟವನ್ನೂ ಒಪ್ಪಿದ್ದರು. ಅವರ ಹೋರಾಟವು ವಿಫಲವಾದರೂ, ಭಾರತ ಸ್ವಾತಂತ್ರ ಪಡೆಯುವಲ್ಲಿ ಜನರನ್ನು ಉತ್ತೇಜಿಸಿ ತನ್ನದೇ ಆದ ಕೊಡುಗೆ ನೀಡಿದೆ ಎಂದು ಭಾವಿಸಲಾಗಿದೆ.

**ರಾಷ್ಟ್ರ ನಿರ್ಮಾಣದ ಜವಾಬ್ದಾರಿ**

ರಾಷ್ಟ್ರ ನಿರ್ಮಾಣದ ಜವಾಬ್ದಾರಿಯುತ ಸ್ಥಾನದಲ್ಲಿದ್ದು ರಾಷ್ಟ್ರಹಿತಕ್ಕೆ ಧಕ್ಕೆಯಾಗುವ ಯಾವುದೇ ವಿಷಯಗಳಲ್ಲಿ ದುರ್ಬಲನೀತಿ ಹೊಂದಿರಬಾರದೆಂಬ ಸುಭಾಷ್‌ರ ದಿಟ್ಟನಿಲುವಿನ ಪ್ರತಿಧ್ವನಿಯಾಗಿತ್ತು ಆ ಮಾತು. ಕಾಂಗ್ರೆಸ್‌ನ ಬಲಹೀನ ನಾಯಕತ್ವ, ದುರ್ಬಲ ಒಪ್ಪಂದಗಳು, ಸ್ವಾಭಿಮಾನ ಶೂನ್ಯ ವರ್ತನೆಗೆ ಪ್ರತಿಯಾಗಿ ಆತ್ಮಾಭಿಮಾನದ ಸ್ವರಾಜ್ಯಹೋರಾಟಕ್ಕೆ ಬಲತುಂಬಿದವರು ಸುಭಾಷರು.

ತಾನು ಕಷ್ಟಪಟ್ಟುಗಳಿಸಿದ್ದ ಐ.ಸಿ.ಎಸ್. ಪದವಿಯನ್ನೇ ತಿರಸ್ಕರಿಸಿ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದ ಬೋಸ್‌ರಿಗಿದ್ದ ರಾಜಕೀಯ ಚಿಂತನೆಯ ವೈಶಾಲ್ಯತೆ ಆ ಕಾಲಮಾನದ ಯಾರೊಬ್ಬರಲ್ಲೂ ಇರಲಿಲ್ಲ. ಆಸ್ಟ್ರಿಯಾ, ಇಂಗ್ಲೆಂಡ್, ಜರ್ಮನಿ, ಜಪಾನ್ ಸೇರಿದಂತೆ ಹತ್ತಾರು ರಾಷ್ಟ್ರಗಳಲ್ಲಿ ಮಿಂಚಿನ ಓಡಾಟ ನಡೆಸಿ ಭಾರತೀಯ ಸ್ವರಾಜ್ಯ ಹೋರಾಟದ ದನಿಗೆ ತೀವ್ರತೆ ತಂದಿದ್ದ ಬೋಸರು, ತಾನು ನಂಬಿದ್ದ ಕ್ರಾಂತಿಪಥದಲ್ಲಿ ಎಂದೂ ರಾಜಿಮಾಡಿದವರಲ್ಲ.

**ಸ್ವರಾಜ್ಯಪಕ್ಷ ಸ್ಥಾಪನೆ**

1927ರ ನವೆಂಬರ್‌ನಲ್ಲಿ ಬಂಗಾಳಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಆಯ್ಕೆಯಾದರು, ಆದರೆ ಗಾಂಧಿ ಪ್ರಣೀತ ಮಂದ ಮಾರ್ಗಕ್ಕಿಂತ ಸುಭಾಷ್‌ರದು ತೀರಾ ಭಿನ್ನ ಎಂಬುದು ಕ್ರಮೇಣವಾಗಿ ಗೊತ್ತಾಯಿತು. ಹತ್ತಾರು ಚಳುವಳಿಗೆ ನೇತೃತ್ವ, ಅಖಿಲಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಆಯ್ಕೆಯಾದರು. 1933, ಫೆಬ್ರವರಿ 23ರಂದು ಯೂರೋಪಿನಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟಪರ ಅಭಿಯಾನವನ್ನು ಆರಂಭಿಸಿದರು. ಇಂಗ್ಲೆಂಡ್, ಆಸ್ಟ್ರಿಯಾ, ಇಟಲಿಗೆ ಭೇಟಿ ನೀಡಿ, ತ್ವರಿತಗತಿಯ ಪ್ರವಾಸ, ಮಿಂಚಿನ ಓಡಾಟ ಮಾಡಿದರು. ಸ್ವಿಟ್ಜರ್ಲೆಂಡ್, ಚೆಕೋಸ್ಲೋವಾಕಿಯಾ, ಪೋಲೆಂಡ್, ಜರ್ಮನಿಗಳಲ್ಲಿ ಭಾರತದ ಪರ ಅಬ್ಬರದ ಪ್ರಚಾರ ಮಾಡಿದರು. ಇಟಲಿ ಪ್ರಧಾನಿ ಬೆನಿತೋ ಮುಸ್ಸೋಲಿನಿ ಜತೆ ಚರ್ಚೆಮಾಡಿ. 1936 ಏಪ್ರಿಲ್ 8ರಂದು ಮರಳಿ ಭಾರತಕ್ಕೆ ಬಂದ ನಂತರ ಬಂಧನವಾದರು. 1937ರಲ್ಲಿ ಮತ್ತೆ ಆಸ್ಟ್ರಿಯಾ ಪಯಣ.

ಕಾಂಗ್ರೆಸ್‌ನ ಡೋಲಾಯಮಾನ ನೀತಿಗಳಿಗೆ ಬೇಸತ್ತು ಚಿತ್ತರಂಜನ್‌ದಾಸ್‌ರಿಂದ 'ಸ್ವರಾಜ್ಯಪಕ್ಷ ಸ್ಥಾಪನೆ ಮಾಡಿದರು. ಬೋಸ್‌ರು ದಾಸ್‌ರ ಜತೆಗೆ ಚಟುವಟಿಕೆಗಳಲ್ಲಿ ಭಾಗಿಯಾಗಿ 1923ರ ಅಕ್ಟೋಬರ್‌ನಿಂದ ದಾಸ್‌ರು ಸ್ಥಾಪಿಸಿದ್ದ 'ಫಾರ್ವರ್ಡ್' ದಿನಪತ್ರಿಕೆಯ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿಕೊಂಡರು. 1925ರ ಜೂನ್ 16, ದಾಸ್‌ರ ನಿಧನ, ಕ್ರಾಂತಿಕಾರಿ ಚಟುವಟಿಕೆಗಳಿಗಾಗಿ ಬೋಸ್‌ರ ಬಂಧನ, ಬಿಡುಗಡೆಯಾಯಿತು.

**ರಾಜಕೀಯ ಅನುಭವ**

ಕಾಂಗ್ರೆಸ್‌ನ ಅಖಿಲಭಾರತ ಅಧಿವೇಶನದ ಅಧ್ಯಕ್ಷತೆ 1938ರ ಫೆಬ್ರವರಿ 19ರಂದು, ಹರಿಪುರದಲ್ಲಿ ನಡೆಯಿತು. ವಿದೇಶಿ ನೆಲಗಳ ಓಡಾಟದಿಂದ ಪಡೆದ ರಾಜಕೀಯ ಅನುಭವ–ಒಳನೋಟಗಳಿಂದ ಬ್ರಿಟಿಷರ ಒಡೆದು ಆಳುವನೀತಿ ಕುರಿತ ಐತಿಹಾಸಿಕ ಭಾಷಣ, ದೇಶ ವಿಭಜನೆಯ ಬ್ರಿಟಿಷರ ತಂತ್ರದ ಸೂಚನೆ. ಮುಂದಿನ 9 ವರ್ಷದಲ್ಲೇ ಸತ್ಯವಾದ ಬೋಸ್ ಭವಿಷ್ಯವಾಣಿ! ಆರೆಸ್ಸೆಸ್‌ನ 'ಸಂಘ ಶಿಕ್ಷಾವರ್ಗ' ಶಿಬಿರಕ್ಕೆ 1938ರಲ್ಲಿ ಭೇಟಿಗೆ ಒಪ್ಪಿಗೆ ನೀಡಿದರು, ಸಂಘದ ಧ್ಯೇಯ – ಅನುಶಾಸನ ಕಾರ್ಯಪದ್ಧತಿ ಕುರಿತ ಶ್ಲಾಘನೆ ಮಾಡಿದರು, ಆದರೆ ಕಾರಣಾಂತರಗಳಿಂದ ಭೇಟಿ ಸಾಧ್ಯವಾಗಲಿಲ್ಲ.

ಕಾಂಗ್ರೆಸ್ ಅಧ್ಯಕ್ಷಗಾದಿಗೆ ನಡೆದ ಮೊತ್ತಮೊದಲ ಚುನಾವಣೆಯಲ್ಲಿ ಡಾ॥ ಪಟ್ಟಾಭಿ ಸೀತಾರಾಮಯ್ಯರ ವಿರುದ್ಧ 215 ಮತಗಳ ಗೆಲುವು! ಸಾಧಿಸಿದರು. ಸುಭಾಷ್ ವಿರುದ್ಧ ಹಲವಾರು ಟೀಕೆಗಳು, ಅನಗತ್ಯ ಋಣಾತ್ಮಕ ಮಾತುಗಳು ಗಾಂಧೀಜಿಯಿಂದ ಕೇಳಿಬಂದವು. ಸ್ವಾತಂತ್ರ್ಯದ ಮೋಡಗಳು ಸಮೀಪ ಇರುವಂತೆಯೇ ಬ್ರಿಟಿಷ್ ಸರ್ಕಾರದ ಜತೆ ದುರ್ಬಲ ಕಾಂಗ್ರೆಸ್‌ನ ತಾರ್ಕಿಕ ನಡೆಗಳಿಂದ ಬೇಸತ್ತು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದರು. ॐ

Printed by Arvind, Published Edited and Owned by Dr. D.C. Ramachandra, No.66, Doddasomanahalli, Magadi Tq, Ramanagar Dist. and Printed at Computer World, Near G.T. Mall, Mallige Thota, Magadi Road, Bengaluru - 560 023. **Editor: Dr. C. Nanjundaiah.**

|| JAI SRI GURUDEV ||

Sri Adichunchanagiri Shikshana Trust (R)

# ADHICHUNCHANAGIRI INSTITUTE OF TECHNOLOGY





Jyothi Nagara, Chikkamagaluru - 577102 | www.aitckm.in

(Affiliated to Visvesvaraya Technological University, Belagavi)
Approved by **AICTE New Delhi** and Recognized by Govt. of Karnataka.

**ACCREDITED BY NAAC, TWICE ACCREDITED BY NBA**



# HAPPY NEW YEAR 2023

We are Proud to represent AIT-Chikkamagaluru in

## "SUPER 30"

Engineering Colleges Govt, of Karnataka initiative to build model Engineering College

# ADMISSIONS OPEN FOR 2022-23

## Courses Offered

**B.E.COURSES** (Under Graduate )

1. Artificial Intelligence and Machine Learning
2. Civil Engineering
3. Computer Science and Engineering
4. Electrical and Electronics Engineering
5. Electronics and Communication Engineering
6. Information Science and Engineering
7. Mechanical Engineering
8. Computer Science and Engineering(Data Science)

**MASTER DEGREE COURSES** (Post Graduate )

1. Thermal Power Engineering **(Mech. Engg.,)**
2. Machine Design **(Mech. Engg.,)**
3. Structural Engineering **(Civil. Engg.,)**
4. Computer Science and Engineering **(CS & Engg.,)**
5. Power System Engineering **(E & E Engg.,)**
6. Digital Electronics and Communication System **(E & C Engg.,)**
7. MBA **(Master of Business Administration)**

## Salient Features

1. 8 VTU Ranks during the year 2020-21
2. Over 200 University Ranks
3. High Ambience with Blessed Nature
4. Committed & Supportive Management
5. State of the art Infrastructure and laboratories
6. Transportation Facility
7. Placement Training & 100% Placement Assistance
8. Curricular, Co-Curricular & Extra Curricular Activities
9. Excellent Library, Computer Lab with Internet Facility
10. Encouragement is given to merit students in the form of the Cash Awards & Gold Medals
11. Close to 100% Results Every Year
12. Sprawling Campus of 60 acres
13. Well Experienced and Qualified Faculty
14. High Speed Internet Wi-Fi Facility
15. Collaboration with Reputed Industries & Educational Institutes

## Training and Placement - 2022 Batch Highlights

| | | | |
|---|---|---|---|
| 40+ Campus Placement Drives | 530+ Job Offers | Minimum Package 3.5 LPA | Highest Package 11.79 LPA |

MASTER DEGREE COURSES (M.Tech)
**CET Code - T803**

MBA (Master of Business Administration)
**CET Code - B109**

B.E. COURSES (Under Graduate)
**CET Code - E064, COMEDK Code - E004**

## Our Top Recruiter

cognizant accenture NTT DATA tcs TATA CONSULTANCY SERVICES NTT Mindtree HCL ZenSar wipro Deloitte. Infosys SCII

**Dr. C.T. JAYADEVA, Principal**

For More Details Contact: Tel: 08262-220444, +91 94486 65711, +91 94484 80343, +91 91411 33697
Email : office@aitckm.in, ait_ckm@rediffmail.com

Registered with Registrar of News Papers for India No.KARKAN/2018/76081, **Sampreethi Samruddhi,** Jan - 2023.
License to post without prepayment. License No.**KA/BG/CNA/119/2022-2024,**
Date of publication: **28.12.2022.** Posted at **Magadi Sub Post Office-562120** on **29th** of every month


# ಗಾಂಧಿ ವೃದ್ಧಾಶ್ರಮ



ಕಡಬಗೆರೆ ಕ್ರಾಸ್ ಮಾಗಡಿ ಮುಖ್ಯರಸ್ತೆಯ SBI Bank ಹತ್ತಿರ 2001 ರಿಂದ ಗಾಂಧಿ ವೃದ್ಧಾಶ್ರಮವನ್ನು ಸ್ಥಾಪಿಸಿ ಸನ್ಮಾನ್ಯ ಶ್ರೀ. ಸಿ. ಉಗ್ರಯ್ಯನವರು ನಡೆಸಿಕೊಂಡು ಬರುತ್ತಿದ್ದಾರೆ. ಆಶ್ರಮದಲ್ಲಿ ಹೆಂಗಸರು & ಗಂಡಸರು ಸುಮಾರು 100 ಜನ ವಯೋವೃದ್ಧರು, ನಿರಾಶ್ರಿತರು, ನಿರ್ಗತಿಕರು, ಅಂಗವಿಕಲರು ಕೆಲವು ಸಾರ್ವಜನಿಕ ಮತ್ತು ಖಾಸಗಿ ಉದ್ಯಮಿಗಳಲ್ಲಿ ದುಡಿದವರನ್ನು ಸಲಹುತ್ತಿದ್ದಾರೆ. ಇವರಿಗೆ ಯಾವುದೇ ನಿವೃತ್ತಿ ವೇತನವಿಲ್ಲದೆ ಆಶ್ರಮದಲ್ಲಿ ಮುಪ್ಪಿನ ಜೀವನ ಕಳೆಯುತ್ತಿದ್ದಾರೆ. ಇದುವರೆಗೂ ಗಾಂಧಿ ವೃದ್ಧಾಶ್ರಮವು ಅನೇಕ ಸಂಘಸಂಸ್ಥೆಗಳು ಮತ್ತು ಸಾರ್ವಜನಿಕರ ಸಹಾಯದಿಂದ ನಡೆದುಕೊಂಡು ಬರುತ್ತಿದೆ. ಇಲ್ಲಿಗೆ ಬಂದು ಸೇರುವವರೆಲ್ಲರೂ ಕಡುಬಡವರು, ಸಂಸಾರದಲ್ಲಿ ನೊಂದವರು, ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ.

**ಗಾಂಧಿ ವೃದ್ಧಾಶ್ರಮದಲ್ಲಿ ವೃದ್ಧರಿಗೆ ಸಿಗುವ ಅನುಕೂಲಗಳು:- ಬೆಳಗ್ಗೆ 7 ಗಂಟೆಗೆ ಕಾಫಿ ಟೀ, & ಹಾಲು, 9 ಗಂಟೆಗೆ ತಿಂಡಿ, ಮಧ್ಯಾಹ್ನ 1 ಗಂಟೆಗೆ ಊಟ, ಸಂಜೆ 4 ಗಂಟೆಗೆ ಕಾಫಿ, ಟೀ, ಲಘುಉಪಹಾರ, ರಾತ್ರಿ 7ಗಂಟೆಗೆ ಭೋಜನ ವ್ಯವಸ್ಥೆ ಇರುತ್ತದೆ. ಮತ್ತು ಇವರಿಗೆ ವಿಶಾಲವಾದ ಅಡಿಗೆ ಕೋಣೆ ಮತ್ತು ಊಟ ಮಾಡಲು ಭೋಜನ ಶಾಲೆ ಇದೆ.** ಆಶ್ರಮದಲ್ಲಿ ಶ್ರೀ ಬಾಲಗೋಪಾಲಗಣಪತಿ & ಸಂಜೀವಿನಿಆಂಜನೇಯಸ್ವಾಮಿ ಮತ್ತು ಶ್ರೀ ಶಿರಡಿಸಾಯಿಬಾಬಾ ಮಂದಿರಗಳಿದ್ದು ದಿನನಿತ್ಯ ಪೂಜೆ ಪುರಸ್ಕಾರಗಳು, ಪ್ರದರ್ಶನ ಮಾಡಿ ಪ್ರಸಾದ ವಿನಿಯೋಗ ಮಾಡಲಾಗುತ್ತದೆ. ಇವರ ಜೊತೆ ಸಾರ್ವಜನಿಕರು, ಧಾನಿಗಳು, ಅಕ್ಕಪಕ್ಕದ, ನಿವಾಸಿಗಳು ಸಹ ಬರುತ್ತಾರೆ.

ಗಾಂಧಿ ವೃದ್ಧಾಶ್ರಮವು ವೃದ್ಧರಿಗಾಗಿ ಉಚಿತ ವೈದ್ಯಕೀಯ ಸೌಲಭ್ಯ, ಅಂಗವಿಕಲರಿಗೆ ವೀಲ್‌ಚೇರ್, ವಾಕರ್, ವಾಕಿಂಗ್ ಸ್ಟಿಕ್, ಹಾಸಿಗೆ ಹಿಡಿದವರಿಗೆ ಹೇರ್ ಬೆಡ್, ಡೈಪರ್. ಮತ್ತು ಪ್ರತಿನಿತ್ಯ 24X7 ನರ್ಸಿಂಗ್ ಕೇರ್ & ಆಬ್ಯುಲೆನ್ಸ್ ವ್ಯವಸ್ಥೆ ಇದ್ದು ನುರಿತ ವೈದ್ಯರಿಂದ ವಾರಕೆರಡು ದಿವಸ ತಪಾಸಣೆ ನಡೆಸಲಾಗುತ್ತದೆ. ಅಸ್ವಸ್ಥರಾದವರನ್ನು ಹತ್ತಿರದ ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲಿಸಿ ಸೂಕ್ತ ಔಷದ ಮತ್ತು ಊಟ ಉಪಚಾರಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ಸಾರ್ವಜನಿಕರಲ್ಲಿ ಕೇಳಿಕೊಳ್ಳುವುದೇನೆಂದರೆ ಕೋವಿಡ್ 19 ನಿಂದ ದಾನಿಗಳ ಸಂಖ್ಯೆ ಬಹಳ ಕಡಿಮೆಯಾಗಿರುವುದರಿಂದ ವೃದ್ಧರ ಸಂಖ್ಯೆ ಹೆಚ್ಚಾಗಿದ್ದು ವೃದ್ಧರಿಗೆ ದಿನನಿತ್ಯದ ಅವಶ್ಯಕತೆಗಳನ್ನು ಈಡೇರಿಸಲು ಸಾಧ್ಯವಾಗುತ್ತಿಲ್ಲ, ಆದ್ದರಿಂದ ಸಾರ್ವಜನಿಕರು ನಮ್ಮ ಆಶ್ರಮದಕ್ಕೆ ಭೇಟಿ ಕೊಟ್ಟು ಆಶ್ರಮಕ್ಕೆ ಬೇಕಾದ ದವಸ, ಧಾನ್ಯ, ತರಕಾರಿ, ಔಷಧಿ, ಡೈಪರ್, ಇತ್ಯಾದಿ ವಸ್ತುಗಳನ್ನು ಅಥವಾ ಚೆಕ್ ಅಥವಾ ಆನ್‌ಲೈನ್ ಮಾಡಬಹುದು.

**ಇದುವರೆಗೂ ರಾಜ್ಯಸರ್ಕಾರದಿಂದಾಗಲಿ ಮತ್ತು ಕೇಂದ್ರ ಸರ್ಕಾರಿದಿಂದಾಗಲಿ ಯಾವುದೇ ಅನುದಾನ ಇಲ್ಲದೆ ಸಾರ್ವಜನಿಕರ ದೇಣಿಗೆಯಿಂದ ನಡೆಯುತ್ತಿದ್ದು ಇವರಿಗೆ ಆದಾಯ ತೆರಿಗೆ 12A, 80G, CSR ವಿನಾಯಿತಿ ದೊರೆಯುತ್ತದೆ.**

Email Id:- gandhioldagehome19@gmail.com
Website:- www.gandhioldagehome.com
Contact No :- 9243123730, C. Ugraiah, ಕಾರ್ಯದರ್ಶಿಗಳು





To,

If undelivered please return to :
The Editor
**Sampreethi Sadan**
Govt. Hospital Parallel Road,
Magadi Town, Magadi - 562120